# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 15–11–2010 ರಂದು ನಡೆದ ಸಭೆಯ ನಡವಳಿಗಳು

| **ಹಾಜರಿದ್ದ ಸದಸ್ಯರುಗಳು** | **ಹಾಜರಿದ್ದ ಅಧಿಕಾರಿಗಳು** |
|---|---|
| **ಶ್ರೀಯುತರುಗಳಾದ :** | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಎನ್.ವೀರಣ್ಣ – ಸದಸ್ಯರು | ಉಪ ಆಯುಕ್ತರು)/(ಆಸ್ತಿಗಳು)/(ಆಡಳಿತ) |
| ಜಿ.ಮಂಜುನಾಥ ರಾಜು – ಸದಸ್ಯರು | ಮುಖ್ಯ ಅಭಿಯಂತರರು (ಘನತ್ಯಾಜ್ಯ)/(ಮೂಲ ಭೂತಸೌಕರ್ಯ) |
| ಎಂ.ಜಿ.ಜಯರತ್ನ – ಸದಸ್ಯರು | ವಿಶೇಷ ಭೂಸ್ವಾಧೀನ ಅಧಿಕಾರಿಗಳು |
| ಶಕೀಲಾ.ಎಂ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಮೂಲಭೂತ ಸೌಕರ್ಯ) |
| ಟಿ.ಎ.ಗಾಯಿತ್ರಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) |
| | ಕಂದಾಯಾಧಿಕಾರಿ (ಗೋವಿಂದರಾಜ ನಗರ) |
| **ಗೈರು ಹಾಜರಿದ್ದ ಸದಸ್ಯರು** | ವಿದ್ಯಾಧಿಕಾರಿ |
| ಕೆ.ಚಂದ್ರಶೇಖರ್ – ಸದಸ್ಯರು | ಸಹಾಯಕ ವಿದ್ಯಾಧಿಕಾರಿ |
| | ತಾಂತ್ರಿಕ ಸಹಾಯಕರು (ಘನತ್ಯಾಜ್ಯ) |
| | ದೈಹಿಕ ಶಿಕ್ಷಣಾಧಿಕಾರಿ |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

***<u>01]. ವಿಷಯದ ಸಂಖ್ಯೆ :–ತೆಆಸ್ಥಾಸ/ 14/2010–11</u>***

ಆಯುಕ್ತರವರ ಟಿಪ್ಪಣಿ ದಿನಾಂಕ : 06–08–2010. ರಲ್ಲಿ ವಿವರಿಸಿರುವಂತೆ, ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000 ದಂತೆ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುವನ್ನು ಮೂಲದಿಂದಲೇ ಅಂದರೆ ಮನೆಮನೆಗಳಿಂದ ಮತ್ತು ಇತರೆ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ನಿಯಮಾನುಸಾರ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ 2008–09ನೇ ಸಾಲಿನಲ್ಲಿ ಈ ಕೆಳಕಂಡಂತೆ ವಾರ್ಷಿಕ ಸುಮಾರು 200 ಕೋಟಿಯಷ್ಟು ಮೊತ್ತವನ್ನು ವೆಚ್ಚ ಮಾಡಿದ್ದು ಈ ಮೊತ್ತವು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ.

2008–09 ಹಾಗೂ ಸಾಲಿನಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ತಗುಲಿರುವ ವೆಚ್ಚ

| **ಕ್ರ.ಸಂ** | **ವಿವರಣೆ** | **2008–09ನೇ ಸಾಲಿನಲ್ಲಿ ವೆಚ್ಚವಾಗಿರುವ ಮೊತ್ತ (ರೂ ಕೋಟಿಗಳಲ್ಲಿ)** |
|---|---|---|
| 1 | ಆಡಳಿತ ಮತ್ತು ಪೌರಕಾರ್ಮಿಕರ ಸಂಬಳ | 88.15 |
| 2 | ಗುತ್ತಿಗೆದಾರರಿಗೆ ಪಾವತಿಸಿರುವ ಮೊತ್ತ | 111.55 |
| 3 | ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಾಣ | 4.39 |
| 4 | ವೈಜ್ಞಾನಿಕ ತ್ಯಾಜ್ಯ ವಿಲೇವಾರಿ | 5.84 |

**ಒಟ್ಟು** **209.92**



ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000ರಂತೆ ಸದರಿ ವೆಚ್ಚವನ್ನು ಭರಿಸಲು ತ್ಯಾಜ್ಯ ಉತ್ಪಾದಕರಿಂದ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡಲು ಸೂಚಿಸಿರುತ್ತದೆ. ಈ ಬಗ್ಗೆ ಈಗಾಗಲೇ ಕರ್ನಾಟಕ ಮುನಿಸಿಪಲ್ ಕಾಯ್ದೆಯ ಸೆಕ್ಷನ್ 103 (ಬಿ) ಅನ್ವಯ ಮಾಸಿಕ ಈ ಕೆಳಕಂಡ ಉಪಕರ ದರಗಳನ್ನು ನಿಗಧಿಪಡಿಸಲಾಗಿರುತ್ತದೆ.

**I. ವಾಸದ ಕಟ್ಟಡಗಳಿಗೆ**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 10 |
| 1000 ಚ.ಅ ಗಿಂತ ಹೆಚ್ಚು ಅಥವಾ 3000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 30 |
| 3000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | – ರೂ. 50 |

**I. ವಾಣಿಜ್ಯ ಕಟ್ಟಡಗಳಿಗೆ**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 50 |
| 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 100 |
| 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | – ರೂ. 200 |

**II. ಕೈಗಾರಿಕ ಕಟ್ಟಡಗಳು**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 100 |
| 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 200 |
| 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | – ರೂ. 300 |

**III.ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಮ್**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 300 |
| 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 500 |

5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ – ರೂ. 600



ಸದರಿ ಮೊತ್ತದ ಅನ್ವಯ ಉಪಕರ ನಿಗಧಿಪಡಿಸಿದಲ್ಲಿ, ಘನತ್ಯಾಜ್ಯ ವಸ್ತು ನಿರ್ವಹಣೆಗೆ ವೆಚ್ಚ ಮಾಡುವ ಮೊತ್ತದಲ್ಲಿ ಸ್ವಲ್ಪ ಪ್ರಮಾಣವನ್ನು ಕಡಿಮೆಗೊಳಿಸಬಹುದು. 2008–09ನೇ ಸಾಲಿನಿಂದ ವಾಣಿಜ್ಯ ಕಟ್ಟಡಗಳಿಗೆ ಉದ್ದಿಮೆ ಪರವಾನಗಿ ನೀಡುವಾಗ ನಿಗಧಿಸಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡುತ್ತಿದ್ದು, ಇತರೆ ಕಟ್ಟಡಗಳಿಂದ ವಸೂಲಾತಿ ಮಾಡುತ್ತಿರುವುದಿಲ್ಲ.

ಘನತ್ಯಾಜ್ಯ ವಸ್ತು ನಿರ್ವಹಣೆಯ ಉಪಕರವನ್ನು ಈಗಾಗಲೇ ಕರ್ನಾಟಕದ ಎಲ್ಲಾ ನಗರ ಪಾಲಿಕೆ ಮತ್ತು ನಗರ ಸಭೆಗಳಲ್ಲಿ 2005 ರಿಂದಲೇ ವಸೂಲಾತಿ ಮಾಡುತ್ತಿದ್ದು, ಜವಹಾರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ (ಜೆ.ಎನ್.ಎನ್.ಯು.ಆರ್.ಎಂ) ರಡಿಯಲ್ಲಿ ಕೂಡ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪಾಲಿಕೆಯು ಘನತ್ಯಾಜ್ಯ ವಸ್ತು ನಿರ್ವಹಣೆಯ ಉಪಕರವನ್ನು ಪ್ರತಿ ತಿಂಗಳು ಎಲ್ಲಾ ಕಟ್ಟಡಗಳಿಂದ ವಸೂಲಿ ಮಾಡಲು ಕಷ್ಟವಾಗುವುದರಿಂದ ಇದನ್ನು ಆಸ್ತಿ ತೆರಿಗೆಯ ಮೂಲಕ ವಸೂಲಾತಿ ಮಾಡಲು ಕ್ರಮಕೈಗೊಳ್ಳಲು ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

**02]. ವಿಷಯದ ಸಂಖ್ಯೆ :–ತೆಆಸ್ಥಾಸ/ 27/2010–11**

ಆಯುಕ್ತರವರ ಟಿಪ್ಪಣಿ ದಿನಾಂಕ : 29–08–2010. ರಲ್ಲಿ ವಿವರಿಸಿರುವಂತೆ, ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ತಮ್ಮ ಕಛೇರಿಯಲ್ಲಿ ದಿನಾಂಕ : 27–7–2010 ರಂದು ಕಾರ್ಯಪಾಲಕ ಅಭಿಯಂತರರು (ಮೂಲಭೂತ ಸೌಕರ್ಯ) ಮತ್ತು ಉಪ ಆಯುಕ್ತರು (ಭೂ ಸ್ವಾಧೀನ ಮತ್ತು ಟಿ.ಡಿ.ಆರ್), ಸಹಾಯಕ ಕಾರ್ಯಪಾಲಕ ಅಭಿಯಂತರರು (ಮೂಲಭೂತ ಸೌಕರ್ಯ) ರವರುಗಳೊಂದಿಗೆ ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಸ್ವತ್ತುಗಳಿಗೆ ನೀಡಬೇಕಾದ ಪರಿಹಾರ ಮೊತ್ತ ಎಷ್ಟು ಎಂಬುದರ ಬಗ್ಗೆ ಈ ಕೆಳಗಿನಂತೆ ಸುದೀರ್ಘವಾಗಿ ಚರ್ಚಿಸಲಾಯಿತು.

ದಿನಾಂಕ: 09–12–2009 ರ ಮಾನ್ಯ ಆಡಳಿತಾಧಿಕಾರಿಗಳ ನಿರ್ಣಯದ ವಿಷಯ ಸಂಖ್ಯೆ: 387/2009–10 ರಲ್ಲಿ ಕದಿರೇನಹಳ್ಳಿ ಕೆಳಸೇತುವೆಯ ನಿರ್ಮಾಣಕ್ಕೆ ಮತ್ತು ಸರ್ವೀಸ್ ರಸ್ತೆ ಅಗಲೀಕರಣಕ್ಕೆ ಭೂ ಸ್ವಾಧೀನ ಕಾಯ್ದೆಯನ್ವಯ ಪ್ರಕ್ರಿಯೆಯು ವಿಳಂಬವಾಗುತ್ತದೆ ಎಂಬ ಕಾರಣಕ್ಕಾಗಿ ಟಿ.ಡಿ.ಆರ್. ಯೋಜನೆಯಡಿಯಲ್ಲಿ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು, ನಂತರ ಈ ಸ್ವತ್ತುಗಳನ್ನು ಸಂಬಂಧಪಟ್ಟ ಮಾಲೀಕರಿಂದ ನಗದು ಪರಿಹಾರ ನೀಡಿ ಖರೀದಿ ಮಾಡಲು (TDR Buy-Back) ಯೋಜನೆಯನ್ನು ಈ ಒಂದು ಕಾಮಗಾರಿಗೆ ಸೀಮಿತವಾಗಿ ಅನುಮೋದನೆ ನೀಡಲಾಗಿರುತ್ತದೆ. ಇದಕ್ಕಾಗಿ ತಗಲುವ 3,45,03,376/– ರೂಗಳ ಭೂಸ್ವಾಧೀನ ಪರಿಹಾರ ವೆಚ್ಚ ಮತ್ತು ಇದಕ್ಕೆ ಸಂಬಂಧಿಸಿದಂತೆ ಡಿ.ಆರ್.ಸಿ.ಗಳನ್ನು ನೋಂದಣಿ ಮಾಡಲು ತಗಲುವ ವೆಚ್ಚವನ್ನು ಸಹ ಕಾಮಗಾರಿಯ ಅಂದಾಜು

ವೆಚ್ಚದಿಂದ ಭರಿಸಲು ಸಹ ಅನುಮೋದನೆ ನೀಡಲಾಗಿದೆ. ಭೂಪರಿಹಾರವನ್ನು ಸರ್ಕಾರದ ಕಂದಾಯ ಇಲಾಖೆಯ ಮಾರ್ಗ ಸೂಚಿ ಬೆಲೆ ಆಧಾರದಲ್ಲಿ ಹಾಗೂ ಕಟ್ಟಡಗಳ ಮೌಲ್ಯವನ್ನು ಸಹ ಇದೇ ಮಾರ್ಗ ಸೂಚಿಗಳನ್ವಯ ಲೆಕ್ಕಹಾಕಲು ನಿರ್ಣಯಿಸಲಾಗಿದೆ.



ಈ ನಿರ್ಣಯದಂತೆ ಸ್ವತ್ತಿನ ಮಾಲೀಕರುಗಳಿಗೆ, ತಿಳುವಳಿಕೆ ಪತ್ರಗಳನ್ನು ನೀಡಿ ಸ್ವತ್ತುಗಳನ್ನು ಟಿ.ಡಿ.ಆರ್. ಯೋಜನೆಯಡಿಯಲ್ಲಿ ಬಿಟ್ಟುಕೊಡುವಂತೆ, ಹಾಗೂ ಈ ಡಿ.ಆರ್.ಸಿಯನ್ನು ಪಾಲಿಕೆಗೆ ಅಧ್ಯರ್ಪಣೆ ಮಾಡಿ ಮೇಲ್ಕಂಡಂತೆ ನಿಗದಿಪಡಿಸಲಾದ ಪರಿಹಾರ ಹಣವನ್ನು ಪಡೆದುಕೊಳ್ಳುವಂತೆ ತಿಳುವಳಿಕೆ ಪತ್ರಗಳನ್ನು ನೀಡಲಾಗಿತ್ತು. ಆದರೆ, ಬಹುತೇಕ ಸ್ವತ್ತುಗಳ ಮಾಲೀಕರು ತಮಗೆ ಸರ್ಕಾರದ ಮಾರ್ಗಸೂಚಿ ದರದಲ್ಲಿ ಮತ್ತು ಹೆಚ್ಚುವರಿ ಶೇ. 30 ರಷ್ಟು ಲೆಕ್ಕಹಾಕಿ ನೀಡಿರುವ ಪರಿಹಾರದ ಹಣ ಮಾರುಕಟ್ಟೆ ಬೆಲೆಗಿಂತ ಕಡಿಮೆ ಇರುವ ಕಾರಣ ಸ್ವತ್ತುಗಳನ್ನು ಟಿ.ಡಿ.ಆರ್. ಯೋಜನೆಯಡಿಯಲ್ಲಿ ಬಿಟ್ಟುಕೊಡಲು ಸಿದ್ಧರಿಲ್ಲವೆಂದು ತಕರಾರು ಅರ್ಜಿಗಳನ್ನು, ಆಕ್ಷೇಪಣೆಗಳನ್ನು ನೀಡಿರುತ್ತಾರೆ. ಈ ಬಗ್ಗೆ ಸ್ವತ್ತಿನ ಮಾಲೀಕರನ್ನು ಅನೇಕ ಬಾರಿ ಸಭೆ ಕರೆದು ಮನವೊಲಿಸಲಾಗಿದ್ದರೂ ಸಹ ಪದೇ ಪದೇ ಆಕ್ಷೇಪಣೆಗಳನ್ನು ಮಾಡಿ ಯಾರೂ ಸಹ ಸರ್ಕಾರದ ಮಾರ್ಗಸೂಚಿ ಬೆಲೆ ಮತ್ತು ಶೇ. 30 ರಷ್ಟು ಹಣದ ಪರಿಹಾರಕ್ಕೆ ಒಪ್ಪಿಕೊಂಡು ತಮ್ಮ ಸ್ವತ್ತುಗಳನ್ನು ಬಿಟ್ಟುಕೊಡಲು ಒಪ್ಪಿರುವುದಿಲ್ಲ. ಇದರಿಂದಾಗಿ ಈ ಕಾಮಗಾರಿಯ ಪ್ರಗತಿಯು ಕುಂಠಿತವಾಗಿದ್ದು, ಕಂಟ್ರಾಕ್ಟರ್ ರವರಿಗೆ ನಿಗದಿಪಡಿಸಿರುವ ಸಮಯವನ್ನು ಸಹ ವಿಸ್ತರಣೆ ಮಾಡುವ ಅಗತ್ಯತೆ ಉಂಟಾಗಿರುತ್ತದೆ. ಇದರಿಂದಾಗಿ ಪಾಲಿಕೆಗೆ ಹೆಚ್ಚುವರಿ ಹಣವನ್ನು ಕಂಟ್ರಾಕ್ಟರ್‌ಗೆ ಕೊಡುವಂತಹ ಪರಿಸ್ಥಿತಿ ಉಂಟಾಗಿರುತ್ತದೆ.

ಸಕಾರದ ಆದೇಶ ಸಂಖ್ಯೆ : ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಸೂಚನೆ ಸಂ : ಸಿವಿಸಿ/ಬಿ.ಯು.ಡಿ/5/2006-07 ಬೆಂಗಳೂರು, ದಿನಾಂಕ : 17-4-2007 ನಿಗದಿಪಡಿಸಿಲಾಗಿರುವ ಮಾರ್ಗಸೂಚಿ ದರಗಳ ಪಟ್ಟಿಯಲ್ಲಿ ಕದಿರೇನಹಳ್ಳಿ ಸರ್ವೆ ನಂ. ವ್ಯಾಪ್ತಿಯ ಬಿಡಿಎ/ಬಿಡಿಎ ಅನುಮೋದಿತ ಬಡಾವಣೆಗಳಿಗೆ ಚದರ ಅಡಿಗೆ ರೂ. 1200/- ದರ,

ಕರೀಸಂದ್ರ ಸರ್ವೆ ನಂ. ವ್ಯಾಪ್ತಿಯ ಬಿಡಿಎ/ಬಿಡಿಎ ಅನುಮೋದಿತ ಬಡಾವಣೆಗಳಿಗೆ ಚದರ ಅಡಿಗೆ ರೂ.1300/-, ಕದಿರೇನಹಳ್ಳಿ ಸ್ಲಂ ಪ್ರದೇಶಕ್ಕೆ ಚದರ ಅಡಿಗೆ ರೂ.1250/-, ಗೃಹ ನಿರ್ಮಾಣ ಸಹಕಾರ ಸಂಘಗಳ ಬಡಾವಣೆಗೆ ಚದರ ಅಡಿಗೆ ರೂ.1300/- ಈ ರೀತಿ ಬೇರೆ ಬೇರೆ ದರಗಳನ್ನು ನಿಗದಿಪಡಿಸಿಲಾಗಿದೆ. ಕದಿರೇನಹಳ್ಳಿ ಕೆಳಸೇತುವೆಯ ಸರ್ವೀಸ್ ರಸ್ತೆ ನಿರ್ಮಾಣಕ್ಕೆ ವಶಪಡಿಸಿಕೊಳ್ಳಲಾಗುತ್ತಿರುವ ಸ್ವತ್ತುಗಳು ಕದಿರೇನಹಳ್ಳಿ, ಕರೀಸಂದ್ರ ಸರ್ವೆ ನಂಬರುಗಳಿಗೆ ಸೇರಿದ್ದು, ವಾಸ್ತವವಾಗಿ ಹಾಲಿ ಇರುವ 100 ಅಡಿ ರಸ್ತೆಯ ಎಡ ಮತ್ತು ಬಲ ಭಾಗದಲ್ಲಿ ತಾಗಿಕೊಂಡಿರುತ್ತವೆ. ಈ ರೀತಿ 100 ಅಡಿ ಅಂತರದಲ್ಲಿ ಇರುವಂತಹ ಸ್ವತ್ತುಗಳಿಗೆ ಕಂದಾಯ ಇಲಾಖೆಯ ಮಾರ್ಗಸೂಚಿ ದರಗಳ ಆಧಾರದಲ್ಲಿ ಕಂದಾಯ ಗ್ರಾಮಗಳ ಅನುಸಾರ ನಿಗದಿಪಡಿಸಲಾದ ಮಾರ್ಗಸೂಚಿ ದರವನ್ನು ಪಾವತಿಸಿದಲ್ಲಿ ಒಬ್ಬರಿಗೆ ಮತ್ತೊಬ್ಬರಿಗೆ ನಿಗದಿಪಡಿಸಲಾದ ಪರಿಹಾರದ ಹಣದಲ್ಲಿ ವ್ಯತ್ಯಾಸಗಳು ಉಂಟಾಗುವ ಸಾಧ್ಯತೆ ಇದೆ. ಇದರಿಂದಾಗಿ ಸುಮಾರು ಮೂರು, ನಾಲ್ಕು ಲಕ್ಷಗಳ ವರೆಗೆ ಪರಿಹಾರದ ಹಣ ಪಾವತಿಯಲ್ಲಿ ವ್ಯತ್ಯಾಸ ಉಂಟಾಗುವ

ಸಾಧ್ಯತೆಯಿದೆ. ಇದರಿಂದಾಗಿ ಒಂದೇ ಕಡೆ ಇರುವ ಸ್ವತ್ತಿನ ಮಾಲೀಕರು ಬೇರೆ ಬೇರೆ ದರಗಳಲ್ಲಿ ಪರಿಹಾರದ ಹಣವನ್ನು ಪಡೆಯಲು ಆಕ್ಷೇಪ ಮಾಡುತ್ತಿದ್ದು, ಕಾಮಗಾರಿಯ ಅನುಷ್ಠಾನಕ್ಕೆ ತೊಂದರೆ ಉಂಟಾಗುತ್ತಿದೆ. ಈ ಅಸಮಾನತೆಯನ್ನು ನಿವಾರಿಸಿ ಏಕ ರೂಪದ ಪರಿಹಾರದ ಹಣವನ್ನು ನಿಗದಿಪಡಿಸುವ ಅವಶ್ಯಕತೆ ಕಾಮಗಾರಿಯ ಕಾಲಮಿತಿ ಅನುಷ್ಠಾನದ ದೃಷ್ಠಿಯಿಂದ ಅತಿ ಅವಶ್ಯಕವಾಗಿರುತ್ತದೆ.



ಈ ರೀತಿ ಒಂದೇ ರೀತಿಯ ಪರಿಹಾರವನ್ನು ಚ.ಅ.ಗೆ ರೂ. 1200/–ಕ್ಕಿಂತ ಮೇಲ್ಪಟ್ಟು ರೂ.1500/–ಕ್ಕಿಂತ ಕೆಳಗೆ ನಿಗದಿಪಡಿಸಿದಲ್ಲಿ ಅಸಮಾನತೆಯನ್ನು ನಿವಾರಿಸಿದಂತಾಗುತ್ತದೆ ಜೊತೆಗೆ ಹೆಚ್ಚುವರಿಯಾಗಿ ಶೇ.30 ರಷ್ಟು ಸೋಲೇಷಿಯಂ ನೀಡಿದಲ್ಲಿ ಒಟ್ಟಾರೆ ಪರಿಹಾರ ರೂ.1560/– ರಿಂದ ರೂ.1950/– ಮಧ್ಯದಲ್ಲಿ ನಿಗದಿಪಡಿಸಿದಂತಾಗುತ್ತದೆ. ಇದರಿಂದಾಗಿ ಅಂದರೆ, ಚ.ಅ.ಗೆ ರೂ.1950/– ನಿಗದಿಪಡಿಸಿದಲ್ಲಿ ಭೂ ಪರಿಹಾರದ ಅಂದಾಜು ವೆಚ್ಚ ರೂ.80,67,198=56 ಗಳಾಗುತ್ತದೆ. ಹೆಚ್ಚುವರಿಯಾಗಿ ಸ್ವತ್ತಿನ ಮಾಲೀಕರಿಂದ ಡಿ.ಆರ್.ಸಿಯನ್ನು ಖರೀದಿಸಲು ಮಾರ್ಗ ಸೂಚಿ ಬೆಲೆಯ ಶೇ.1 ರಷ್ಟು ನೋಂದಣಿ ಶುಲ್ಕ ಮತ್ತು ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಸಹ ಭರಿಸಬೇಕಾಗುತ್ತದೆ. **ಈ ರೀತಿ ಪರಿಹಾರ ನೀಡುವ ಮುನ್ನ ಪ್ರತಿಯೊಬ್ಬ ಸ್ವತ್ತಿನ ಮಾಲೀಕರಿಂದ ತಾನು ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವುದಿಲ್ಲವೆಂದು ಹಾಗೂ ಪಾಲಿಕೆಯು ನಿಗದಿಪಡಿಸಿರುವ ಪರಿಹಾರದ ಹಣವನ್ನು ಸ್ವ–ಇಚ್ಛೆಯಿಂದ ಪಡೆದುಕೊಂಡು ಡಿ.ಆರ್.ಸಿ.ಯನ್ನು ಪಾಲಿಕೆಗೆ ಮಾರಾಟ ಮಾಡಲು ಬದ್ಧರಿರುವುದಾಗಿ ನಿಗದಿತ ದರದ ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಸಹ ಪಡೆಯಬಹುದಾಗಿರುತ್ತದೆ.**

ಆದ್ದರಿಂದ ಈ ಕೆಳಕಂಡ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ:–

1. ಕದಿರೇನಹಳ್ಳಿ ಕೆಳಸೇತುವೆ ನಿರ್ಮಾಣಕ್ಕಾಗಿ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕಾಗಿ ವಿಷಯ ಸಂಖ್ಯೆ: 387/2009–10 ರಲ್ಲಿ ದಿನಾಂಕ: 09–12–2009 ರಂದು ತೆಗೆದುಕೊಂಡಿರುವ ಮಾನ್ಯ ಆಡಳಿತಾಧಿಕಾರಿಗಳ ನಿರ್ಣಯವನ್ನು ಕೆಳಕಂಡಂತೆ ಮಾರ್ಪಡಿಸಲು.
2. ಕದಿರೇನಹಳ್ಳಿ ಕೆಳಸೇತುವೆಗೆ ಹೊಂದಿಕೊಂಡಂತೆ ಸರ್ವೀಸ್ ರಸ್ತೆ ನಿರ್ಮಾಣಕ್ಕಾಗಿ ವಶಪಡಿಸಿಕೊಳ್ಳಬೇಕಾದ ಸುಮಾರು 44 ಸ್ವತ್ತುಗಳಿಗೆ ಹಾಲಿ ನಿಗದಿಪಡಿಸಿರುವ ಚ.ಅಡಿಗಳಿಗೆ ರೂ.1200/– ಮತ್ತು ರೂ.1300/–ಗಳ ಬದಲಾಗಿ ರೂ.1200/– ರಿಂದ ರೂ.1500/– ಗಳ ಮಧ್ಯದ ಒಂದು ದರವನ್ನು ನಿಗದಿಪಡಿಸಲು ಹಾಗೂ ಇದನ್ನು ಕಾಮಗಾರಿಯ ಅಂದಾಜು ವೆಚ್ಚದಿಂದ ಭರಿಸಲು ಹಾಗೂ ಸಾಕಾಗದಿದ್ದಲ್ಲಿ, 2010–11ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಭೂಸ್ವಾಧೀನ ಲೆಕ್ಕ ಶೀರ್ಷಿಕೆಯಿಂದ ಭರಿಸಲು,
3. ಈ ಸ್ವತ್ತುಗಳನ್ನು ಡಿ.ಆರ್.ಸಿ ಪಡೆದ ನಂತರ ಸ್ವತ್ತಿನ ಮಾಲೀಕರಿಂದ ಪಾಲಿಕೆಯ ಹೆಸರಿಗೆ ಖರೀದಿಸಲು ಮಾರ್ಗ ಸೂಚಿ ಬೆಲೆಯ ಶೇ.1 ರಷ್ಟು ನೋಂದಣಿ ಶುಲ್ಕ ಮತ್ತು ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಸಹ ಕಾಮಗಾರಿ ವೆಚ್ಚದಿಂದ ಹಾಗೂ 2010–11ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಭೂಸ್ವಾಧೀನ ಲೆಕ್ಕ ಶೀರ್ಷಿಕೆಯಿಂದ ಭರಿಸಲು,

4. ಈ ರೀತಿ ಪರಿಹಾರ ಪಾವತಿಸುವ ಮುನ್ನ **ಪ್ರತಿಯೊಬ್ಬ ಸ್ವತ್ತಿನ ಮಾಲೀಕರಿಂದ "ತಾನು ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವುದಿಲ್ಲವೆಂದು ಹಾಗೂ ಯಾವುದೇ ಪ್ರಾಧಿಕಾರ ಹಾಗೂ ಸರ್ಕಾರಕ್ಕೆ ಹೆಚ್ಚಿನ ಪರಿಹಾರಕ್ಕಾಗಿ ಮನವಿ ಸಲ್ಲಿಸುವುದಿಲ್ಲವೆಂದು, ಪಾಲಿಕೆಯು ನಿಗದಿಪಡಿಸಿರುವ ಪರಿಹಾರದ ಹಣವನ್ನು ಸ್ವ-ಇಚ್ಛೆಯಿಂದ ಪಡೆದುಕೊಂಡು ಡಿ.ಆರ್.ಸಿ.ಯನ್ನು ಪಾಲಿಕೆಗೆ ಮಾರಾಟ ಮಾಡಲು ಬದ್ದರಿರುವುದಾಗಿ, ಹಾಗೂ ಈ ನಿವೇಶನ/ ಜಮೀನಿನ ಬಗ್ಗೆ ತಾನು ಬಿಡಿಎ/ ಯಾವುದೇ ಪ್ರಾಧಿಕಾರದಿಂದ ಭೂ-ಪರಿಹಾರವನ್ನು**



**ಪಡೆದಿಲ್ಲವೆಂದು" ನಿಗದಿತ ದರದ ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಸಹ ಪಡೆಯಲು,** ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ರ್ಣಯ :-ನೊಂದಣಾಧಿಕಾರಿಗಳ ಮಾರ್ಗಸೂಚಿ ದರ ಗರಿಷ್ಠ ರೂ.1300-00 ಎಂಬುದಾಗಿ ಇದ್ದು, ಸಾಮಾನ್ಯವಾಗಿ ಮಾರುಕಟ್ಟೆ ದರಕ್ಕಿಂತ ನೊಂದಣಿ ದರ ಕಡಿಮೆ ಇರುವುದು ಕಂಡುಬರುತ್ತದೆ. ಆದ ಕಾರಣ ಭೂಸ್ವಾಧೀನ ಕಾಯ್ದೆಯಂತೆ ಮಾರುಕಟ್ಟೆ ದರ ಶೇಕಡ 30% ಸೋಲೇಷಿಯಂ ಹಾಗೂ ಶೇಕಡ 12% ಹೆಚ್ಚುವರಿ ಮಾರುಕಟ್ಟೆ ದರ ಸೇರಿ ಚದರಡಿ ಒಂದಕ್ಕೆ ರೂ.2500-00ಗಳಂತೆ ಕರಿಸಂದ್ರ, ಕದಿರೇನಹಳ್ಳಿಗಳಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಎಲ್ಲಾಸ್ವತ್ತುಗಳಿಗೂ ಒಂದೇ ರೀತಿಯಲ್ಲಿ ಪರಿಹರ ನಿಗಧಿಪಡಿಸಲು ಆಯುಕ್ತರ ದಿನಾಂಕ 29-08-2010ರ ಟಿಪ್ಪಣಿಯನ್ನು ಮಾರ್ಪಡಿಸಿ ಒಪ್ಪಿದೆ.**

**03]. ವಿಷಯದ ಸಂಖ್ಯೆ :-ತೆಆಸ್ಥಾಸ/29/2010-1**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಹೆನಿನಯೋ/ಜೆಡಿಟಿಪಿ(ದ)/ಜಿಎಲ್/1580/10-11 ದಿನಾಂಕ:02-09-2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ನಿರ್ಮಾಣ ಮಾಡುವ ವಸತಿ/ ವಸತಿಯೇತರ ಕಟ್ಟಡಗಳಿಗೆ ನಕ್ಷೆ ಅನುಮೋದನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾಗುತ್ತಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ನಕ್ಷೆ ಅನುಮೋದನೆಯನ್ನು ನೀಡಲು M/S. SoftTech Engineers Pvt. Ltd., ಸಂಸ್ಥೆಯವರು Software ನ್ನು ಸಿದ್ದಪಡಿಸಿರುತ್ತಾರೆ.

ಉದ್ದೇಶಿತ ಆನ್‌ಲೈನ್ ನಕ್ಷೆ ಅನುಮೋದನೆಯನ್ನುಅತಿಶೀಘ್ರದಲ್ಲಿ ಪ್ರಾರಂಭಿಸಬೇಕಾಗಿರುವ ಹಿನ್ನಲೆಯಲ್ಲಿ ಹಾಗೂ 6 x 9, 9 x12, 12 x18 ಮೀ ಅಳತೆಯರೆಗಿನ ಚಿಕ್ಕ ಚಿಕ್ಕ ನಿವೇಶನಗಳ ಮಾಲೀಕರು ಕಟ್ಟಡ ನಕ್ಷೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಿ ಅನುಮೋದಿಸಿಕೊಳ್ಳಲು ಸರಳವಾಗುವಂತೆ ಮಾಡಲು ಪ್ರತಿ ವಲಯಕ್ಕೆ ಒಂದರಂತೆ ಎಂಟು ವಲಯಕ್ಕೆ ಎಂಟು ಹಾಗೂ ಕೇಂದ್ರ ಕಚೇರಿಯಲ್ಲಿನ ಜಂಟಿ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ಹಾಗೂ ಜಂಟಿ ನಿರ್ದೇಶಕರು (ನಗರ ಯೋಜನೆ-ಉತ್ತರ) ರವರೆಗೆ ಒಂದೊಂದರಂತೆ ಎರಡು ಹೀಗೆ ಒಟ್ಟು 10 ತಾಂತ್ರಿಕ ಸಿಬ್ಬಂದಿಯನ್ನು ತಾತ್ಕಲಿಕವಾಗಿ / ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಅವಶ್ಯಕತೆ ಇದ್ದು, ಅವರ ವಿದ್ಯಾರ್ಹತೆಯು B.E (Civil / Arcchitect) ಅಥವಾ D.C.E (Civil / Architect) ಯೊಂದಿಗೆ ಕನಿಷ್ಟ 2 ವರ್ಷಗಳ AutoCAD ನಲ್ಲಿ ಅನುಭವ ಹೊಂದಿರುವುದು ಅವಶ್ಯಕತೆ ಇರುತ್ತದೆ.

ವಲಯ ಕಛೇರಿಗಳಲ್ಲಿ ಸಣ್ಣ ಸಣ್ಣ ನಕ್ಷೆಗಳು ಅಂದರೆ 6 x 9, 9 x12, 12 x18 ಮೀ ಅಳತೆಯವರೆಗಿನ ನಕ್ಷೆಗಳ ಅನುಮೋದನೆಗೆ, 100, 200 ಮತ್ತು 300 ಚ.ಮೀವರೆಗಿನ ಪ್ರತಿ ಪರವಾನಿಗೆಗೆ ಅನುಕ್ರಮವಾಗಿ ರೂ. 250/–, 500/– ಮತ್ತು ರೂ.750 ಗಳನ್ನು ಸಾರ್ವಜನಿಕರಿಂದ ಪಾವತಿಸಿ ಕೊಳ್ಳಬಹುದಾಗಿದೆ.
ಮೇಲ್ಕಂಡ ಕಾರಣದಿಂದ 10 ತಾಂತ್ರಿಕ ಸಿಬ್ಬಂದಿಯನ್ನು ತಾತ್ಕಲಿಕವಾಗಿ ಅಥವಾ ಗುತ್ತಿಗೆ ಆಧರದ ಮೇಲೆ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಆಯುಕ್ತರು ಅನುಮತಿ ಹಾಗೂ ಆದೇಶಕ್ಕಾಗಿ ಮಂಡಿಸಿದೆ.

**ನಿರ್ಣಯ :–ಆಯುಕ್ತರ ದಿನಾಂಕ 02–09–2010ರ ಟಿಪ್ಪಣಿಯನ್ನು ಒಪ್ಪಿದೆ.**



**04]. ವಿಷಯದ ಸಂಖ್ಯೆ :–ತೆಆಸ್ಥಾಸ/33/2010–11**

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅ.ಆ.(ಕ/ಆ/ಆ)ಪಿಎಸ್ಆರ್(3)90/2010–11 ದಿನಾಂಕ : 16–09–2010. ರಲ್ಲಿ ವಿವರಿಸಿರುವಂತೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಾಳಗಾಳು ಗ್ರಾಮದ ಸರ್ವೆ ನಂ. 52 ರ 34 ಎಕರೆ 33 ಗುಂಟೆ ಪ್ರದೇಶದಲ್ಲಿ 618 ನಿವೇಶನಗಳನ್ನಾಗಿ ವಿಂಗಡಿಸಿ (ಪಂಚಶೀಲಾನಗರ, ಹಳೇ ವಾರ್ಡ್ ಸಂಖ್ಯೆ:37 ಮತ್ತು 38 ಹಾಲಿ ವಾರ್ಡ್ ಸಂಖ್ಯೆ:127), 1974 ರಲ್ಲಿ 25ನೇ ವರ್ಷದ ಸ್ವಾತಂತ್ರೋತ್ಸವದ ಅಂಗವಾಗಿ ಫಲಾನುಭವಿಗಳಿಗೆ ಷರತ್ತು ನಿಬಂಧನೆಗಳನ್ನು ವಿಧಿಸಿ, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ರವರು ಹಕ್ಕು ಪತ್ರಗಳನ್ನು ಹಂಚಿಕೆ ಮಾಡಿರುತ್ತಾರೆ.

1985 ನೇ ಇಸವಿಯಲ್ಲಿ ಸರ್ವೆ ನಂ. 52 ನ್ನು ಬಿಡಿಎ ರವರು ಭೂಸ್ವಾಧೀನ ಪಡಿಸಿಕೊಂಡಿರುತ್ತಾರೆ. ನಂತರ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರು ದಿನಾಂಕ 25.5.1998 ರಲ್ಲಿ ಸರ್ವೆ ನಂ. 52 ರಲ್ಲಿ ನೀಡಿದ್ದ ಹಕ್ಕು ಪತ್ರಗಳನ್ನು ರದ್ದು ಪಡಿಸಿರುತ್ತಾರೆ.

ತಹಶೀಲ್ದಾರ್ ರವರ ಕ್ರಮದ ವಿರುದ್ಧ, ಪಂಚಶೀಲ ನಗರ ನಿವಾಸಿಗಳು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, (WP No. 2816/1998), ನ್ಯಾಯಾಲಯ ತಹಶೀಲ್ದಾರರು ನೀಡಿದ್ದ ಹಕ್ಕು ಪತ್ರ ರದ್ದು ಪಡಿಸುವ ಆದೇಶವನ್ನು ರದ್ದುಗೊಳಿಸಿರುತ್ತಾರೆ. (ನ್ಯಾಯಾಲಯದ ಆದೇಶ ದಿನಾಂಕ 27.6.1999).

ಸದರಿ ಪ್ರದೇಶವು ಮಹಾನಗರ ಪಾಲಿಕೆಗೆ ದಿನಾಂಕ 01.10.1995 ರಲ್ಲಿ ಹಸ್ತಾಂತರವಾಗಿದ್ದು, ಪಾಲಿಕೆಯು ಈಗಾಗಲೇ ಸಾಕಷ್ಟು ಅಭಿವೃದ್ಧಿ ಪಡಿಸಿರುವ ಕಾರಣ ಮತ್ತು ಸದರಿ ಪ್ರದೇಶದ ನಿವಾಸಿಗಳಿಗೆ ಅನುಕೂಲ ಮಾಡುವ ಹಿತದೃಷ್ಠಿಯಿಂದ ಮೇಲ್ಪಾಟು ವೆಚ್ಚ ಪಡೆದು ಖಾತಾ ನೊಂದಾಯಿಸುವ ಕುರಿತು ಪಾಲಿಕೆ ಸಭೆ ಮುಂದೆ ಪ್ರಸ್ತಾವನೆ ಸಲ್ಲಿಸಿದ್ದರ ಹಿನ್ನಿಲೆಯಲ್ಲಿ ದಿನಾಂಕ:12–07–2001ರಂದು ನಡೆಡ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ 183 ರಂತೆ ಈ ಕೆಳಕಂಡಂತೆ ನಿರ್ಣಯವಾಗಿರುತ್ತದೆ.

‘‘ವಾರ್ಡ್–37, ಪಂಚಶೀಲನಗರದಲ್ಲಿ ಸುಮಾರು 27 ವರ್ಷಗಳಿಂದ ವಾಸಿಸುತ್ತಿರುವ 618 ನಿವಾಸಿಗಳಿರುವ ಪ್ರದೇಶವನ್ನು ಪಾಲಿಕೆಯು ಈಗಾಗಲೇ ಸಾಕಷ್ಟು ಅಭಿವೃದ್ಧಿ ಪಡಿಸಿರುವ ಕಾರಣ, ಹಾಲಿ ವಾಸಿಸುತ್ತಿರುವ

ನಿವಾಸಿಗಳಿಂದ ಸರ್ಕಾರದ ಇತ್ತೀಚಿನ ಆದೇಶದಂತೆ ಪ್ರತಿ ನಿವೇಶನಕ್ಕೆ ರೂ. 500=00 ಗಳ ಮೇಲ್ಪಟ್ಟು ವೆಚ್ಚ ಪಡೆದು 15 ದಿನಗಳೊಳಗೆ ಖಾತಾ ಕಂದಾಯ ಮಾಡುವ ಬಗ್ಗೆ ಆಯುಕ್ತರು ಕ್ರಮ ಜರುಗಿಸುವುದು".

ಸದರಿ ಪ್ರದೇಶದಲ್ಲಿ ಹಕ್ಕು ಪತ್ರ ವಿತರಿಸಿರುವ ಬಗ್ಗೆ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರ ಕಛೇರಿಯಿಂದ ಯಾವುದೇ ದಾಖಲೆಗಳು ಹಸ್ತಾಂತರವಾಗಿರುವುದಿಲ್ಲ. ಈ ಬಗ್ಗೆ ಅನೇಕ ಬಾರಿ ಪತ್ರಗಳನ್ನು ಸಹ ಬರೆದಿದ್ದರೂ, ಸಹ ದಾಖಲೆಗಳನ್ನು ನೀಡಿರುವುದಿಲ್ಲ. ಬದಲಾಗಿ ದಿನಾಂಕ 08.06.2004 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ ಉಪ ಆಯುಕ್ತರು (ದಕ್ಷಿಣ) ರವರಿಗೆ ಪತ್ರ ಬರೆದಿದ್ದು, ಸದರಿ ಸ್ವತ್ತುಗಳಿಗೆ ಖಾತೆ ನೊಂದಾಯಿಸುವ ಬಗ್ಗೆ ನಿವೇಶನಗಳ ಫಲಾನುಭವಿಗಳ ಬಳಿ ಇರುವ ದಾಖಲೆಗಳನ್ನು ಪಡೆದು ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ಸೂಚಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.



ಮುಂದುವರಿದಂತೆ ತಹಶೀಲ್ದಾರ್ ಕಛೇರಿಯಿಂದ ಸಹ ಪಲಾನುಭವಿಗಳ ಪಟ್ಟಿ ಇರುತ್ತದೆ. ಪಾಲಿಕೆಯ ವತಿಯಿಂದ ಜೂನ್ 2010 ನೇ ಸಾಲಿನಲ್ಲಿ ಸರ್ವೆ ಮಾಡಿಸಿ ಫಲಾನುಭವಿಗಳ ಪಟ್ಟಿ ಮಾಡಿಸಲಾಗಿದೆ. ಆ ಪಟ್ಟಿಯೂ ಸಹ ಕಡತದಲ್ಲಿ ಲಗತ್ತಿಸಿದೆ. ಆದರೆ ಈ ಎರಡು ಪಟ್ಟಿಗಳನ್ನು ಹೋಲಿಸಿದಾಗ ಬಹಳ ವ್ಯತ್ಯಾಸಗಳು ಕಂಡು ಬರುತ್ತದೆ. ಹಾಲಿ ವಾಸವಾಗಿರುವವರ ಬಳಿಯೂ ಸಹ ಹಕ್ಕು ಪತ್ರಗಳಿದ್ದು, ಈ ರೀತಿ ಒಂದೇ ಸ್ವತ್ತಿಗೆ ಎರಡು, ಮೂರು ಹಕ್ಕು ಪತ್ರಗಳಿರುತ್ತದೆ. ಮತ್ತು ಕೆಲವರು ಜಿಪಿಎ ಪತ್ರ ಹೊಂದಿರುತ್ತಾರೆ. ಆದ್ದರಿಂದ ಸದರಿ ಸ್ವತ್ತುಗಳಿಗೆ ಖಾತೆ ನೊಂದಾಯಿಸಲು ಬಹಳ ತೊಂದರೆಯಾಗಿರುತ್ತದೆ ಮತ್ತು ಸದರಿ ಪ್ರಕರಣಗಳಲ್ಲಿ ಯಾವ ರೀತಿ ಕ್ರಮ ಕೈಗೊಳ್ಳಬಹುದೆಂಬ ವಿಷಯದಲ್ಲಿ ಗೊಂದಲವುಂಟಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಪ್ರಸ್ತಾವಿತ ಪ್ರದೇಶದ ಒಟ್ಟು ವಿಸ್ತೀರ್ಣ 34 ಎಕರೆ 33 ಗುಂಟೆ ಇದ್ದು, ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ ಕಛೇರಿಯಿಂದ 618 ಜನಕ್ಕೆ ಹಕ್ಕು ಪತ್ರಗಳನ್ನು ವಿತರಿಸಲಾಗಿದ್ದು, ಇನ್ನು ಜಮೀನಿನ ಲಭ್ಯತೆ ಇರಬಹುದಾದನ್ನು ಪರಿಗಣಿಸಿ ಪ್ರಸ್ತಾವಿತ ಪ್ರದೇಶವನ್ನು ಹಿರಿಯ ಅಧಿಕಾರಿಗಳಿಂದ ತಪಾಸಣೆ ನಡೆಸಿ ಅಮೂಲ್ಯ ಆಸ್ತಿಯನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳುವ ಮತ್ತು ಪಾಲಿಕೆಯ ಆದಾಯ ಹಾಗೂ ಸದರಿ ಪ್ರದೇಶದಲ್ಲಿ ವಾಸವಾಗಿರುವ ನಿವಾಸಿಗಳ ಹಿತದೃಷ್ಟಿಯಿಂದ ಹಾಲಿ ವಾಸವಿರುವ ನಿವಾಸಿಗಳಿಂದ ಲಭ್ಯವಿರುವ ದಾಖಲೆಗಳನ್ನು ಪಡೆದು ಖಾತಾ ನೊಂದಾವಣೆ ಮಾಡುವ ಸಂಬಂಧ ಈ ಕೆಳಕಂಡ ಅಂಶಗಳಿಗೆ ಪಾಲಿಕೆಯ ಸಭೆಯಲ್ಲಿ ಪ್ರಸ್ತಾವನೆ ಮಂಡಿಸಿ ಅನುಮೋದನೆ ಕೋರಿದೆ.

1. ಹಾಲಿ ಮೂಲ ಹಕ್ಕು ಪತ್ರ/ಕ್ರಯ ಪತ್ರ ಇರುವವರಿಗೆ ಖಾತೆ ನೀಡಬಹುದಾಗಿದೆ.
2. ಮೂಲ ಹಂಚಿಕೆದಾರರು ನಿಧನರಾಗಿದ್ದಲ್ಲಿ, ವಾರಸುದಾರರಿಗೆ ಅಗತ್ಯ ದಾಖಲೆಗಳನ್ನು ಪಡೆದು ಖಾತಾ ನೀಡಬಹುದಾಗಿದೆ.
3. ಸದರಿ ಪ್ರದೇಶವು ಈ ಹಿಂದೆ ಹೇರೋಹಳ್ಳಿ ಗ್ರಾಮ ಪಂಚಾತಿಯ ವ್ಯಾಪ್ತಿಗೆ ಒಳಪಟ್ಟಿದ್ದು, ಆ ಸಂದರ್ಭದಲ್ಲಿ ಸದರಿ ಪ್ರದೇಶದಲ್ಲಿನ ನಿವೇಶನಗಳ ಅನುಭವದಾರರು ಕಂದಾಯ ಮತ್ತು ಇತರ ತೆರೆಗೆಗಳನ್ನು ಪಾವತಿಸಿದ್ದರ ಬಗ್ಗೆ ಮಾಹಿತಿ ಸಲ್ಲಿಸಿದ್ದಲ್ಲಿ ಅಂತಹ ಪ್ರಕರಣಗಳನ್ನು ಇನ್ನಿತರ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಮೇಲ್ಪಾವಟು ವೆಚ್ಚವನ್ನು ಪಾವತಿಸಿಕೊಂಡು ಖಾತಾ ನೊಂದಾಯಿಸಿಕೊಳ್ಳಬೇಕಾಗಿದೆ.

4. ಮೂಲ ಹಂಚಿಕೆದಾರರಿಂದ ನೊಂದಾಯಿತ ಜಿ.ಪಿ.ಎ ಕ್ರಯ ಆಗಿರುವ ಪ್ರಕರಣಗಳಲ್ಲಿ ಪರಿಶೀಲಿಸಿ ಸಾಚಾತನವನ್ನು ದೃಢಪಡಿಸಿಕೊಂಡು ಖಾತಾ ನೀಡಬಹುದಾಗಿದೆ. ನೊಂದಾಯಿತ ಜಿ.ಪಿ.ಎ ಹೊಂದಿಲ್ಲದವರಿಗೆ ಖಾತಾ ನಿರಾಕರಿಸಬಹುದಾಗಿದೆ.
5. ಹಾಲಿ ಪ್ರಚಲಿತವಿರುವ ಮೇಲ್ವಾಟು ವೆಚ್ಚ ರೂ. 100/– ಪ್ರತಿ ಚದರ ಗಜಕ್ಕೆ ವಿಧಿಸಿ ಖಾತಾ ನೀಡಬಹುದಾಗಿದೆ.
6. ಸದರಿ ಸರ್ವೆ ಸಂಖ್ಯೆ: 52 ರ ಪ್ರದೇಶದಲ್ಲಿ ಹಂಚಿಕೆಯಾಗದೆ ಉಳಿದಿರುವ ಪ್ರದೇಶ ಹಾಗೂ ಬಡಾವಣೆಯಲ್ಲಿ ಲಭ್ಯವಿರುವ ಖಾಲಿ ನಿವೇಶನಗಳನ್ನು ಸರ್ವೆ ಮಾಡಿಸಿ ಪಾಲಿಕೆ ವಶಕ್ಕೆ ತೆಗೆದುಕೊಂಡು ಬೇಲಿ ನಿರ್ಮಿಸಲು ಕ್ರಮ ವಹಿಸುವುದು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 16–09–2010ರ ಟಿಪ್ಪಣಿಯನ್ನು ಒಪ್ಪಿದೆ.**



**05]. ವಿಷಯದ ಸಂಖ್ಯೆ :–ತೆಆಸ್ಥಾಸ/36/2010–11**

ಆಯುಕ್ತರವರ ಟಿಪ್ಪಣಿ ದಿನಾಂಕ : 21–09–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಸಂಘಟನಾಧಿಕಾರಿಗಳು ಮತ್ತು ಸಮುದಾಯ ಸಂಘಟಕರುಗಳಿಗೆ ರಾಜ್ಯ ಸರ್ಕಾರವು ಪರಿಷ್ಕರಿಸಿರುವ ವೇತನ ಶ್ರೇಣಿಯನ್ನು ನಿಗಧಿಪಡಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ನಅಇ 104 ಬಿಎಂಎಸ್ 2008, ದಿ:18–12–08ರ ಸರ್ಕಾರದ ಆದೇಶದ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯಗಳಲ್ಲಿ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್(SJSRY) ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಕಲ್ಯಾಣ ವಿಭಾಗದ ಆದೇಶ ಸಂಖ್ಯೆ: ಜ.ಆ(ಕ)ಪಿಎಸ್‌ಆರ್(1)139/2008–09, ದಿನಾಂಕ:20–01–2009. ರಂತೆ, ಪೌರಡಳಿತ ನಿಗಮದಿಂದ ಸಮುದಾಯ ಸಂಘಟನಾಧಿಕಾರಿಗಳನ್ನು ಮತ್ತು ಸಮುದಾಯ ಸಂಘಟಕರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳಲಾಗಿರುತ್ತದೆ. ಪ್ರಸ್ತುತ, ಸದರಿ ವೃಂದದ ಅಧಿಕಾರಿಗಳು ಪಾಲಿಕೆಯ ವಿವಿಧ ವಲಯಗಳಲ್ಲಿ ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ.

| ಕ್ರ. ಸಂ. | ವಲಯ | ಸಮುದಾಯ ಸಂಘಟನಾಧಿಕಾರಿಗಳು | ಸಮುದಾಯ ಸಂಘಟಕರು |
|---|---|---|---|
| | ಪೂರ್ವ ವಲಯ | 2 | 4 |
| | ಪಶ್ಚಿಮ ವಲಯ | 1 | 8 |
| | ದಕ್ಷಿಣ ವಲಯ | 2 | 6 |
| | ರಾಜರಾಜೇಶ್ವರಿ ನಗರ ವಲಯ | 2 | 3 |

| | | |
|---|---|---|
| ಮಹದೇವಪುರ ವಲಯ | 2 | 3 |
| ಯಲಹಂಕ ವಲಯ | 2 | 1 |
| ದಾಸರಹಳ್ಳಿ ವಲಯ | 1 | 2 |
| ಬೊಮ್ಮನಹಳ್ಳಿ ವಲಯ | 1 | 2 |
| ಒಟ್ಟು | 13 | 29 |



ಸರ್ಕಾರದ ನಡವಳಿಯ ಆದೇಶದ ಸಂಖ್ಯೆ: ಎಫ್‌ಡಿ 20 ಎಸ್‌ಆರ್‌ಪಿ 2010, ದಿನಾಂಕ: 03–06–2010. ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 174 ಇಎಂಸಿ 2010, ದಿ:26–07–2010ರ ಆದೇಶದಂತೆ, ಈ ಕೆಳಗೆ ನಮೂದಿಸಿರುವಂತೆ ಪರಿಷ್ಕೃತ ವೇತನ ಶ್ರೇಣಿಯನ್ನು ಕರ್ನಾಟಕ ನಾಗರೀಕ ಸೇವೆ ನಿಯಮ 43ರಂತೆ ನಿಗಧಿಪಡಿಸಲು ಹಾಗೂ ಸದರಿ ಪರಿಷ್ಕೃತ ವೇತನ ಶ್ರೇಣಿಯನ್ನು ದಿನಾಂಕ:03–06–2010ರಿಂದ ಅನ್ವಯವಾಗುವಂತೆ ಮಂಜೂರು ಮಾಡಿದೆ.

| **ಕ್ರ.ಸಂ** | **ಹುದ್ದೆ** | **ಪ್ರಸ್ತುತ 2007ರ ವೇತನ ಶ್ರೇಣಿ ರೂ** | **ಪರಿಷ್ಕೃತ 2007 ರ ವೇತನ ಶ್ರೇಣಿ ರೂ** |
|---|---|---|---|
| 1 | ಸಮುದಾಯ ಸಂಘಟಕರು | 5800–10500 | 7275–13350 |
| 2 | ಸಮುದಾಯ ಸಂಘಟನಾಧಿಕಾರಿಗಳು | 7275–13350 | 10800–20025 |

ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ20 ಎಸ್‌ಆರ್‌ಪಿ 2010 ದಿ:03–06–2010 ರಂತೆ, ಪಾಲಿಕೆಯಲ್ಲಿ ಎಸ್.ಜೆ.ಎಸ್.ಆರ್.ವೈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಸಂಘಟನಾಧಿಕಾರಿಗಳು ಮತ್ತು ಸಮುದಾಯ ಸಂಘಟಕರುಗಳಿಗೆ ಪರಿಷ್ಕೃತ 2007ರ ವೇತನ ಶ್ರೇಣಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 43ರ ಅನುಸಾರ ವೇತನ ನಿಗದಿಪಡಿಸಬಹುದೆಂದು ಉಪ ನಿಯಂತ್ರಕರು (ಹಣಕಾಸು) ರವರು ಉಪ ನಿಯಂತ್ರಕರು (ಹಣಕಾಸು) ರವರ ವರದಿ ದಿನಾಂಕ: 11–08–2010ರಲ್ಲಿ ಅಭಿಪ್ರಾಯಿಸಿರುವಂತೆ, ಈ ಕೆಳಕಂಡಂತೆ ಪರಿಷ್ಕೃತ ವೇತನ ಶ್ರೇಣಿಯನ್ನು ಸದರಿ ವೃಂದದ ಅಧಿಕಾರಿಗಳಿಗೆ ಜಾರಿಗೊಳಿಸುವ ಸಂಬಂಧ ಪಾಲಿಕೆಯ

ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

| ಕ್ರ.ಸಂ | ಹುದ್ದೆ | ಪ್ರಸ್ತುತ 2007ರ ವೇತನ ಶ್ರೇಣಿ ರೂ | ಪರಿಷ್ಕೃತ 2007 ರ ವೇತನ ಶ್ರೇಣಿ ರೂ |
|---|---|---|---|
| 1 | ಸಮುದಾಯ ಸಂಘಟಕರು | 5800–10500 | 7275–13350 |
| 2 | ಸಮುದಾಯ ಸಂಘಟನಾಧಿಕಾರಿಗಳು | 7275–13350 | 10800–20025 |

**ನಿರ್ಣಯ :– ಆಯುಕ್ತರ ದಿನಾಂಕ : 21–09–2010ರ ಟಿಪ್ಪಣಿಯನ್ನು ಒಪ್ಪಿದೆ.**



**06]. ವಿಷಯದ ಸಂಖ್ಯೆ :–ತೆಆಸ್ಥಾಸ/37/2010–11**

ಆಯುಕ್ತರವರ ಟಿಪ್ಪಣಿ ದಿನಾಂಕ : 25–09–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆ ವಲಯಗಳ ಒಟ್ಟು 30 ಟೆಂಡರ್ ಪ್ಯಾಕೇಜ್‌ನ್ನು 2007, ಮಾರ್ಚ್ 15 ರಿಂದ 3 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು, ಸದರಿ ಟೆಂಡರ್ ಗುತ್ತಿಗೆಯು ಮಾರ್ಚ್ 14, 2010 ರಂದು ಅಂತ್ಯಗೊಂಡಿದ್ದು, ಬದಲೀ ವ್ಯವಸ್ಥೆಗಾಗಿ ಜಾಗತಿಕ ಟೆಂಡರ್ ಕರೆದಿದ್ದು, ಇದಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು ಘಕ/30417/2009 ರಲ್ಲಿ ತಡೆಯಾಜ್ಞೆ ನೀಡಿದ್ದರಿಂದ, ಸದರಿ ಗುತ್ತಿಗೆಯನ್ನು 3 ತಿಂಗಳ ಅವಧಿಗೆ ಮುಂದುವರೆಸಲಾಗಿತ್ತು, ಸದರಿ ಗುತ್ತಿಗೆ ಅವಧಿ 19–06–2010ಕ್ಕೆ ಮುಗಿಯಲಿರುವುದನ್ನು ಮನಗಂಡು ಹಾಗೂ ಸದರಿ ರಿಟ್ ಅರ್ಜಿಯ ವಿಲೇವಾರಿ ವಿಳಂಬಗೊಂಡಿದ್ದರಿಂದ, ಸದರಿ ಜಾಗತಿಕ ಟೆಂಡರ್ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆದು ಹೊಸದಾಗಿ ಟೆಂಡರ್ ಕರೆಯುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ ಮೇರೆಗೆ ದಿನಾಂಕ 17–06–2010 ರಂದು ಘನನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇವಾರಿ ಮಾಡಿದೆ. ಈ ನಿಟ್ಟಿನಲ್ಲಿ ಸದರಿ ಗುತ್ತಿಗೆಯ ಅವಧಿಯನ್ನು 20–06–2010 ರಿಂದ 3 ತಿಂಗಳ ಅವಧಿಗೆ ಮುಂದುವರೆಸಲು ಪಾಲಿಕೆ ಸಭೆಯ ಅನುಮೋದನೆ ಪಡೆಯಲಾಗಿದೆ. ಮತ್ತು ಪಾಲಿಕೆಯ ಸಭೆಯ ಅನುಮೋದನೆ ನಿರೀಕ್ಷಿಸಿ ದಿನಾಂಕ:20–09–2010 ರಿಂದ 3 ತಿಂಗಳ ಅವಧಿಯವರೆಗೂ ಮುಂದುವರೆಸಲಾಗಿದೆ.

ಈ ಸಂದರ್ಭದಲ್ಲಿ ಹೊಸ ವಲಯಗಳಲ್ಲೂ ಕೂಡ ಹಾಲಿ ನಿರ್ವಹಿಸುತ್ತಿದ್ದ ಸ್ವಚ್ಛತಾ ಟೆಂಡರ್ ಅವಧಿಯು ಮುಗಿದಿರುವುದರಿಂದ **ಹೊಸದಾಗಿ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಯಿತು**. ಹಾಗೂ ಪ್ರತಿ ವಲಯದಲ್ಲಿ ಅವಶ್ಯಕತೆ ಇರುವ ಪ್ರಮುಖ ರಸ್ತೆಗಳಿಗೆ ಮೆಕಾನಿಕಲ್ ಸ್ವೀಪಿಂಗ್ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ವಲಯವಾರು ಟೆಂಡರ್ ಕರೆಯಲು ನಿರ್ಧರಿಸಲಾಯಿತು.

ಸದರಿ ಮೂಲಭೂತಸೌಕರ್ಯಗಳನ್ನು ಅತ್ಯಗತ್ಯವಾಗಿ ತೆಗೆದುಕೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ದಿನಾಂಕ: 05–08–2010 ರಂದು ವಾರ್ಡುವಾರು ಟೆಂಡರಿನ ಬಗ್ಗೆ ಪ್ರಾತ್ಯಕ್ಷತೆಯನ್ನು ಪೂಜ್ಯ ಮಹಾಪೌರರು, ಹಲವು ಶಾಸಕರು ಮತ್ತು

ಪಾಲಿಕೆಯ ಕೆಲವೊಂದು ಸದಸ್ಯರೊಂದಿಗೆ ಚರ್ಚಿಸಿ, ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಟೆಂಡರ್ ದಸ್ತಾವೇಜನ್ನು ತಯಾರಿಸಲು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಲಾಯಿತು.

1. ಪ್ರಧಾನ ಅಭಿಯಂತರರು – ಉಪ ಅಧ್ಯಕ್ಷರು
2. ಜಂಟಿ ಆಯುಕ್ತರು (ಮಹದೇವಪುರ)– ಸದಸ್ಯರು
3. ಜಂಟಿ ಆಯುಕ್ತರು (ಬೊಮ್ಮನಹಳ್ಳಿ)– ಸದಸ್ಯರು
4. ಮುಖ್ಯ ಅಭಿಯಂತರರು (ಘ.ತ್ಯಾ.ವ.ನಿ) – ಸದಸ್ಯರು
5. ಮುಖ್ಯ ಅಭಿಯಂತರರು (ದಕ್ಷಿಣ) – ಸದಸ್ಯರು
6. ಅಧೀಕ್ಷಕ ಅಭಿಯಂತರರು (ಪಶ್ಚಿಮ)– ಸದಸ್ಯರು
7. ಸಹಾಯಕ ಕಾನೂನು ಅಧಿಕಾರಿ – ಸದಸ್ಯರು
8. ಕಾರ್ಯಪಾಲಕ ಅಭಿಯಂತರರು–1 (ಘ.ತ್ಯಾ.ನಿ) – ಸದಸ್ಯರು
9. ಕಾರ್ಯಪಾಲಕ ಅಭಿಯಂತರರು–2 (ಘ.ತ್ಯಾ.ನಿ) – ಸಂಚಾಲಕರು
10. ಶ್ರೀ.ಸಿ.ಬಸವಯ್ಯ, ಪರಿಸರ ಕೋಶದ ಸಲಹೆಗಾರರು – ಸದಸ್ಯರು
11. ಡಾ.ಹೆಚ್.ಎನ್.ಚಾಣುಕ್ಯ, ಹಿರಿಯ ವಿಜ್ಞಾನಿ (ಐ.ಐ.ಎಸ್.ಸಿ)– ಸದಸ್ಯರು

ದಿನಾಂಕ:15–09–2010 ರಂದು ಸದರಿ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ ಈ ಕೆಳಕಂಡ ಪ್ರಮುಖ ಅಂಶಗಳನ್ನು ಒಳಗೊಂಡ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದೆ.



- ಮನೆ ಮನೆಯಿಂದ ಉತ್ಪತ್ತಿಯಾಗುವ ಹಸಿ ಮತ್ತು ಒಣ ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕವಾಗಿ ಸಂಗ್ರಹಿಸಿ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ರಸ್ತೆ ಗುಡಿಸುವುದು, ಪಾದಚಾರಿ ರಸ್ತೆ ಸ್ವಚ್ಚತೆ, ಚರಂಡಿ ಸ್ವಚ್ಚತೆ ಹಗೂ ಕಟ್ಟಡ ಅವಶೇಷಗಳನ್ನು ಉತ್ಪತ್ತಿಯಾದ ಸ್ಥಳದಿಂದ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ದೊಡ್ಡ ಪ್ರಮಾಣದ ಉತ್ಪಾದಕರಿಂದ ಘನತ್ಯಾಜ್ಯವನ್ನು ಸಂಗ್ರಹಿಸಿ ನಿಗಧಿತ ಸ್ಥಳಕೆ ಸಾಗಿಸುವುದು.
- ಇದಲ್ಲದೇ ಇನ್ನಿತರ ರೂಪುರೇಷುಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಿಕೊಳ್ಳಲಾಗಿದೆ.

198 ವಾರ್ಡುಗಳಿಗೆ ಸ್ವಚ್ಚತಾ ಟೆಂಡರ್ ಮತ್ತು ವಲಯವಾರು ಮೆಕಾನಿಕಲ್ ಸ್ವೀಪಿಂಗ್ ಕಾರ್ಯಗಳಿಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಸ್ವಚ್ಚತೆ ಮತ್ತು ಕಸ ಸಾಗಾಣಿಕೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನವಿರುತ್ತದೆ.

ಇದೇ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ/575/ಎಂಎನ್‌ವೈ/2010, ದಿ:06–08–2010 ರಂತೆ, ರಾಜ್ಯದ ನಗರ ಪ್ರದೇಶಗಳಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಮಗ್ರವಾದ ಪರಿಹಾರ ನೀಡಲು ಅಧಿಕಾರಯುಕ್ತ ಸಮಿತಿಯನ್ನು ನಗರಾಭಿವೃದ್ಧೀ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಈ ನಿಟ್ಟಿನಲ್ಲಿ ಟೆಂಡರ್‌ಗೆ ಪಾಲಿಕೆ ಸಭೆಯು ಅನುಮೋದನೆ ನೀಡಿದ ನಂತರ, ಟೆಂಡರ್ ದಸ್ತಾವೇಜನ್ನು ಸದರಿ ಅಧಿಕಾರಯುಕ್ತ ಸಮಿತಿಯ ಪರಿಶೀಲನೆಗೆ ಕಳುಹಿಸುವ ಅವಶ್ಯಕತೆ ಇರುತ್ತದೆ.

ಸದರಿ ಪ್ರಕ್ರಿಯೆಗಳಿಗೆ ಟೆಂಡರ್ ಕರೆಯುವ ಬಗ್ಗೆ ಅನುಮೋದನೆಗಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಕೋರಲಾಗಿದೆ.

ರ್ಣಯ :– ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯು ನಿರ್ಣಯ ಕೈಗೊಂಡ ನಂತರ ಪುನಃ T & F ಸಮಿತಿಗೆ ಸಲ್ಲಿಸುವಂತೆ ಸೂಚಿಸಲು ತೀರ್ಮಾನಿಸಲಾಯಿತು.

## 07]. ವಿಷಯದ ಸಂಖ್ಯೆ :–ತೆಆಸ್ಥಾಸ/38/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಬಿ12(1ಜಿ)/ಪಿಆರ್/17/03–04, 2010–11 ದಿನಾಂಕ : 29–08–2010. ರಲ್ಲಿ ವಿವರಿಸಿರುವಂತೆ, ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ ಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಸಭೆಯ ಆದೇಶದ ನಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಉಲ್ಲೇಖಿತದ ಟಿಪ್ಪಣಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ರವರು ಸೂಚಿಸಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಇವರು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ದಿನಾಂಕ: 21–08–2003 ರಿಂದ ದ್ವಿತೀಯ ದರ್ಜೆ ಸಹಾಯಕರಾಗಿ, 6 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ನೌಕರರಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರ ಆದೇಶ ಸಂಖ್ಯೆ: ಕ.ಕೈ.ಅ.ನಿ.ಅ. ಆಡಳಿತ 2010–2011/53, ದಿನಾಂಕ: 19–04–2010ರ ಆದೇಶದಂತೆ ನಿಗಮದ ಕಿರಿಯ ಸಹಾಯಕರ ಹುದ್ದೆಯಿಂದ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಿದ್ದು, ಸರ್ಕಾರದ



ದಿನಾಂಕ: 19–05–2010ರ ಪತ್ರದ ಅನುಮೋದನೆಯಂತೆ, ಈ ಕಛೇರಿಯ ದಿ: 31–05–2010ರ ಆದೇಶದಂತೆ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಹಾಲಿ ಅನ್ಯ ಸೇವೆಯ ಮೇಲೆ ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ಶೇ. 50ರಷ್ಟು ನೇರ ನೇಮಕಾತಿಯಿಂದ ಹಾಗೂ ಶೇ 50ರಷ್ಟು ಪಾಲಿಕೆಯ ದ್ವಿತೀಯ ದರ್ಜೆಯ ನೌಕರರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಮಾತ್ರ ಅವಕಾಶವಿದ್ದು, ಅನ್ಯ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಹಾಗೂ ಇತ್ತೀಚೆಗೆ ನಿರ್ದೇಶಕರು, ಮುದ್ರಣ, ಲೇಖನ, ಸಾಮಾಗ್ರಿ ಮತ್ತು ಪ್ರಕಟಣೆ ಕಾರ್ಯಾಲಯದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಅಮರಾವತಿ, ಪ್ರ.ದ.ಗು. ರವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಸಂಬಂಧ ಪಾಲಿಕೆಯ ನೌಕರರು ಆಕ್ಷೇಪಿಸಿ ಘನ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 13310/2007 (ಎಸ್–ಆರ್ಇಎಸ್)ಗೆ ಸಂಬಂಧಿಸಿದಂತೆ, ಘನ ಉಚ್ಚ ನ್ಯಾಯಾಲಯ MISC. W.No.

11157/2007ರಲ್ಲಿ ದಿನಾಂಕ: 07–12–2009ರಂದು *"The Apex Court, in C. Muniyappa Naidu's case, having*

*considered the claim of Senior Health Inspectors drawn from the State Directorate, while on deputation to the then Corporation of the City of Bangalore, when absorbed to the permanent posts of Senior*

*Health Inspectors, held that there was no amendment to the C & R Regulations permitting such absorption, and accordingly set-aside the resolution of the City of Corporation absorbing the said persons on deputation. to the posts in the Corporation. In my considered opinion, in the admitted facts of the present case, the recruitment for FDC's under the C & R Regulations is 50% by way of promotion and 50% by direct recruitment. In the absence of an amended to the C & R Regulations, as observed by the Apex Court, no power is invested in the BBMP to absorb persons on deputation from state services, since that is not a channel for recruitment under the Regulations. Applying the principles laid down in C. Muniyappa's case supra, the claim of the 4th respondent for absorption to the cadre of FDC in the respondent BBMP under the C&R Regulations is impermissible………. The Writ Petition is accordingly disposed off" ಎಂದು ಆದೇಶ ಹೊರಡಿಸಲಾಗಿರುತ್ತದೆ.* ಅಂತೆಯೇ, ಸರ್ವೋಚ್ಛ

ನ್ಯಾಯಾಲಯ / ಉಚ್ಛನ್ಯಾಯಾಲಯದ ವಿವಿಧ ಪ್ರಕರಣದಲ್ಲಿನ ತೀರ್ಮಗಳಲ್ಲಿಯೂ ಸಹ ಎರವಲು ಸೇವೆಯ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಅವಕಾಶವಿರುವುದಿಲ್ಲವೆಂದು ಈಗಾಗಲೇ ಸರ್ಕಾರಕ್ಕೆ ದಿನಾಂಕ: 11–08–2010ರಂದು ಪತ್ರ ಬರೆಯಲಾಗಿರುತ್ತದೆ.



ಈ ಮೇಲ್ಕಂಡ ಅಂಶಗಳನ್ನು ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅನ್ಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ಅವಗಾಹನೆಗೆ ತರುತ್ತಾ, ಉಲ್ಲೇಖಿತ ಟಿಪ್ಪಣಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಸೂಚಿಸಿರುವಂತೆ ಶ್ರೀ ಸತ್ಯನಾರಾಯಣಗೌಡ, ಸಹಾಯಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಇವರ ಸೇವೆಯನ್ನು ಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ವಿಲೀನಗೊಳಿಸುವ ಸಂಬಂಧದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :–ಆಡಳಿತ ಸುದಾರಣಾ ಸ್ಥಾಯಿ ಸಮಿತಿಗೆ ತೀರ್ಮಾನಕ್ಕೆ ಕಳುಹಿಸಲು ತೀರ್ಮಾನಿಸಲಾಯಿತು..**

**08]. ವಿಷಯದ ಸಂಖ್ಯೆ :–ತೆಆಸ್ಥಾಸ/44/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಉ ಆ (ಕಂ) ಪಿ.ಆರ್ : 23 : 07–08 ದಿನಾಂಕ : 11–10–2010 ರಲ್ಲಿ ವಿವರಿಸಿರುವಂತೆ, ಮಹಾನಗರ ಪಾಲಿಕೆಯಿಂದ ಕೈಗೊಳ್ಳುವ ಕೆಲವು ಅಭಿವೃದ್ಧಿ ಕಾಮಗಾರಿಗಳಿಗೆ ವ್ಯಯ ಮಾಡುವ ವೆಚ್ಚವನ್ನು ಮೇಲ್ಪಾಟು ವೆಚ್ಚ ಎಂದು ಪರಿಗಣಿಸಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಘೋಷಿಸಲು ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ಕಲಂ 466ರ ಅಡಿಯಲ್ಲಿ ಅವಕಾಶ ಇದೆ. ಈ ರೀತಿ ಘೋಷಿಸಲಾದ ವೆಚ್ಚವನ್ನು ಅಂತಹ ಅಬಿವೃದ್ಧಿ ಕೆಲಸಗಳ ಪ್ರಯೋಜನ ಪಡೆಯುವ ಸ್ವತ್ತುಗಳ ಮಾಲೀಕರಿಂದ ಗರಿಷ್ಟ 20 ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ಪ್ರಕರಣಗಳಲ್ಲಿ ಆಯುಕ್ತರವರು ಸೂಕ್ತವೆಂದು ಭಾವಿಸಬಹುದಾದಂತ ವಿಧಾನದಲ್ಲಿ ವಸೂಲು ಮಾಡುವಲ್ಲಿ ಸದರಿ ಕಾಯ್ದೆಯ ಕಲಂ 467ರ ಅಡಿಯಲ್ಲಿ ಅಧಿಕಾರ ಒದಗಿಸಲಾಗಿದೆ.

ಮೇಲಿನ ಅವಕಾಶವನ್ನು ಬಳಿಸಿಕೊಂಡು ಪಾಲಿಕೆಯು ತನ್ನ ವ್ಯಾಪ್ತಿಗೆ ಹೊಸದಾಗಿ ಸೇರಿಸಲ್ಪಟ್ಟಿರುವ ರೆವಿನ್ಯೂ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಾಡಿರುವ ಹಾಗೂ ಮಾಡಲಾಗುವ ವೆಚ್ಚವನ್ನು ಅಂದಾಜು ಮಾಡಿ, ಅಂತಹ ಪ್ರದೇಶದಲ್ಲಿರುವ ಸ್ವತ್ತುಗಳ ಮೇಲೆ ಮೇಲ್ಪಾಟು ವೆಚ್ಚವೆಂದು ಘೋಷಿಸಿ ಕಾಲಕಾಲಕ್ಕೆ ನಿಗಧಿಪಡಿಸಿದ ದರಗಳಲ್ಲಿ ಸಂಗ್ರಹ ಮಾಡಲಾಗುತ್ತಿತ್ತು.

ಪಾಲಿಕೆ ಅನುಸರಿಸುತ್ತಿರುವ ಈ ಕ್ರಮವು ಕಲಂ 466 ರ ಪ್ರಕಾರ ಇಲ್ಲವೆಂತಲೂ ಹಾಗೂ ಕಲಂ 466 ಎ ಅಡಿಯಲ್ಲಿ ಬರುವ ಸ್ವತ್ತುಗಳಿಗೆ ಸಂಬಂಧಿಸಿದ ವೆಚ್ಚಗಳನ್ನಲ್ಲದೆ ಬೇರೆ ವೆಚ್ಚವನ್ನು ಮೇಲ್ಪಾಟು ವೆಚ್ಚವಾಗಿ ಸಂಗ್ರಹಿಸಲು ಬರುವುದಿಲ್ಲವೆಂದು ವಾದಿಸಿ ಕೆಲವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಈ ರಿಟ್ ಅರ್ಜಿಗಳ ಮೇಲೆ ವಿಚಾರಣೆ ನಡೆಸಿದ ನ್ಯಾಯಾಲಯವು ಪಾಲಿಕೆಯು ಮೇಲ್ಕಂಡಂತೆ ಮೇಲ್ಪಾಟು ವೆಚ್ಚ ವಿಧಿಸಲು ಅಗತ್ಯವಾದ ನಿಯಮಾವಳಿಗಳನ್ನು ರೂಪಿಸಿಲ್ಲವೆಂಬುದನ್ನು ಗಮನಿಸಿದಾಗ, ಈ ಕುರಿತು ಕಲಂ 466 ಬಿ ಅಡಿಯಲ್ಲಿ ನಿಯಮಾವಳಿಗಳನ್ನು ರೂಪಿಸುವುದಾಗಿ 2001 ರಲ್ಲಿ ನ್ಯಾಯಾಲಯಕ್ಕೆ ಮಹಾನಗರ ಪಾಲಿಕೆಯು ಪ್ರಮಾಣ ಪತ್ರ ಸಲ್ಲಿಸಲಾಗಿತ್ತು.

ಇದಾದ ನಂತರ ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಮತ್ತೆ ಹೊಸದಾಗಿ ಸೇರ್ಪಡೆಗೊಂಡ ರೆವಿನ್ಯೂ ಪ್ರದೇಶಗಳಲ್ಲೂ ಸಹ ಅಗತ್ಯ ಪೌರ ಸೌಲಭ್ಯಗಳನ್ನು ಒದಗಿಸುವ ಅನಿವಾರ್ಯತೆ ಉಂಟಾಯಿತು. ಇದಲ್ಲದೆ ಈ ಪ್ರದೇಶಗಳಲ್ಲಿ ಏಕರೆಗಟ್ಟಲೆ ಆಸ್ತಿಗಳು ಪಾಲಿಕೆಯಿಂದ ಖಾತೆ ಬಯಸಿ ಬರಲಾರಂಬಿಸಿದ್ದು ಇಲ್ಲೂ ಸಹ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾದ ಜವಾಬ್ದಾರಿ ಪಾಲಿಕೆಗೆ ಇರುವುದನ್ನು ಗಮನದಲ್ಲಿಟ್ಟುಕೊಂಡು, ಹೊಸದಾಗಿ ಭೂಪರಿವರ್ತನೆಗೊಂಡ ಸ್ವತ್ತುಗಳಿಗೆ ಈ ಕೆಳಕಂಡಂತೆ ಮೇಲ್ಪಾಟು ವೆಚ್ಚ ಸಂಗ್ರಹಿಸಲು ಧರ ನಿಗಧಿಪಡಿಸಿ ಆಯುಕ್ತರು ದಿನಾಂಕ : 7–11–2007 ರಂದು ಸುತ್ತೋಲೆ ಹೊರಡಿಸಿದ್ದರು.



| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ವಿಧಿಸಬೇಕಾದ ಮೇಲ್ಪಾಟು ವೆಚ್ಚ |
|---|---|---|
| 1 | 60 ಚದರ ಮೀಟರ್ ಮತ್ತು ಅದಕ್ಕಿಂತ ಕಡಿಮೆ ವಿಸ್ತೀರ್ಣದ ಸ್ವತ್ತುಗಳಿಗೆ | ಒಂದು ಚ.ಮೀ.ಗೆ ರೂ. 200/– ರಂತೆ |
| 2 | 60 ಚದರ ಮೀಟರ್ ಮೇಲ್ಪಟ್ಟು 120 ಚದರಮೀಟರ್ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ ರೂ. 400/– ರಂತೆ |
| 3 | 120 ಚದರಮೀಟರ್ ವಿಸ್ತೀರ್ಣಕ್ಕಿಂತ ಮೇಲ್ಪಟ್ಟ ಸ್ವತ್ತುಗಳಿಗೆ | ಒಂದು ಚ.ಮೀ.ಗೆ ರೂ. 600/– ರಂತೆ |

ಆಯುಕ್ತರ ಸುತ್ತೋಲೆಯಂತೆ ಮೇಲ್ಪಾಟು ವೆಚ್ಚ ಸಂಗ್ರಹಸಿ ಖಾತೆ ನೀಡುವ ಕಾರ್ಯ ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಮೆ : ಜನಪ್ರಿಯ ಸಿಂಡಿಕೇಟ್ ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ,

(W.P No.5035/2008) ಈ ಮೇಲಿನ ಸುತ್ತೋಲೆಯ ನಿರ್ದೇಶನದಂತೆ ಪಾಲಿಕೆಯು ಸಂಗ್ರಹಿಸುತ್ತಿರುವ ಮೇಲ್ವಾಟು ವೆಚ್ಚ ನಿಯಮ ಬಾಹಿರವೆಂದು ಪ್ರತಿಪಾದಿಸಿದ್ದು, ಈ ಬಗ್ಗೆ ವಿಚಾರಣೆ ನೆಡೆಸಿದ ಉಚ್ಚ ನ್ಯಾಯಾಲಯವು ದಿನಾಂಕ : 21–7–2008 ರ ತನ್ನ ಆದೇಶದಲ್ಲಿ ಮೇಲ್ವಾಟು ವೆಚ್ಚ ವಿಧಿಸಲು ಪಾಲಿಕೆಯು ನಿಯಮಗಳನ್ನು ರೂಪಿಸಿದೇ ಇರುವ ಕಾರಣ ಅದನ್ನು ಸಂಗ್ರಹಿಸಲು ಬರುವುದಿಲ್ಲವೆಂದು ತೀರ್ಮಾನಿಸಿ ದಿನಾಂಕ : 7–11–2007 ರ ಆಯುಕ್ತರ ಸುತ್ತೋಲೆಯನ್ನು ರದ್ದು ಮಾಡಿ ಆದೇಶಿಸಿತು.

ಈ ಮೇಲಿನ ಆದೇಶ ಬಂದ ನಂತರ ನಿಯಮಗಳನ್ನು ರೂಪಿಸದ ಹೊರೆತು ಹೊಸದಾಗಿ ಭೂಪರಿವರ್ತನೆಗೊಂಡು ಏಕರೆಗಟ್ಟಲೆ ಏಕ ನಿವೇಶನಗಳು ಖಾತಾ ಬಯಸಿ ಬಂದ ಪ್ರಕರಣಗಳಲ್ಲಿ ಖಾತೆ ನೀಡುವ ಕಾರ್ಯವನ್ನು ಸ್ಥಗಿತಗೊಳಿಸಬೇಕೇ ಅಥವಾ ಮುಂದುವರೆಸಬೇಕೇ ಎಂಬುದರ ಬಗ್ಗೆ ಆಯುಕ್ತರ ಹಂತದಲ್ಲಿ ಚರ್ಚಿಸಿ, ಒಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಈ ತೀರ್ಮಾನದ ಅನುಸಾರ ಖಾತಾ ವಹಿಗೆ ಸೇರ್ಪಡೆಗೊಳ್ಳುವ ಮಾಲೀಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಿತಿಯನ್ನು ಅರಿತು ಸ್ವಪ್ರೇರಣೆಯಿಂದ ಮೇಲ್ವಾಟು ವೆಚ್ಚ ಪಾವತಿಸಲು ಮುಂದೆ ಬಂದಲ್ಲಿ ಅವರಿಂದ ಅದನ್ನು ಸಂಗ್ರಹಿಸುವಂತೆಯೂ ಇಲ್ಲವಾದಲ್ಲಿ ಈ ಕುರಿತು ನಿಯಮಾವಳಿಗಳನ್ನು ರೂಪಿಸಿದ ನಂತರ ಹೊಸ ಸ್ವತ್ತುಗಳಿಗೆ ಖಾತೆ ಮಾಡಲು ದಿನಾಂಕ : 27–1–2009 ರಂದು ಹೊರಡಿಸಲಾದ ಆಯುಕ್ತರ ಸುತ್ತೋಲೆ ಸಂಖ್ಯೆ : ಉ ಆ (ಕಂ) ಪಿ.ಆರ್ : 23 : 07–08 ರಲ್ಲಿ ಅವಕಾಶ ಕಲ್ಪಿಸಲಾಯಿತು. ಈ ಸೂಚನೆಗಳ ಅನ್ವಯ ತುರ್ತಾಗಿ ಖಾತೆ ಬಯಸಿ ಬರುವ ಆಸ್ತಿ ಗಳ ಮಾಲೀಕರುಗಳು ಸ್ವಪ್ರೇರಣೆಯಿಂದ ಪೂರ್ಣ ಅಥವಾ ಭಾಗಶಃ ಮೇಲ್ವಾಟು ವೆಚ್ಚವನ್ನು ಪಾವತಿ ಮಾಡಿದವರಿಗೆ ಖಾತೆಯನ್ನು ನೋಂದಣಿ ಮಾಡುವ ಕ್ರಮ ಮುಂದುವರೆಸಲಾಯಿತು. ಅಲ್ಲದೆ ಕೆಲವು ಪ್ರದೇಶಗಳಲ್ಲಿ ನಿಯಮ ರೂಪಿತಗೊಂಡ ನಂತರ, ನಿಗಧಿಯಾಗುವ ಧರದಂತೆ ಮೇಲ್ವಾಟು ವೆಚ್ಚ ಪಾವತಿಸಲು ಬದ್ಧರಾಗಿರುವುದಾಗಿ ಆಸ್ತಿ ಮಾಲೀಕರುಗಳಿಂದ ಮುಚ್ಚಳಿಕೆ ಪಡೆದು ಖಾತೆ ನೋಂದಾಯಿಸುವಂತೆ ಸೂಚಿಸಲಾಯಿತು.

ಈ ಮಧ್ಯೆ ಮೆ B Chartered Housing Pvt. Ltd., ಎಂಬುವರು ಮತ್ತೊಂದು WP No. 4217 of 2009 & 9932-41 of 2009 [LB-BMP] ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿ ಸ್ವಪ್ರೇರಣೆಯ ಹೆಸರಿನಲ್ಲಿ ಈಗಾಗಲೇ ತಮ್ಮಿಂದ ಸಂಗ್ರಹಿಸಲಾದ ಮೇಲ್ವಾಟು ವೆಚ್ಚವನ್ನು ಹಿಂದಿರುಗಿಸಲು ನಿರ್ದೇಶಿಸಬೇಕೆಂದು ಕೋರಿದ್ದು ಅದಕ್ಕೆ ನ್ಯಾಯಾಲಯವು ಆದೇಶ ನೀಡಿ ನಿಯಮ ರೂಪಿತಗೊಳ್ಳದ ಹೊರೆತು ಸ್ವಪ್ರೇರಣೆಯಿಂದ ಮೇಲ್ವಾಟು ವೆಚ್ಚವನ್ನು ಸಂಗ್ರಹಿಸುವುದು ನಿಯಮ ಬಾಹಿರವೆಂದು ತಿಳಿಸಿ ಅರ್ಜಿದಾರರಿಗೆ ಅವರು ಪಾವತಿಸಿರುವ ಹಣವನ್ನು ಹಿಂದಕ್ಕೆ ನೀಡಬೇಕೆಂದು ಆದೇಶ ನೀಡಿತು. ಇದಾದ ನಂತರ ಮೇಲ್ವಾಟು ವೆಚ್ಚದ ಸಂಗ್ರಹಣೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಮುಚ್ಚಳಿಕೆ ಪಡೆದು ಖಾತೆ ನೋಂದಾಯಿಸುವ ಕ್ರಮವನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ.



ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಮೇಲ್ವಾಟು ವೆಚ್ಚವನ್ನು ವಿಧಿಸಲು ಪ್ರತ್ಯೇಕ ನಿಯಮಾವಳಿಗಳನ್ನು ರಚಿಸುವುದು ಅಗತ್ಯವೆಂದು ಕಂಡು ಬಂದ ಹಿನ್ನಲೆಯಲ್ಲಿ, ಮಾನ್ಯ ಆಡಳಿತಗಾರರ ಅನುಮೋದನೆ ಪಡೆದು ಸುಧಾರಣಾ ವೆಚ್ಚವನ್ನು ವಿಧಿಸುವ ಕುರಿತು ಕರಡು ನಿಯಮಗಳನ್ನು ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಇದನ್ನು ಪರಿಶೀಲಿಸಿದ ಸರ್ಕಾರವು ದಿನಾಂಕ : 3–2–2010 ರ ಅಧಿಸೂಚನೆ ಸಂಖ್ಯೆ : ನಅಇ 522 ಎಂಎನ್‌ಯು 2009 ಅನ್ನು ಹೊರಡಿಸಿ ಕರ್ನಾಟಕ ಪೌರ ನಿಗಮಗಳ (ಸುಧಾರಣಾ ವೆಚ್ಚಗಳು ವಸೂಲಿ) ನಿಯಮಗಳು 2009 ನ್ನು ಜಾರಿಗೊಳಿಸಿ ಆದೇಶ ನೀಡಿರುತ್ತದೆ.

ಸದರಿ ನಿಯಮಗಳು ಜಾರಿಗೊಳ್ಳುವ ಮುನ್ನ ಪರಿಶೀಲಿಸಿದಾಗ ನಿಯಮ 4 ರಲ್ಲಿ ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಾಡಿರುವ ವೆಚ್ಚಗಳು ಮಾತ್ರ ಸುಧಾರಣಾ ವೆಚ್ಚಗಳೆಂದು ಘೋಷಿಸಲು ಅವಕಾಶ ಕಲ್ಪಿಸಿರುವುದನ್ನು ಗಮನಿಸಲಾಯಿತು. ಆದರೆ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಳ್ಳುವ ಆಸ್ತಿಗಳಿಗೆ ಅವಶ್ಯವಿರುವ ಮೂಲ ಭೂತ ಸೌಲಭ್ಯಗಳನ್ನು ಹಂತ ಹಂತದಲ್ಲಿ ಒದಗಿಸಬೇಕಾಗಿರುವುದರಿಂದ ಈ ಮೇಲಿನ ನಿಯಮವು ಸೂಕ್ತವಾಗುವುದಿಲ್ಲವೆಂದು

ಮನಗಂಡು ಸದರಿ ನಿಯಮದಲ್ಲಿ ಈಗಾಗಲೇ ಮಾಡಲಾದ ವೆಚ್ಚಗಳು ಹಾಗೂ ಮುಂದೆ ಮಾಡಬಹುದಾದ ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಎಂಬ ಪದಗಳನ್ನು ನಿಯಮದಲ್ಲಿ ಅಳವಡಿಸುವಂತೆ ಸರ್ಕಾರವನ್ನು ಕೋರಲಾಯಿತು. ಇದನ್ನೂ ಪರಿಗಣಿಸಿದ ಸರ್ಕಾರವು ದಿನಾಂಕ : 30–3–2010 ರ ಅಧಿಸೂಚನೆ ಸಂಖ್ಯೆ : ನಅಇ 522 ಎಂಎನ್‌ಯು 2009 ರಲ್ಲಿ ಈ ಮೇಲೆ ತಿಳಿಸಿದ ತಿದ್ದುಪಡಿ ನಿಯಮಗಳನ್ನು ಅನುಮೋದಿಸಿ ಪ್ರಕಟಿಸಲಾಯಿತು.

ಭೂಪರಿವರ್ತನೆಗೊಂಡು ಹೊಸದಾಗಿ ಬಿಬಿಎಂಪಿ ಖಾತೆ ಬಯಸಿ ಬರುವ ಆಸ್ತಿಗಳು ಕೃಷಿಭೂಮಿಯ ಸ್ವರೂಪದಲ್ಲಿಯೂ ಇರುತ್ತದೆ. ಇವುಗಳಲ್ಲಿ ಬಡಾವಣೆ ಸ್ವರೂಪ ಅಭಿವೃದ್ಧಿ ಇರುವುದಿಲ್ಲ. ಅಲ್ಲದೆ ನಿಯಮಾನುಸಾರ ಪೌರ ಸೌಲಭ್ಯಗಳನ್ನು ಒದಗಿಸಲು ಬಿಡಬೇಕಾದ ಸ್ಥಳಗಳನ್ನು ಪಾಲಿಕೆಗೆ ವಹಿಸಿಕೊಡುವುದಿಲ್ಲ. ಇಂತಹ ಸ್ವತ್ತುಗಳಿಗೆ ಏಕ ನಿವೇಶನವೆಂದು

ಪರಿಗಣಿಸಿ ನಿಯಮಾನುಸಾರ ಮುಂದೆ ಅನುಸರಿಸಬೇಕಾದ ಕ್ರಮಗಳನ್ನು ಕಾಯ್ದಿರಿಸಿ ಖಾತೆ ನೀಡುವಂತೆ ಸರ್ಕಾರದ ಪತ್ರದ ಸಂಖ್ಯೆ : ನಅಇ 39 ಬೆಂಯೊಪ್ರಾ 2002 ದಿನಾಂಕ : 16–7–2004 ರಲ್ಲಿ ತಿಳಿಸಲಾಗಿದೆ. ಇಂತಹ ಸ್ವತ್ತುಗಳ ಅನುಕೂಲಕ್ಕಾಗಿ ಪಾಲಿಕೆಯಿಂದ ಒದಗಿಸಬೇಕಾದ ಪೌರ ಸೌಲಭ್ಯಗಳು ಹಾಗೂ ಕಲಮು 58 ರಲ್ಲಿ ನಿರ್ಧಿಷ್ಟಪಡಿಸಿದ ಆಬ್ಲಿಗೇಟರಿ ಕರ್ತವ್ಯಗಳನ್ನು ಹೊರತುಪಡಿಸಿ ನಾಗರೀಕರ ನಿರೀಕ್ಷೆಗೆ ಅನುಗುಣವಾಗಿ ಉತ್ತಮ ಮಟ್ಟದ ಮೂಲ ಸೌಕರ್ಯಗಳನ್ನು ಒದಗಿಸಲು ಪಾಲಿಕೆಯಿಂದ ಮಾಡಿರುವ ಹಾಗೂ ಮಾಡಬಹುದಾದ ವೆಚ್ಚಗಳನ್ನು ಗಮನದಲ್ಲಿರಿಸಿಕೊಂಡು ಈಗ ಹೊಸದಾಗಿ ರೂಪಿತಗೊಂಡಿರುವ ನಿಯಮಗಳ ಅನುಸಾರವಾಗಿ ಸುಧಾರಣಾ ವೆಚ್ಚವನ್ನು ವಿಧಿಸಲು ತೀರ್ಮಾನ ಕೈಗೊಳ್ಳಬೇಕಾಗಿದೆ.

ಕರ್ನಾಟಕ ಪೌರ ನಿಗಮಗಳ (ಸುಧಾರಣಾ ವೆಚ್ಚಗಳು ವಸೂಲಿ) ನಿಯಮಗಳು, 2009 ನಿಯಮ 4 ರ ಅನ್ವಯ ಆಯುಕ್ತರು, ವಿವಿಧ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ್ದಕ್ಕಾಗಿ ಅಥವಾ ಒದಗಿಸುವುದಕ್ಕಾಗಿ ಮಾಡಿದ ಹಾಗೂ ಮಾಡಬಹುದಾದ ವೆಚ್ಚಗಳನ್ನು ಪೌರ ನಿಗಮಗಳ ಕಾಯ್ದೆ 1976, ರ 466 ನೇ ಪ್ರಕರಣದ ಅಡಿಯಲ್ಲಿ ಸುಧಾರಣಾ ವೆಚ್ಚಗಳೆಂದು ಘೋಷಿಸಬಹುದು ಮತ್ತು ಈ ಸುಧಾರಣಾ ವೆಚ್ಚಗಳನ್ನು, ಅಸೆಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಕರ ನಿರ್ಧರಿಸದ ಅಥವಾ ಹೊಸದಾಗಿ ಸೇರ್ಪಡೆಯಾದ, ಅಭಿವೃದ್ಧಿಯಾಗದ, ಭಾಗಶಃ ಅಭಿವೃದ್ಧಿಯಾದ ಅಥವಾ ಏಕ ಘಟಕ ಸ್ವತ್ತು ಅಥವಾ ಸ್ವತುಗಳ ಸಮೂಹ ಅಥವಾ ಒಂದು ಸ್ಥಳ ಅಥವಾ ಬಡಾವಣೆಗಳಲ್ಲಿ, ಈ ಸೌಲಭ್ಯಗಳಿಂದ ಪ್ರಯೋಜನ ಪಡೆದ ಅಥವಾ ಪ್ರಯೋಜನ ಪಡೆಯಬಹುದಾದ, ಮಾಲೀಕ ಅಥವಾ ಅಧಿಭೋಗದಾರರ ಮೇಲೆ ವಿಧಿಸಬಹುದು ಮತ್ತು ಸಂಗ್ರಹಿಸಬಹುದಾಗಿದೆ.



ನಿಯಮ 5 ರಲ್ಲಿ ಹಾಗೆ ಮಾಡಿದ ಸುಧಾರಣಾ ವೆಚ್ಚಗಳನ್ನು ಮೇಲೆ 3 ನೇ ನಿಯಮದಲ್ಲಿ ನಮೂದಿಸಿರುವ ಮಾಲೀಕ ಅಥವಾ ಅಧಿಭೋಗದಾರರಿಂದ ಖಾತಾ ನೋಂದಾವಣೆ ಸಮಯದಲ್ಲಿ ಪೂರ್ಣವಾಗಿಯಾಗಲೀ ಅಥವಾ ಕಂತುಗಳಲ್ಲಾಗಲೀ ಅಥವಾ ಆಯುಕ್ತರು ಸೂಕ್ತವೆಂದು ಭಾವಿಸಬಹುದಾದಂಥ ವಿಧಾನದಲ್ಲಿ ಮತ್ತು ಯಾವುದೇ ಸಮಯದಲ್ಲಿ ಸಂಗ್ರಹಿಸಬಹುದಾಗಿದೆ.

ಈ ನಿಯಮಗಳ ಅನ್ವಯ ಕ್ರಮ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೆವಿನ್ಯೂ ಬಡಾವಣೆಗಳಲ್ಲಿರುವ ಸ್ವತ್ತುಗಳಿಗೆ ಯಾವ ದರದಲ್ಲಿ ಸುಧಾರಣಾ ವೆಚ್ಚವನ್ನು ವಿಧಿಸಬಹುದು ಎಂಬುದರ ಬಗ್ಗೆ ಪರಿಶೀಲಿಸಿ ಅಗತ್ಯ ಶಿಫಾರಸ್ಸು ನೀಡಲು ಪ್ರಧಾನ ಅಭಿಯಂತರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು ನಂತರ ದಿನಾಂಕ : 29–9–2010 ರಂದು ನೆಡೆದ ಸಭೆಯ ನಡವಳಿಗಳಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಅಳತೆಯ ಸ್ವತ್ತುಗಳಿಗೆ ವಿವಿಧ ರೀತಿಯ ದರಗಳನ್ನು ವಿಧಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ವಿಧಿಸಲು ಉದ್ದೇಶಿಸಲಾಗಿರುವ ಸುಧಾರಣಾ ವೆಚ್ಚ |
|---|---|---|
| 1 | 1200 ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ (111.48 ಚ.ಮೀ) | ಒಂದು ಚ.ಮೀ.ಗೆ. ರೂ. 200/– ರಂತೆ |
| 2 | 1200 ಚದರಡಿಗಿಂತ (111.48 ಚ.ಮೀ) ಮೇಲ್ಪಟ್ಟು 2400 ಚದರಡಿಗಳ (222.96 ಚ.ಮೀ) ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 250/– ರಂತೆ |
| 3 | 2400 (222.96 ಚ.ಮೀ) ಚದರಡಿಗಿಂತ ಮೇಲ್ಪಟ್ಟು 6000 (557.41 ಚ.ಮೀ) ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 350/– ರಂತೆ |
| 4 | 6000 (557.41 ಚ.ಮೀ) ಚದರಡಿಗಿಂತ ಮೇಲ್ಪಟ್ಟಿರುವ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 460/– ರಂತೆ |

ಸದರಿ ಸಮಿತಿಯ ದಿನಾಂಕ : 23–9–2010 ರ ವಿವರವಾದ ನಡವಳಿಕೆಗಳ ಪ್ರತಿಯನ್ನು ಕಡತದಲ್ಲಿ ಮಂಡಿಸಲಾಗಿದೆ.

ಈ ಶಿಫಾರಸ್ಸುಗಳನ್ನು ಪರಾಮರ್ಶಿಸಲು ಹಾಗೂ ಸುಧಾರಣಾ ವೆಚ್ಚಗಳ ದರವನ್ನು ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದೆ.

**<u>ನಿರ್ಣಯ</u> :– ಮಾನ್ಯ ಆಯುಕ್ತರ ದಿನಾಂಕ 11–10–2010ರ ಟಿಪ್ಪಣಿಯನ್ನು ಈ ಕೆಳಕಂಡಂತೆ ದರಗಳನ್ನು ನಿಗಧಿಪಡಿಸುವ ಮಾರ್ಪಡಿನೊಂದಿಗೆ ಒಪ್ಪಿದೆ.**

| | |
|---|---|
| 1200 ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ (111.48 ಚ.ಮೀ) | ಒಂದು ಚ.ಮೀ.ಗೆ. ರೂ. 150/– ರಂತೆ |
| 1200 ಚದರಡಿಗಿಂತ (111.48 ಚ.ಮೀ) ಮೇಲ್ಪಟ್ಟು 2400 ಚದರಡಿಗಳ (222.96 ಚ.ಮೀ) ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 200/– ರಂತೆ |
| 2400 (222.96 ಚ.ಮೀ) ಚದರಡಿಗಿಂತ ಮೇಲ್ಪಟ್ಟು 6000 (557.41 ಚ.ಮೀ) ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 300/– ರಂತೆ |
| 6000 (557.41 ಚ.ಮೀ) ಚದರಡಿಗಿಂತ ಮೇಲ್ಪಟ್ಟಿರುವ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | ಒಂದು ಚ.ಮೀ.ಗೆ. ರೂ. 400/– ರಂತೆ |



## <u>09]. ವಿಷಯದ ಸಂಖ್ಯೆ :–ತೆಆಸ್ಥಾಸ/52/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಉ.ಆ(ಆರೋಗ್ಯ ಮತ್ತು ಜಾಹೀರಾತು)ಪಿಆರ್/744/10–11 ದಿನಾಂಕ:25–10–2010. ರಲ್ಲಿ ವಿವರಿಸಿರುವಂತೆ, 1)ಮಾನ್ಯ ಮುಖ್ಯಮಂತ್ರಿಗಳವರ ದಿನಾಂಕ:25–08–2008ರನಡವಳಿಯ ರೀತ್ಯಾ ಒಂದು ಸಮಗ್ರ ಜಾಹೀರಾತು ನೀತಿಯನ್ನು ತಯಾರಿಸಲು ಸೂಚಿಸಿದ್ದು, ಈ ಬಗ್ಗೆ ಕೆಲವು ರಸ್ತೆಗಳನ್ನು 'A' 'B' 'C' 'D' ವಲಯಗಳಲ್ಲಿ ಅದಲು ಬದಲು ಮಾಡಲಾಗಿದೆ. ಪಟ್ಟಿ ಲಗತ್ತಿಸಲಾಗಿದೆ.

2) ದಿನಾಂಕ:25–6–2010 ರಂದು ಪಾಲಿಕೆ ಸಭೆಯಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಅಕ್ರಮ ಜಾಹೀರಾತು ಫಲಕಗಳು ಸಾಕಷ್ಟು ತಲೆ ಎತ್ತಿರುವುದರಿಂದ ಪಾಲಿಕೆಗೆ ಆದಾಯ ಸೋರಿಕೆಯಾಗುತ್ತಿರುವುದಾಗಿ ಚರ್ಚೆಯಾಗಿ ಪೂಜ್ಯ ಮಹಾಪೌರರು ಈ ಬಗ್ಗೆ ಒಂದು ಸಭೆ ಕರೆದು ಚರ್ಚಿಸಿ ಒಂದು ಸಮಗ್ರ ನೀತಿ ಮಂಡಿಸುವುದಾಗಿ ತಿಳಿಸಿದ್ದು, ಈ ಬಗ್ಗೆ ದಿನಾಂಕ: 23–10–2010 ರಂದು ಮದ್ಯಾಹ: ಪೂಜ್ಯ ಮಹಾಪೌರರು ಒಂದು ಸಭೆ ಕರೆದಿದ್ದು ಸದರೀ ಸಭೆಯಲ್ಲಿ ಮಾನ್ಯ ಆಯುಕ್ತರು ಮಾನ್ಯ ಉಪ ಮಹಾಪೌರರು, ಮಾನ್ಯ ಆಡಳಿತ ಪಕ್ಷದ ನಾಯಕರು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ನಾಯಕರು ಜಾತ್ಯಾತೀತ ಜನತಾದಳ ರವರು ಹಾಗೂ ಎರಡು ಜಾಹೀರಾತು ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಹಾಗೂ ಪಾಲಿಕೆಯ ಪ್ರಧಾನ ಅಭಿಯಂತರರು, ಜಾಹೀರಾತು ವಿಭಾಗದ ಎಲ್ಲಾ ವಲಯಗಳ ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಹಾಜರಿದ್ದು, ಸಭೆಯಲ್ಲಿ ಪಾಲಿಕೆ ಆದಾಯ ಹೆಚ್ಚು ಮಾಡುವ ಬಗ್ಗೆ, ದಿನಾಂಕ:29-11–2008 ರಿಂದ ಹೊಸ ಜಾಹೀರಾತು ಫಲಕಗಳಿಗೆ ಅನುಮತಿ ನೀಡದೇ ಇರುವುದರಿಂದ ಅಕ್ರಮ ಜಾಹೀರಾತು ತಲೆ ಎತ್ತಿರುವುದರಿಂದಾಗಿ ಇವುಗಳನ್ನು ತೆರವುಗೊಳಿಸಲು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕೆಂದು ಅಥವಾ ಬೈಲಾ ನಿಯಮಗಳುನುಸಾರ ಇರುವ ಫಲಕಗಳಲ್ಲಿ ಆಯಾ ಅಳತೆಯ ವಾರ್ಷಿಕ ಜಾಹೀರಾತು ಶುಲ್ಕಕ್ಕೆ ಕಡಿಮೆ ಇಲ್ಲದಂತೆ ದಂಡ ವಿಧಿಸಿ ಸಕ್ರಮ ಮಾಡುವ ಬಗ್ಗೆ, ಹಾಲಿ ಇರುವ ಜಾಹೀರಾತು ಶುಲ್ಕ ಹೆಚ್ಚಿಸುವ ಬಗ್ಗೆ ಪಾಲಿಕೆ ಸ್ವತ್ತುಗಳ ಮೇಲೆ ಟೆಂಡರ್ ಮೂಲಕ ಹೆಚ್ಚು ಜಾಹೀರಾತುಗಳಿಗೆ ಅವಕಾಶಮಾಡಿ ಆದಾಯ ಹೆಚ್ಚುವರಿ ಮಾಡುವಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

3) ಶ್ರೀ. ಕೃಷ್ಣದೇವರಾಯ, ಜಾಹೀರಾತು ಸಂಘದ ಅಧ್ಯಕ್ಷರು, ಮನವಿ ಮಾಡುತ್ತಾ ಖಾಸಗಿ ಸ್ವತ್ತುಗಳ ಮೇಲೆ ಇರುವ ಜಾಹೀರಾತು ಫಲಕಗಳನ್ನು ನಿಯಮಾನುಸಾರ 2 ವರ್ಷಗಳ ಅವಧಿಗೆ ನವೀಕರಿಸಬೇಕೆಂದು, ಈ ಜಾಹೀರಾತು ಉದ್ದಿಮೆಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸುಮಾರು 20,000 ಕುಟುಂಬಗಳು ಅವಲಂಬಿತರಾಗಿರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ದಿನಾಂಕ:25–8–2008 ರಂದು ಮಾನ್ಯ ಮುಖ್ಯ ಮಂತ್ರಿಗಳವರ ಸಭೆಯಲ್ಲಿ ತೀರ್ಮಾನಿಸಿರುವಂತೆ, ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತುಗಳನ್ನು ನವೀಕರಿಸಿ ಮುಂದುವರೆಸಲು ಆದೇಶಿಸಿರುವುದಾಗಿ, ಹಾಲಿ ಇರುವ ಜಾಹೀರಾತು ತೆರಿಗೆ ಈಗಾಗಲೇ ಹೆಚ್ಚಾಗಿರುವುದಾಗಿ ಕೆಲವು ಆಯ್ದ ರಸ್ತೆಗಳಲ್ಲಿ ಮಾತ್ರ ಜಾಹೀರಾತು ಶುಲ್ಕವನ್ನು ಸ್ವಲ್ಪ ಹೆಚ್ಚು ಮಾಡಬಹುದೆಂದು ಅಂತಹ ರಸ್ತೆಗಳ ವಿವರ ನೀಡುವುದಾಗಿ ತಿಳಿಸಿರುತ್ತಾರೆ.

4) ಮಾನ್ಯ ಜಾತ್ಯಾತೀತ ಜನತಾದಳ ನಾಯಕರಾದ ಶ್ರೀ.ಪದ್ಮನಾಭರೆಡ್ಡಿ ರವರು ಸಾರ್ವಜನಿಕ ಆಸ್ತಿ ಮತ್ತು ಸಾರ್ವಜನಿಕರ ಪ್ರಾಣ ರಕ್ಷಣೆ ಹಿನ್ನೆಲೆಯಲ್ಲಿ ಬಹುಕಟ್ಟಡಗಳ ಮೇಲಿನ ಜಾಹೀರಾತು ಫಲಕಗಳಿಗೆ ಅನುಮತಿ ನೀಡುವುದನ್ನು ನಿಷೇಧಿಸಬೇಕೆಂದು, ಒಂದೇ ಅಳತೆಯ ಸುಂದರವಾಗಿ ಕಾಣುವ ಜಾಹೀರಾತು ಫಲಕಗಳನ್ನು ಪಾಲಿಕೆಯ ಸ್ವತ್ತುಗಳ ಮೇಲೆ ನಿರ್ಮಿಸಿ ವಾರ್ಷಿಕವಾಗಿ ಹರಾಜು ಮಾಡಿದ್ದಲ್ಲಿ ಹೆಚ್ಚು ಆದಾಯ ಬರುತ್ತದೆಂದು ಕಾಲ ಕ್ರಮೇಣ ಖಾಸಗಿ ಸ್ವತ್ತುಗಳ ಮೇಲೆ ಜಾಹೀರಾತು ನಿಷೇಧಿಸಬೇಕೆಂದು ಸಲಹೆ ನೀಡಿರುತ್ತಾರೆ.



5) ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ.ನಾಗರಾಜು ರವರು ಈ ಬಗ್ಗೆ ಸಮ್ಮತಿಸುತ್ತಾ ಮುಂದುವರೆದು, ಪಾಲಿಕೆಯ ಸ್ವತ್ತುಗಳನ್ನು ಗುತ್ತಿಗೆ ಪಡೆದು ಷರತ್ತು ಉಲ್ಲಂಘನೆ ಮಾಡಿ ಕೆಲವು ಸಂಸ್ಥೆಗಳು ಸದರಿ ಗುತ್ತಿಗೆ ಪ್ರದೇಶವನ್ನು ಜಾಹೀರಾತು ಫಲಕ ಅಳವಡಿಸಲು ಮರು ಗುತ್ತಿಗೆ ನೀಡಿ, ಹೆಚ್ಚಿನ ನೆಲ ಬಾಡಿಗೆ ಪಡೆಯುತ್ತಿರುವುದಾಗಿ, ಅಂತಹ ಜಾಹೀರಾತು ಫಲಕಗಳ ನವೀಕರಣವನ್ನು ಮುಂದುವರೆಸಬಾರದೆಂದು, ಹಾಗೂ ಗುತ್ತಿಗೆಯನ್ನು ರದ್ದುಪಡಿಸಬೇಕೆಂದು ಸಲಹೆ ನೀಡಿರುತ್ತಾರೆ. ಅಲ್ಲದೇ

ಅನಧಿಕೃತ ಜಾಹೀರಾತು ಫಲಕಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಲು ಸೂಚಿಸಿ 2010–11ನೇ ಸಾಲಿಗೆ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ನವೀಕರಿಸುವಂತೆ, ಆದಾಯಗಳನ್ನು ದ್ವಿಗುಣಗೊಳಿಸುವಂತೆ ಸಲಹೆ ನೀಡಿರುತ್ತಾರೆ. ಉದಾಹರಣೆಗೆ ಅನಿಲ್ ಕುಂಬ್ಳೆ ಸರ್ಕಲ್ ನಿಂದ ಬೈಬಲ್ ಸೊಸೈಟಿ ಸ್ವತ್ತು, ಹೊಸೂರು ರಸ್ತೆಯ ಕ್ರಿಶ್ಚಿಯನ್ ಸಿಮಿಟ್ರಿ, ಬಿಬಿಎಂಪಿ ಸ್ವತ್ತುಗಳೆಂದು ಇವುಗಳ ಮೇಲೆ ನೀಡಲಾಗಿರುವ ಜಾಹೀರಾತು ಫಲಕಗಳ ನವೀಕರಣವನ್ನು ಮುಂದುವರೆಸಬಾರದೆಂದು, ಸಲಹೆ ನೀಡಿರುತ್ತಾರೆ.

6) ಶ್ರೀ.ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪಾಲಿಕೆಯ ಆದಾಯ ಹೆಚ್ಚು ಮಾಡುವ ದೃಷ್ಟಿಯಿಂದ ದಿನಾಂಕ: 29–11–2008 ರಿಂದ ಹೊಸ ಜಾಹೀರಾತು ಫಲಕಗಳಿಗೆ ಅನುಮತಿ ತಡೆ ಹಿಡಿದಿರುವುದನ್ನು ಪುನರ್‌ಪರಿಶೀಲಿಸಿ, ಹೊಸ

ಜಾಹೀರಾತುಗಳಿಗೆ ಅನುಮತಿ ನೀಡಬೇಕೆಂದು ಸೂಚಿಸಿರುತ್ತಾರೆ. ಹಾಲಿ ಇರುವ ಜಾಹೀರಾತು ಶುಲ್ಕವನ್ನು ಪುನರ್‌ಪರಿಶೀಲಿಸಿ ಹೆಚ್ಚು ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

7) ಪೂಜ್ಯ ಮಹಾಪೌರರು ಸಹ ಹೊಸದಾಗಿ ಜಾಹೀರಾತು ಫಲಕಗಳಿಗೆ ಅನುಮತಿ ನೀಡುವುದನ್ನು ಪಾಲಿಕೆಯ ಆದಾಯ ಹೆಚ್ಚುವ ಉದ್ದೇಶದಿಂದ ಪ್ರಾರಂಭಿಸಲು ಸೂಚಿಸಿರುತ್ತಾರೆ. ಹಾಗೂ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು 2010–11ನೇ ಸಾಲಿಗೆ ನವೀಕರಿಸಲು ಸೂಚಿಸಿರುತ್ತಾರೆ.

8) ಮಾನ್ಯ ಅಯುಕ್ತರು ಜಾಹೀರಾತು ನೀತಿಯನ್ನು ವಿಮರ್ಶಿಸಿ, ಒಂದು ಹೊಸ ಸಮಗ್ರ ಜಾಹೀರಾತು ನೀತಿಯನ್ನು ಅಳವಡಿಸಿಕೊಳ್ಳಲು ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು, ಆಡಳಿತ ಪಕ್ಷದ ನಾಯಕರು, ವಿರೋಧಪಕ್ಷದ ನಾಯಕರು, ಜನತಾದಳ ನಾಯಕರು ಹಾಗೂ ಎಲ್ಲಾ ಸದಸ್ಯರು ಸಹಕರಿಸಬೇಕೆಂದು ಎಲ್ಲಾ ಜಾಹೀರಾತು ಮಾಹಿತಿಯನ್ನು ಗಣಕೀಕೃತಗೊಳಿಸಲಾಗುವುದೆಂದು, ಮತ್ತು ನವೀಕರಣವನ್ನು ಆನ್–ಲೈನ್ ಮೂಲಕವೇ ಮಾಡಲಾಗುವುದೆಂದು, ಜಾಹೀರಾತು ಶಾಖೆಯಿಂದ ನಿರೀಕ್ಷಿಸಲಾಗಿರುವ ಸುಮಾರು 100 ಕೋಟಿ ಆದಾಯದ ಗುರಿಯನ್ನು ಸಾಧಿಸಲು ಎಲ್ಲರೂ ಸಹಕರಿಸಬೇಕೆಂದು ಮನವಿ ಮಾಡಿದರು.

ಈಗಾಗಲೇ ದಿನಾಂಕ:15–10–2010ರಂದು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಜಾಹೀರಾತು ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆದು ನಡವಳಿಯನ್ನು ತಯಾರಿಸಿರುವುದಾಗಿ ಸದರಿ ನಡವಳಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಈ ದಿನ ಸಭೆಯಲ್ಲಿ ನಡೆದ ಚರ್ಚೆಯನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ನವೀಕರಿಸುವ ಬಗ್ಗೆ ಹಾಗೂ ಹಾಲಿ ಇರುವ ಜಾಹೀರಾತು ತೆರಿಗೆಯನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ದಿನಾಂಕ:25–10–2010ರಂದೇ ಮಾನ್ಯ ಆಯುಕ್ತರವರ ಮುಖಾಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗೆ ಮಂಡಿಸುವಂತೆ ಉಪ ಆಯುಕ್ತರು(ಜಾಹೀರಾತು) ರವರಿಗೆ ಸೂಚನೆ ನೀಡಿರುತ್ತಾರೆ ಅದರಂತೆ ಈ ಕೆಳಕಂಡ ವಿಷಯಗಳನ್ನು ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.



1) ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ಪರಿಷ್ಕೃತ ಜಾಹೀರಾತು ತೆರಿಗೆ ವಿಧಿಸಿ 2010–11 ನೇ ಸಾಲಿಗೆ ನವೀಕರಿಸುವುದು.

2) ದಿನಾಂಕ:30–09–2009ರ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಲಾದ ಹಾಗೂ ಅನುಮೋದಿಸಲ್ಪಟ್ಟಿರುವ ವಿಷಯದ ಸಂಖ್ಯೆ:324/2009–10ರ ನಡವಳಿಯಂತೆ ಹೆಚ್ಚಿಸಲಾಗಿರುವ ಹಾಗು ಹಾಲಿ ಚಾಲ್ತಿಯಲ್ಲಿರುವ ದರಗಳ ಪ್ರತಿಯನ್ನು ಈ ಟಿಪ್ಪಣಿಯೊಂದಿಗೆ ಲಗತ್ತಿಸಿದ್ದು, 'ಬಿ' ಜಾಹೀರಾತು ವಲಯದಲ್ಲಿ
5 ಪಟ್ಟು ಜಾಹೀರಾತು ಶುಲ್ಕವನ್ನು ಹೆಚ್ಚಿಸುವುದು ಹಾಗೂ ಇತರೇ ಜಾಹೀರಾತು ವಲಯಗಳಲ್ಲಿ ಜಾಹೀರಾತು ಶುಲ್ಕವನ್ನು 3 ಪಟ್ಟು ಹೆಚ್ಚಿಸುವುದು.

3) ಹಾಲಿ ಬೈಲಾಗಳಲ್ಲಿ ಇರುವ 'ಎ' 'ಬಿ' 'ಸಿ' 'ಡಿ' ವಲಯಗಳಲ್ಲಿ ಈ ಟಿಪ್ಪಣಿಯೊಂದಿಗೆ ಮಂಡಿಸಲಾಗಿರುವ ಪಟ್ಟಿಯಂತೆ 2 ರಸ್ತೆಗಳನ್ನು 'ಸಿ' ವಲಯದಿಂದ 'ಎ' ವಲಯಕ್ಕೆ ವರ್ಗಾಹಿಸಲು ಹಾಗೂ 15 ಪ್ರಮುಖ ರಸ್ತೆಗಳನ್ನು 'ಸಿ' ಮತ್ತು 'ಡಿ' ವಲಯದಿಂದ 'ಬಿ' ವಲಯಕ್ಕೆ ವರ್ಗಾಹಿಸುವುದು.

4) ಭೂಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆಗಳಿಂದಾಗಿ ನೈಜ ಕಾರಣದಿಂದ ಒಂದು ಸ್ಥಳದಿಂದ ಮೊತ್ತೊಂದು ಸ್ಥಳಕ್ಕೆ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ವರ್ಗಾಹಿಸಿಕೊಳ್ಳಲು ಅನುಮತಿ ನೀಡುವುದು.

5) ದಿನಾಂಕ:29–11–2008ರ ಸುತ್ತೋಲೆಯನ್ನು ಸೂಕ್ತವಾಗಿ ಮಾರ್ಪಡಿಸಿ, 'ಎ' ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ಹೊಸದಾಗಿ ಖಾಸಗಿ ಸ್ವತ್ತುಗಳ ಮೇಲೆ ಜಾಹೀರಾತು ಫಲಕಗಳಿಗೆ ಪಾಲಿಕೆಯ ಆದಾಯ ದೃಷ್ಟಿಯಿಂದ ಅನುಮತಿ ನೀಡುವುದು.

6) ಬೈಲಾ ನಿಯಮ 3 ಎ (22) ಜಾಹೀರಾತು ಶುಲ್ಕವನ್ನು ನವೀಕರಣ ಮಾಡುವ ಪ್ರಾರಂಭದಲ್ಲಿ ಪೂರ್ಣ ಶುಲ್ಕವನ್ನು ಒಂದೇ ಬಾರಿಗೆ ಪಾವತಿಸಿಕೊಳ್ಳುವ ಬಗ್ಗೆ ತಿದ್ದುಪಡಿ ಮಾಡುವುದು.

7) ಎಲ್.ಇ.ಡಿ, ಟ್ರೈವಿಜನ್, ಹಾಗೂ ನಿಯಾನ್ ಬೋರ್ಡ್‌ಗಳಿಗೆ ಈಗ ಹಾಲಿ ಇರುವ ಧರಗಳ ಮೇಲೆ 5 ಪಟ್ಟು ಹೆಚ್ಚು ತೆರಿಗೆ ವಿಧಿಸುವುದು.

8) ಜಾಹೀರಾತು ಬೈಲಾ 3ಎ(7) ನಿಯಮವನ್ನು ತಿದ್ದುಪಡಿ ಮಾಡಿ ಯಾವುದೇ ಅನಧಿಕೃತ ಜಾಹೀರಾತು ಫಲಕಗಳಿಗೆ ಮಾಹಿತಿ ಲಭ್ಯವಿದ್ದಲ್ಲಿ ಜಾಹೀರಾತುದಾರರಿಗೆ, ಇಲ್ಲವಾದಲ್ಲಿ ಕಟ್ಟಡ/ಸ್ವತ್ತಿನ ಮಾಲೀಕರಿಗೆ ಸದರಿ ಅಳತೆಯ ಜಾಹೀರಾತು ಫಲಕದ ವಾರ್ಷಿಕ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ವಸೂಲಿ ಮಾಡುವುದು.

9) ಹಲವಾರು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಅಥವಾ ಘನ ಉಚ್ಚ ನ್ಯಾಯಾಲಯದಲ್ಲಿ ಸದರಿ ಫಲಕಗಳನ್ನು ತೆರವುಗೊಳಿಸದಂತೆ ಡೀಮ್ಡ್ ನವೀಕರಣವನ್ನು ಕೋರಿ ಅರ್ಜಿ ಸಲ್ಲಿಸಿ ತಡೆ ಆಜ್ಞೆ ಗಳನ್ನು ಪಡೆದಿದ್ದಾಗ್ಯೂ ಸಹ ವಾಣಿಜ್ಯ ಜಾಹೀರಾತು ಪ್ರದರ್ಶಿಸಿರುವ ಅವದಿಗೆ ಪರಿಷ್ಕರಿಸಿದ ಜಾಹೀರಾತು ಶುಲ್ಕವನ್ನು ಸದರಿ ಜಾಹೀರಾತುದಾರರಿಂದ ವಸೂಲಿ ಮಾಡುವುದು.

10) ಬೈಲಾ ನಿಯಮ 3ಎ(13)ರಲ್ಲಿ ಮುಂದುವರೆಯುತ್ತಾ ಆದಾಗ್ಯೂ ಪಾಲಿಕೆಯ ಆದಾಯದ ದೃಷ್ಟಿಯಿಂದ ಮತ್ತು ಸಾರ್ವಜನಿಕರಿಂದ ಮಾಹಿತಿ ನೀಡುವ ದೃಷ್ಟಿಯಿಂದ ಪಾಲಿಕೆಯ ಸ್ವತ್ತುಗಳ ಮೇಲೆ ಅಂದರೇ ಸ್ಥಳ ಲಭ್ಯವಿರುವ ಕಡೆ ಪಾದಚಾರಿ ಮಾರ್ಗ, ಆಟದ ಮೈದಾನಗಳು, ಶಾಲಾ ಕಾಲೇಜು ಆವರಣ, ಪಾಲಿಕೆಯ ಅಧೀನದಲ್ಲಿರುವ ಸ್ಮಶಾನಗಳು, ಕೆರೆಕಟ್ಟೆಗಳ ಮೇಲೆ, ಇತ್ಯಾಧಿಗಳಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಏಕ ಕಂಬ (Unipole) ಜಾಹೀರಾತು ಫಲಕವನ್ನು ನಿರ್ಮಾಣ ಮಾಡಿ ಹರಾಜು ಮೂಲಕ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಿ ಆದಾಯವನ್ನು ಕ್ರೋಢೀಕರಿಸಿಕೊಳ್ಳುವುದು.

ಮೇಲ್ಕಂಡ ಕ್ರಮ ಸಂಖ್ಯೆ 1 ರಿಂದ 10 ರವರೆಗಿನ ಅಂಶಗಳ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಲಾದ ಟಿಪ್ಪಣಿ.



## ಎ, ಬಿ, ಸಿ, ಡಿ ವಲಯಗಳಲ್ಲಿ ಅದಲು ಬದಲು ಮಾಡಿರುವ ಪಟ್ಟಿ

## ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಎ' ವಲಯಕ್ಕೆ ಸೇರಿಸುವ ಪ್ರಸ್ತಾವನೆ

| ಕ್ರ. ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಸ್ಯಾಂಕೀ ರಸ್ತೆ–ಭಾಷ್ಯಂ ಸರ್ಕಲ್‌ನಿಂದ ಹೈ ಗ್ರೌಂಡ್ಸ್ ಪೋಲೀಸ್ ಸ್ಟೇಷನ್‌ವರೆಗೆ ಕಾವೇರಿ ಜಂಕ್ಷನ್, ಬಿ.ಡಿ.ಎ. ಜಂಕ್ಷನ್, ವಿಂಡ್ಸರ್ ಮ್ಯಾನರ್ ಜಂಕ್ಷನ್, ಬಸವೇಶ್ವರ ವೃತ್ತ ಮುಖಾಂತರ | 'ಸಿ' | 'ಎ' |
| 2 | ಪ್ಯಾಲೇಸ್ ಲೂಪ್ ರಸ್ತೆ–ಹೈಗ್ರೌಂಡ್ಸ್ ವರೆಗೆ | 'ಸಿ' | 'ಎ' |

## ಇತರೇ ವಲಯಗಳಲ್ಲಿ ಇರುವ ರಸ್ತೆಗಳನ್ನು 'ಬಿ' ವಲಯಕ್ಕೆ ಸೇರಿಸುವ ಪ್ರಸ್ತಾವನೆ

| ಕ್ರ. ಸಂ. | ರಸ್ತೆ | ಹಾಲಿ ಇರುವ ವಲಯ | ಈಗ ಬದಲಾವಣೆ ಮಾಡಬೇಕಾಗಿರುವ ವಲಯ |
|---|---|---|---|
| 1 | ಕನ್ನಿಂಗ್‌ಹ್ಯಂ ರಸ್ತೆ–ಸ್ಯಾಂಕಿ ರಸ್ತೆಯಿಂದ ಕ್ವೀನ್ಸ್ ಸರ್ಕಲ್ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 2 | ರಾಜಾಜಿನಗರ 60ನೇ ಕ್ರಾಸ್–ಕಾರ್ಡ್ ರಸ್ತೆ ಜಂಕ್ಷನ್‌ನಿಂದ ಭಾಷ್ಯಂ ಸರ್ಕಲ್ ವರೆಗೆ | 'ಸಿ' | 'ಬಿ' |
| 3 | ರಾಜಾಜಿನಗರ 59ನೇ ಕ್ರಾಸ್‌ರಸ್ತೆ–ಭಾಷ್ಯಂ ಸರ್ಕಲ್ ಮೂಲಕ ಓಕಳಿಪುರಂ ಮುಖ್ಯರಸ್ತೆಯಿಂದ ಫ್ಲಾಟ್‌ಫಾರಂ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 4 | ವಿಠಲ್ ಮಲ್ಯ ರಸ್ತೆ–ಸೆಂಟ್ ಮಾರ್ಕ್ಸ್ ರಸ್ತೆಯಿಂದ ಟೀಫಾನೀಸ್ ಸರ್ಕಲ್‌ನಿಂದ ರಾಜಾರಾಂ ಮೋಹನ್ ರಾಯ್ ರಸ್ತೆ ಜಂಕ್ಷನ್‌ವರೆಗೆ | 'ಸಿ' | 'ಬಿ' |
| 5 | ಬಳ್ಳಾರಿ ರಸ್ತೆ–ಕಾವೇರಿ ವೃತ್ತದಿಂದ ಪಾಲಿಕೆ ಸರಹದ್ದು ವರೆಗೆ | 'ಡಿ' | 'ಬಿ' |
| 6 | ಪ್ಯಾಲೇಸ್ ರಸ್ತೆ–ಸಿಂಧೂ ಹೋಟೆಲ್‌ನಿಂದ ಅಂಡರ್ ಬ್ರಿಡ್ಜ್‌ವರೆಗೆ | 'ಡಿ' | 'ಬಿ' |

| | | | |
|---|---|---|---|
| 7 | ಜಯಮಹಲ್ ರಸ್ತೆ–ಮೇಖ್ರಿ ವೃತ್ತದಿಂದ ದಂಡು ರೈಲ್ವೆ ನಿಲ್ದಾಣದವರೆಗೆ | 'ಡಿ' | 'ಬಿ' |
| 8 | ಮಿಲ್ಲರ್ಸ್ ರಸ್ತೆ–ನೇತಾಜಿ ರಸ್ತೆಯಿಂದ ಡಾ॥ಎಂ.ವಿ. ಜಯರಾಮ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 9 | ಸ್ಟೇಷನ್ ರಸ್ತೆ–ನೇತಾಜಿ ರಸ್ತೆ ದಂಡು ರೈಲ್ವೆ ನಿಲ್ಧಾಣದಿಂದ ಟ್ಯಾನ್ರಿ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 10 | ರಿಚ್‌ಮಂಡ್ ರಸ್ತೆ–ವೆಲ್ಲಾರ್ ಜಂಕ್ಷನ್‌ನಿಂದ ಟ್ರಿನಿಟಿ ಸರ್ಕಲ್‌ವರೆಗೆ | 'ಡಿ' | 'ಬಿ' |
| 11 | ವಿಕ್ಟೋರಿಯಾ ರಸ್ತೆ–ಡಿಸೋಜ ಸರ್ಕಲ್‌ನಿಂದ ಏರ್‌ಪೋರ್ಟ್ ರಸ್ತೆವರೆಗೆ | 'ಡಿ' | 'ಬಿ' |
| 12 | ಕೇಂಬ್ರಿಡ್ಜ್ ರಸ್ತೆ–ಹಲಸೂರು ಸರ್ಕಲ್‌ನಿಂದ ಏರ್‌ಪೋರ್ಟ್ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 13 | ಇಂಟರ್‌ಮಿಡಿಯಟ್ ರಿಂಗ್ ರಸ್ತೆ–ಕೋರಮಂಗಲ ದಿಂದ ಏರ್‌ಪೋರ್ಟ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 14 | 100 ಅಡಿರಸ್ತೆ–ಇನ್ನರ್ ರಿಂಗ್ ರಸ್ತೆ (17ನೇ ಮುಖ್ಯರಸ್ತೆ ಕೋರಮಂಗಲ) ಹೊಸೂರು ರಸ್ತೆ ಜಂಕ್ಷನ್‌ನಿಂದ ಕೇಂದ್ರಿಯ ಸಧನ್‌ನಿಂದ ಸರ್ಜಾಪುರ ರಸ್ತೆ ಜಂಕ್ಷನ್‌ನಿಂದ ಬಿ.ಡಿ.ಎ. ಕಾಂಪ್ಲೆಕ್ಸ್‌ನಿಂದ 80 ಅಡಿ ಪೆರಿಫೆರಿಯಲ್ ರಸ್ತೆ ಜಂಕ್ಷನ್‌ವರೆಗೆ | 'ಡಿ' | 'ಬಿ' |
| 15 | ಇನ್‌ಫ್ಯಾಂಟ್ರಿ ರಸ್ತೆ | -- | 'ಬಿ' |

<u>**ನಿರ್ಣಯ :–**</u> ಆಯುಕ್ತರ ದಿನಾಂಕ : 26–10–2010ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿದೆ.

1. ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ಪರಿಷ್ಕೃತ ಜಾಹೀರಾತು ತೆರಿಗೆ ವಿಧಿಸಿ 2 ವರ್ಷಗಳ ಅವಧಿಗೆ ಅಂದರೆ 2010–11 ಮತ್ತು 2011–12ನೇ ಸಾಲಿಗೆ ನವೀಕರಿಸುವುದು. ಪರಿಷ್ಕೃತ ಜಾಹೀರಾತು ತೆರಿಗೆ ಪೂರ್ವಾನ್ವಯ ದಿನಾಂಕ : 01–07–2010 ರಿಂದ ಜಾರಿಗೆ ಬರುವುದು.
2. 'ಬಿ' ಜಾಹೀರಾತು ವಲಯದಲ್ಲಿ ಶೇಕಡ 15% ರಷ್ಟು ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು ಉಳಿದ ವಲಯಗಳಲ್ಲಿ 'ಸಿ' ಮತ್ತು 'ಡಿ' ವಲಯಗಳಲ್ಲಿ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 25% ರಷ್ಟು ಹೆಚ್ಚು ಮಾಡುವುದು.

3. ಭೂಸ್ವಾಧೀನ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆಗಳಿಂದಾಗಿ ನೈಜ ಕಾರಣದಿಂದ ಒಂದು ಸ್ಥಳದಿಂದ ಮೊತ್ತೊಂದು ಸ್ಥಳಕ್ಕೆ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳನ್ನು ವರ್ಗಾಯಿಸಿಕೊಳ್ಳಲು ವರ್ಗಾವಣೆ ಶುಲ್ಕ ರೂ.5,000–00 ವಿಧಿಸಿ ಅನುಮತಿ ನೀಡುವುದು.
4. ದಿನಾಂಕ:29–11–2008ರ ಸುತ್ತೋಲೆಯನ್ನು ಸೂಕ್ತವಾಗಿ ಮಾರ್ಪಡಿಸಿ, 'ಎ' ವಲಯ ಹೊರತುಪಡಿಸಿ ಉಳಿದ ವಲಯಗಳಲ್ಲಿ ಹೊಸದಾಗಿ ಖಾಸಗಿ ಸ್ವತ್ತುಗಳ ಮೇಲೆ ವಾಣೀಜ್ಯ ಜಾಹೀರಾತು ಫಲಕಗಳಿಗೆ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ವಿಶೇಷ ಪ್ರಕರಣಗಳಲ್ಲಿ ಅನುಮತಿ ನೀಡಲು ಹೊಸ ದರಗಳನ್ನು ನಿಗಧಿಪಡಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಕಡತ ಮಂಡಿಸುವುದು.
5. ಎಲ್.ಇ.ಡಿ, ಹಾಗೂ ಟ್ರೈವಿಜನ್, ಬೋರ್ಡ್‌ಗಳಿಗೆ ಈಗ ಹಾಲಿ ಇರುವ ದರಗಳ ಮೇಲೆ ಶೇಕಡ 15% ಆರೋಗ್ಯ ಕರ ಸೇರಿ ಹಾಲಿ ಇರುವ ದರಗಳನ್ನು ಶೇಕಡ 50% ರಷ್ಟು ಹೆಚ್ಚು ಮಾಡುವುದು.
6. ಜಾಹೀರಾತು ಬೈಲಾ 3ಎ(7) ನಿಯಮವನ್ನು ತಿದ್ದುಪಡಿ ಮಾಡಿ ಯಾವುದೇ ಅನಧಿಕೃತ ಜಾಹೀರಾತು ಫಲಕಗಳಿಗೆ ಮಾಹಿತಿ ಲಭ್ಯವಿದ್ದಲ್ಲಿ ಜಾಹೀರಾತುದಾರರಿಗೆ, ಇಲ್ಲವಾದಲ್ಲಿ ಕಟ್ಟಡ/ಸ್ವತ್ತಿನ ಮಾಲೀಕರಿಗೆ ಸದರಿ ಅಳತೆಯ ಜಾಹೀರಾತು ಫಲಕದ 2 ವರ್ಷಗಳ ಶುಲ್ಕವನ್ನು ದಂಡದ ರೂಪದಲ್ಲಿ ವಿಧಿಸಿ ವಸೂಲಿ ಮಾಡುವುದು ಹಾಗೂ ಸದರಿ ಅನಧಿಕೃತ ಫಲಕಗಳನ್ನು ತೆರವುಗೊಳಿಸುವುದು.
7. 2009ರಿಂದ ಅನುಮತಿ ಪಡೆದಿರುವ ಫಲಕಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳಲ್ಲಿ ಘನ ನ್ಯಾಯಾಲಯಗಳಲ್ಲಿ ಸದರಿ ಫಲಕಗಳನ್ನು ತೆರವುಗೊಳಿಸದಂತೆ ಡೀಮ್ಡ್ ನವೀಕರಣವನ್ನು ಕೋರಿ ಅರ್ಜಿ ಸಲ್ಲಿಸಿ ತಡೆ ಆಜ್ಞೆಗಳನ್ನು ಪಡೆದಿದ್ದು. ಸದರಿ ವಾಣಿಜ್ಯ ಜಾಹೀರಾತು ಪ್ರದರ್ಶಿಸಿರುವ ಅವಧಿಗೆ ಅಂದರೆ 01–07–2010 ರಿಂದಲೇ ಪರಿಷ್ಕರಿಸಿದ ಜಾಹೀರಾತು ಶುಲ್ಕವನ್ನು ಸದರಿ ಜಾಹೀರಾತುದಾರರಿಂದ ಪಾವತಿಸಿಕೊಂಡು ನವೀಕರಿಸುವುದು..
8. ಜಾಹೀರಾತು ಭೈಲಾ–2006 ಬೃ.ಬೆಂ.ಮ.ಪಾ. ವ್ಯಾಪ್ತಿಯ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳ ಜೊತೆಗೆ ಉಳಿಕೆ 5 ವಲಯಗಳಾದ 01) ಬೊಮ್ಮನಹಳ್ಳಿ ವಲಯ, 02) ಯಲಹಂಕ ವಲಯ 03) ರಾಜರಾಜೇಶ್ವರಿ ನಗರ ವಲಯ 04) ದಾಸರಹಳ್ಳಿ ವಲಯ 05) ಮಹದೇವಪುರ ವಲಯಗಳಲ್ಲಿಯೂ ದಿನಾಂಕ :16–01–2007 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ತರುವುದು..
9. 4ಎ(ll)ರಂತೆ ಏಜೆನ್ಸಿಯನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ ಹಾಲಿ ಇರುವ ರೂ.5,000–00 ಮೊತ್ತವನ್ನು ರೂ. 20,000–00 ಗಳಿಗೆ ಮತ್ತು ಸದರಿ ನೊಂದಣಿಯನ್ನು ಪ್ರತಿ 3 ವರ್ಷಗಳಿಗೊಮ್ಮೆ ನವೀಕರಿಸುವ ಬಗ್ಗೆ ಹಾಲಿ ಇರುವ ಮೊತ್ತ ರೂ.2,000–00 ಗಳಿಂದ ರೂ.5,000–00 ಗಳಿಗೆ ಹೆಚ್ಚಿಸುವುದು.
10. ಸೆಕ್ಷನ್ II 3 M(i)ಪ್ರಕಾರ ಸ್ವಯಂ ಜಾಹೀರಾತು ಬೋರ್ಡ್‌ಗಳ ಅಳತೆ 10 x 10 ಅಡಿಗಳಿಗೆ ಮೀರದಂತೆ ಕಟ್ಟುನಿಟ್ಟಿನ ಕ್ರಮವಹಿಸುವುದು.

**<u>10]. ವಿಷಯದ ಸಂಖ್ಯೆ :–ತೆಆಸ್ಥಾಸ/53/2010–11</u>**

ಆಯುಕ್ತರವರ ಟಿಪ್ಪಣೆ ಸಂಖ್ಯೆ: ಬಿ12(3)ಪಿಆರ್/13/10–11 ದಿನಾಂಕ: 13–10–2010. ರಲ್ಲಿ ವಿವರಿಸಿರುವಂತೆ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ, ವಿದ್ಯಾ ಇಲಾಖೆಯಲ್ಲಿ ಒಂದು ಸಹಾಯಕ ವಿದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ.738.ಡಿಪಿಐ91(ಪಿ)ಬೆಂಗಳೂರು ದಿ:17–02–1995ರ ಸರ್ಕಾರಿ ಆದೇಶದಂತೆ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಮಂಜೂರಾಗಿರುವ ಒಂದು ಸಹಾಯಕ ವಿದ್ಯಾಧಿಕಾರಿ ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಉನ್ನತೀಕರಿಸಿ, ರೂ.2375–4450ರ (2007ರ ಪರೀಷ್ಕೃತ ವೇತನ ಶ್ರೇಣಿ ರೂ.14050–25050) ವೇತನ ಶ್ರೇಣಿ ನಿಗಧಿಪಡಿಸಲು ಪ್ರಧಾನ ಕಾರ್ಯದರ್ಶಿ, ಪಾಲಿಕೆಯ ಶಾಲಾ ಮತ್ತು ಶಿಕ್ಷಕರ ಸಂಘ ರವರ ಮನವಿ ದಿನಾಂಕ:14–05–201 ರಂತೆ ಕೋರಿರುತ್ತಾರೆ.

ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ:ಇಡಿ.738.ಡಿಪಿಐ91(ಪಿ)ಬೆಂಗಳೂರು ದಿ:17–02–1995ರ ಆದೇಶದಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ ಶಿಕ್ಷಣಾಧಿಕಾರಿ ಹುದ್ದೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಉನ್ನತೀಕರಿಸಿ, ರೂ.2375–4450ರ (2007ರ ಪರಿಷ್ಕೃತ ವೇತನ ಶ್ರೇಣಿ ರೂ.14050–25050) ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗಿರುತ್ತದೆ.

ಈ ಸಂಬಂಧ, ವಿದ್ಯಾಧಿಕಾರಿಯವರ ವರದಿ ದಿನಾಂಕ: 17–06–2010 ಮತ್ತು ಮುಖ್ಯ ಲೆಕ್ಕಾಧಿಕಾರಿಗಳ ವರದಿ ದಿನಾಂಕ: 22–07–2010 ರ ವಿದ್ಯಾಧಿಕಾರಿ ಹಾಗೂ ಮುಖ್ಯಲೆಕ್ಕಾಧಿಕಾರಿ ರವರು ನೀಡಿರುವ ಅಭಿಪ್ರಾಯದ ಮೇರೆಗೆ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಮಂಜೂರಾಗಿರುವ ಒಂದು ಸಹಾಯಕ ವಿದ್ಯಾಧಿಕಾರಿ ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಉನ್ನತೀಕರಿಸಿ, ರೂ.2375–4450ರ (2007ರ ಪರಿಷ್ಕೃತ ವೇತನ ಶ್ರೇಣಿ ರೂ.14050–25050) ವೇತನ ಶ್ರೇಣಿಯನ್ನು ನಿಗಧಿಪಡಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 13–10–2010ರ ಟಿಪ್ಪಣಿಯನ್ನು ಒಪ್ಪಿದೆ.**

## 11]. ವಿಷಯದ ಸಂಖ್ಯೆ :–ತೆಆಸ್ಥಾಸ/54/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(3)ಪಿಆರ್/06/10–11 ದಿನಾಂಕ: 11–10–2010. ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ: ಇಡಿ115/ಡಿಪಿಐ/96 ಬೆಂಗಳೂರು,ದಿ:30.01.1997ರ ಆದೇಶದಲ್ಲಿ, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪೈಕಿ ವಿದ್ಯಾರ್ಥಿಗಳ ಸಂಖ್ಯೆ:750 ಕ್ಕಿಂತ ಹೆಚ್ಚು ಇರುವ (ಅದರಲ್ಲಿ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆ:400ಕ್ಕಿಂತ ಕಡಿಮೆ ಇರಬಾರದು ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳ ಸಂಖ್ಯೆ; 150 ಕ್ಕಿಂತ ಕಡಿಮೆ ಇರಬಾರದು) ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರೌಢಶಾಲಾ ವಿಭಾಗದ ರೂ.1720–3300ರ ವೇತನ ಶ್ರೇಣಿಯ ಒಂದು ಸಹ ಶಿಕ್ಷಕರ ಹುದ್ದೆಯನ್ನು ವೇತನ ಶ್ರೇಣಿ ರೂ.2050–3950ರ ಮುಖ್ಯ ಶಿಕ್ಷಕರ ಹುದ್ದೆಗೆ ಉನ್ನತೀಕರಿಸಿ, ಈ ಹುದ್ದೆಯನ್ನು ಉಪ ಪ್ರಾಂಶುಪಾಲರ ಹುದ್ದೆಯಾಗಿ ಉನ್ನತೀಕರಿಸಿ ಸೃಜಿಸಲು ಮಂಜೂರಾತಿ ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ115/ಡಿಪಿಐ/96 ಬೆಂಗಳೂರು,ದಿ:30.01.1997ರ ಸರ್ಕಾರಿ ಆದೇಶ ಹಾಗೂ ಆರೋಗ್ಯ ವಿದ್ಯಾಭ್ಯಾಸ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ನಡವಳಿಯ ದಿನಾಂಕ: 08–08–1997 ವಿಷಯದ ಸಂಖ್ಯೆ:16(67)ರಂತೆ, ಈ ಕಛೇರಿ ಆದೇಶ ಸಂಖ್ಯೆ:ಬಿ12(3)ಪಿಆರ್/570/96–97 ದಿ:26–08–1997ರ ಆದೇಶದಂತೆ, ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು 1) ಸಿ.ಜೆ.ಸಿ ಡಿಸ್ಪೆನ್ಸರಿ ರಸ್ತೆ 2) ಸಿ.ಜೆ.ಸಿ ಶ್ರೀರಾಂಪುರ ಹಾಗೂ 3) ಸಿ.ಜೆ.ಸಿ ಕ್ಲಿವ್‌ಲ್ಯಾಂಡ್ ಟೌನ್‌ಗಳಲ್ಲಿ ಈಗಾಗಲೇ 3 ಉಪ ಪ್ರಾಂಶುಪಾಲರ ಹುದ್ದೆ ಮಂಜೂರಾತಿಯಾಗಿದ್ದು, ಅದರಂತೆ, ಪಾಲಿಕೆಯ ಪ್ರೌಢಶಾಲೆ ಮತ್ತು ಕಾಲೇಜುಗಳೆರಡು ಒಟ್ಟಿಗೆ ಇರುವ ಕಡೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 750ಕ್ಕಿಂತ ಹೆಚ್ಚು ಇರುವ 1) ಸಿ.ಜೆ.ಸಿ.ಮಾಗಡಿ ರಸ್ತೆ, 2) ಸಿ.ಜೆ.ಸಿ.ಪಾದರಾಯನಪುರ, ಹಾಗೂ 3) ಸಿ.ಜೆ.ಸಿ. ಕಸ್ತೂರ್‌ಬಾನಗರ ಕಾಲೇಜುಗಳಿಗೆ 3 ಉಪ ಪ್ರಾಂಶುಪಾಲರ ಹುದ್ದೆಗಳನ್ನು ಸೃಜಿಸಲು ಪ್ರಧಾನ ಕಾರ್ಯದರ್ಶಿ, ಪಾಲಿಕೆಯ ಶಾಲಾ ಮತ್ತು ಶಿಕ್ಷಕರ ಸಂಘ ರವರ ಮನವಿ ದಿನಾಂಕ:14–05–2010ರಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ವಿದ್ಯಾಧಿಕಾರಿಯವರ ವರದಿ ದಿನಾಂಕ: 24–06–2010 ಮತ್ತು ಮುಖ್ಯ ಲೆಕ್ಕಾಧಿಕಾರಿಗಳ ವರದಿ ದಿನಾಂಕ: 11–08–2010.ರ ವಿದ್ಯಾಧಿಕಾರಿ ಹಾಗೂ ಮುಖ್ಯಲೆಕ್ಕಾಧಿಕಾರಿ ರವರು ನೀಡಿರುವ ಅಭಿಪ್ರಾಯ ವರದಿಯನ್ವಯ, ಪಾಲಿಕೆಯ ವಿದ್ಯಾ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಪಾಲಿಕೆಯ ಪ್ರೌಢಶಾಲೆ ಮತ್ತು ಕಾಲೇಜುಗಳೆರಡು ಒಟ್ಟಿಗೆ ಇರುವ ಕಡೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 750ಕ್ಕಿಂತ ಹೆಚ್ಚು ಇರುವ 1) ಸಿ.ಜೆ.ಸಿ.ಮಾಗಡಿ ರಸ್ತೆ, 2) ಸಿ.ಜೆ.ಸಿ.ಪಾದರಾಯನಪುರ, ಹಾಗೂ 3) ಸಿ.ಜೆ.ಸಿ. ಕಸ್ತೂರ್‌ಬಾನಗರ ಕಾಲೇಜುಗಳಿಗೆ 3 ಉಪ ಪ್ರಾಂಶುಪಾಲರ ಹುದ್ದೆಗಳನ್ನು ಸೃಜಿಸುವ ಕುರಿತು, ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 11–10–2010ರ ಟಿಪ್ಪಣಿಯನ್ನು ಒಪ್ಪಿದೆ.**



**12]. ವಿಷಯದ ಸಂಖ್ಯೆ :–ತೆಆಸ್ಥಾಸ/55/2010–11**

ಆಯುಕ್ತರವರ ಟಿಪ್ಪಣೆ ಸಂಖ್ಯೆ: ಬಿಬಿಎಂಪಿ(ಆತೋ)ಸಂಖ್ಯೆ:57/2010–11 ದಿನಾಂಕ: 11–10–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1079 ಉದ್ಯಾನವನಗಳು ಇದ್ದು, 721 ಉದ್ಯಾನವನಗಳನ್ನು ಹಾಗೂ ಸರ್ಕಲ್ಸ್, ಮೀಡಿಯನ್ಸ್‌ಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯವನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯಿಂದ ಮಾಡಲಾಗುತ್ತಿದೆ. ಆದಾಗಿ ಪಾಲಿಕೆಯ ತೋಟಗಾರಿಕೆ ಇಲಾಖೆಗೆ 872 ತೋಟಗಾರಿಕೆ ಮಾಲಿ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 350 ತೋಟಗಾರಿಕೆ ಮಾಲಿ ಹುದ್ದೆಗಳು ಖಾಲಿ ಇರುತ್ತವೆ. ಇದರಿಂದಾಗಿ, ತೋಟಗಾರಿಕೆ ಮಾಲಿಗಳ ಅಭಾವ ಉಂಟಾಗಿರುತ್ತದೆ. ಅಲ್ಲದೇ, ಪಾಲಿಕೆಯ ತೋಟಗಾರಿಕೆ ಇಲಾಖೆಯ ಉದ್ಯಾನವನಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿರುವುದಿಲ್ಲ.

ಪಾಲಿಕೆಯ ತೋಟಗಾರಿಕೆ ಇಲಾಖೆಯ ಕೆಲಸ ಕಾರ್ಯಗಳಿಗೆ ತೋಟಗಾರಿಕೆ ಮಾಲಿ ಹುದ್ದೆಗಳು ಅತ್ಯಾವಶ್ಯಕವಾಗಿರುವುದರಿಂದ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಭರ್ತಿ ಮಾಡಬೇಕಾಗಿರುತ್ತದೆ. ಆದಾಗಿ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ತೋಟಗಾರಿಕೆ ಮಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೆಳಕಂಡಂತೆ ಮಾನದಂಡವಿರುತ್ತದೆ. ಹಾಗೂ ಸದರಿ ಹುದ್ದೆಯ ವೇತನ ಶ್ರೇಣಿ ರೂ. 4800–7275ಗಳಾಗಿರುತ್ತದೆ.

| ಹುದ್ದೆ | ನೇಮಕಾತಿ ವಿಧಾನ | ವಿದ್ಯಾರ್ಹತೆ |
|---|---|---|
| ತೋಟಗಾರಿಕೆ ಮಾಲಿ | ನೇರ ನೇಮಕಾತಿ | ಸರ್ಕಾರದಿಂದ ಮಾನ್ಯತೆ ಪಡೆದಿರುವ ಯಾವುದಾದರೂ ಖಾಸಗಿ ನರ್ಸರಿಯಲ್ಲಿ ಐದು ವರ್ಷಗಳಿಗಿಂತ ಕಡಿಮೆಯಲ್ಲದ ಅನುಭವ ಹೊಂದಿರಬೇಕು. |

ಅದರಂತೆ, ಪಾಲಿಕೆಯ ತೋಟಗಾರಿಕೆ ಇಲಾಖೆಯಲ್ಲಿ ಹಾಲಿ ಖಾಲಿ ಇರುವ 350 ತೋಟಗಾರಿಕೆ ಮಾಲಿ ಹುದ್ದೆಗಳನ್ನು ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ಅಗತ್ಯವಿದ್ದು, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿ

**ನಿರ್ಣಯ :– ಆಯುಕ್ತರ ದಿನಾಂಕ : 11–10–2010ರ ಟಿಪ್ಪಣಿಯನ್ನು ಒಪ್ಪಿದೆ.**

**13]. ವಿಷಯದ ಸಂಖ್ಯೆ :–ತೆಆಸ್ಥಾಸ/56/2010–11**

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅ.ಆ(ಕ/ಆ/ಆ)ಪಿಎಸ್‌ಆರ್(4)100/2010–11 ದಿನಾಂಕ: 20–10–2010. ರಲ್ಲಿ ವಿವರಿಸಿರುವಂತೆ, ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ (ರಿ) ನಂ. 130, 2ನೇ "ಹೆಚ್" ಮುಖ್ಯರಸ್ತೆ, ನಾಗರಭಾವಿ 2ನೇ ಹಂತ, 11ನೇ ಬ್ಲಾಕ್, ಬೆಂಗಳೂರು – 72. ಇವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಈ ಹಿಂದೆ ನಾಲ್ಕು ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನಗಳನ್ನು ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಯಶಸ್ವಿಯಾಗಿ ಮಾಡಿದ್ದು, ಈ ಬಾರಿ 5 ನೇಯ ಸಮ್ಮೇಳನವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಫೆಬ್ರವರಿ 25, 26 ಮತ್ತು 27, 2010 ರಂದು ಜರುಗಿಸುವುದೆಂದು ನಿಶ್ಚಯಿಸಿರುವುದಾಗಿ, ಈ ಸಂದರ್ಭದಲ್ಲಿ ಯಕ್ಷಗಾನದ ಎಲ್ಲಾ ಪ್ರಕಾರದ ಸುಮಾರು 500 ಜನ ಕಲಾವಿದರು ಮತ್ತು ಅಸಂಖ್ಯಾತ ಕಲಾಭಿಮಾನಿಗಳು ಭಾಗವಹಿಸಲಿದ್ದಾರೆಂದು ಯಕ್ಷಗಾನದ ಸಾಹಿತ್ಯ ಗೋಷ್ಠಿಗಳು, ಹಿಮ್ಮೇಳ ಗೋಷ್ಠಿಗಳು, ಪ್ರಾತ್ಯಕ್ಷಿಕೆಗಳು, ಪ್ರದರ್ಶನಗಳು ನಡೆಯಲಿರುವುದಾಗಿ, ರಾಜಕೀಯ, ದಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ

ಮುಖಂಡರುಗಳು ಭಾಗವಹಿಸಲಿದ್ದಾರೆಂದು ಯಕ್ಷಗಾನಕ್ಕೆ ಸಂವಾದಿಯಾದ ಬೇರೆ ರಾಜ್ಯಗಳ ಕಲಾ ತಂಡಗಳನ್ನು ಆಹ್ವಾನಿಸುವವರಿದ್ದೇವೆಂದು ತಿಳಿಸಿರುತ್ತಾರೆ.



ರಾಷ್ಟ್ರೀಯ ಮಟ್ಟದ 3 ದಿವಸಗಳ ಕಾಲ ನಡೆಯುವ ಈ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಮ್ಮೇಳನಕ್ಕೆ ಸುಮಾರು ರೂ. 40 ಲಕ್ಷ ರೂಪಾಯಿಗಳು ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಗರಿಷ್ಠ ಮೊತ್ತದ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಉಲ್ಲೇಖಿತ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ಪ್ರಸ್ತಾವಿತ ಸಂಸ್ಥೆಗೆ ಪ್ರಸಕ್ತ ಸಾಲಿಗೆ ರೂ. 10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 20–10–2010ರ ಟಿಪ್ಪಣಿಯನ್ನು ಒಪ್ಪಿದೆ.**

## 14]. ವಿಷಯದ ಸಂಖ್ಯೆ :–ತೆಆಸ್ಥಾಸ/58/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅ.ಆ(ಕ/ಆ/ಆ)ಪಿಎಸ್ಆರ್(4)02/2010–11 ದಿನಾಂಕ: 14–10–2010. ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ತಿಲಕ್ ರಾಜ್, ಕಾರ್ಯದರ್ಶಿ, ರಂಗ ಸಮಾಜ (ನೋಂ) ನಂ. 779, ಶ್ರೀ ಸಿದ್ದ ರಾಮೇಶ್ವರ ನಿಲಯ, ನರ್ಮದಾ ನದಿ ರಸ್ತೆ, ಬೃಂದಾವನ ನಗರ (ದೋಭಿಘಾಟ್) ಶ್ರೀನಗರ, ಬೆಂಗಳೂರು –19ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ಸರ್ಕಾರದಲ್ಲಿ ನೊಂದಾವಣಿಯಾಗಿದ್ದು, ಕಳೆದ ಒಂದು ದಶಕದಿಂದ ನಿರಂತರವಾಗಿ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ರಾಜ್ಯ, ಅಂತರ ರಾಜ್ಯಗಳಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು, ನಡೆಸಿಕೊಂಡು ಬರುತ್ತಿದೆ. ಇಷ್ಟೇ ಅಲ್ಲದೇ ನಮ್ಮ ರಾಷ್ಟ್ರೀಯ ಹಬ್ಬಗಳಾದ ಕಾರ್ಮಿಕರ ದಿನಾಚರಣೆ, ಅಂಗವಿಕಲರ ದಿನಾಚರಣೆ ಪ್ರಯುಕ್ತ ಪ್ರತಿವರ್ಷ ವಿದ್ಯಾಭ್ಯಾಸದಿಂದ ವಂಚಿತರಾದ ಅನಾಥ ಹಾಗೂ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಪುಸ್ತಕ, ಬಟ್ಟೆ ಹಾಗೂ ಲೇಖನ ಸಾಮಾಗ್ರಿಗಳು, ಅಂಗವಿಕಲರಿಗೆ ಗಾಲಿ, ಕುರ್ಚಿ, ಊರುಗೋಲು, ವಿಧವೆಯರಿಗೆ ಹೊಲಿಗೆ ಯಂತ್ರಗಳನ್ನು ನೀಡುತ್ತಾ ಬಂದಿರುವುದಾಗಿ ತಿಳಿಸಿರುತ್ತಾರೆ.

ಜೊತೆಗೆ ಜನರಲ್ಲಿ ಪರಿಸರದ ಬಗ್ಗೆ ಹಾಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಹಲವಾರು ಬೀದಿ ನಾಟಕ, ರಂಗನಾಟಕ, ರಂಗಸಂಗೀತ ಹಾಗೂ ವಿಚಾರ ಸಂಕಿರಣ, ಸಾಹಿತ್ಯ ಸಮ್ಮೇಳನ ಹಾಗೂ ಅನಾಥ ಮಕ್ಕಳ ಕ್ಷೇತ್ರದಲ್ಲಿ ತನ್ನದೇ ಆದ ಕಾರ್ಯಾದಕ್ಷತೆಯ ಮುಖಾಂತರ ಅನಾಥ ಮಕ್ಕಳ ಕೇಂದ್ರಕ್ಕೆ ಭೇಟಿ ನೀಡಿ ಅವರಲ್ಲಿ ನಾಡಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೀಜವನ್ನು ಬಿತ್ತಿ, ಪ್ರತಿಭಾನ್ವಿತರನ್ನಾಗಿಸಿ ಒಳ್ಳೆಯ ಮಾರ್ಗದಲ್ಲಿ ಕೊಂಡೊಯ್ಯುವ ಕಾರ್ಯಗಳನ್ನು ಮಾಡುತ್ತಾ ಬಂದಿರುವುದಾಗಿ, ಇದರೊಂದಿಗೆ ಉಚಿತ ಹೃದಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುತ್ತಾ ಬಂದಿದ್ದೇವೆಂದು, ಇದರೊಂದಿಗೆ ಇನ್ನೂ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿರುವುದರಿಂದ ಸುಮಾರು 4 ಲಕ್ಷಕ್ಕೂ ಅಧಿಕವಾಗಿ ವ್ಯಯವಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 2 ಲಕ್ಷಕ್ಕೂ ಹೆಚ್ಚಿನ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಉಲ್ಲೇಖಿತ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಪ್ರಸ್ತಾವಿತ ಸಂಸ್ಥೆಗೆ ಪ್ರಸಕ್ತ ಸಾಲಿಗೆ ರೂ.10,000/–ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 14–10–2010ರ ಟಿಪ್ಪಣಿಯನ್ನು ಒಪ್ಪಿದೆ.



## 15]. ವಿಷಯದ ಸಂಖ್ಯೆ :–ತೆಆಸ್ಥಾಸ/60/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎಲ್1/ಪಿಆರ್/31/2001–02 ದಿನಾಂಕ: 14–10–2010. ರಲ್ಲಿ ವಿವರಿಸಿರುವಂತೆ, ಬೆಂಗಳೂರಿನ ತ್ಯಾಗರಾಜನಗರದ, 3ನೇ ಬ್ಲಾಕ್‌ನಲ್ಲಿನ 7ನೇ 'ಎ' ಮುಖ್ಯರಸ್ತೆಯಲ್ಲಿರುವ ನಿವೇಶನ ಸಂಖ್ಯೆ: 258 ರ (30 X 50) ಚದರ ಅಡಿ ನಿವೇಶನವು ಶ್ರೀ.ಎಸ್.ಆರ್.ಸುಬ್ರಹ್ಮಣ್ಯಂ ಇವರ ಸ್ವತ್ತಾಗಿದ್ದು, ಈ ಜಾಗವನ್ನು ರಸ್ತೆ ವಿಸ್ತರಿಸಲು ಅನಧಿಕೃತವಾಗಿ ನಗರಪಾಲಿಕೆಯವರು ಉಪಯೋಗಿಸಿಕೊಂಡಿರುತ್ತಾರೆಂದೂ, ಇದಕ್ಕೆ ಪರ್ಯಾಯವಾಗಿ ಜಯನಗರ 4ನೇ ಬ್ಲಾಕ್‌ನಲ್ಲಿನ 30–31 ನೇ ಅಡ್ಡರಸ್ತೆಯಲ್ಲಿರುವ ನಗರಪಾಲಿಕೆಯ (30 X 40) ಚದರ ಅಡಿ ವಿಸ್ತೀರ್ಣದ ನಿವೇಶನ ಸದರಿ ಖಾತೆದಾರರಿಗೆ ಮಂಜೂರು ಮಾಡಲು ಮಾನ್ಯ ಆಡಳಿತಾಗಾರರು ದಿನಾಂಕ: 03–08–1978 ರಂದು ತೀರ್ಮಾನ ಕೈಗೊಂಡಿರುತ್ತಾರೆ.

ಆದರೆ ಸ್ವತ್ತಿನ ಖಾತೆದಾರರು ಮನವಿ ಸಲ್ಲಿಸಿ, (40 X 60) ಚದರ ಅಡಿ ವಿಸ್ತೀರ್ಣದ ಬದಲಿ ನಿವೇಶನ ಮಂಜೂರು ಮಾಡಬೇಕೆಂದು ಕೋರಿದ ಮೇರೆಗೆ, ಜಯನಗರ ಬಡಾವಣೆಯ 4ನೇ ಬ್ಲಾಕ್‌ನ 30–31ನೇ ಅಡ್ಡರಸ್ತೆಯ 73 ನೇ ಸಂಖ್ಯೆಯ (53 X 40) ಚದರ ಅಡಿಗಳ ನಿವೇಶನವನ್ನು ಮಂಜೂರು ಮಾಡಬಹುದೆಂದು ದಿನಾಂಕ: 23–11–1991 ರಂದು ನಡೆದ ಸಭೆಯಲ್ಲಿ ಪಾಲಿಕೆಯು ವಿಷಯ ಸಂಖ್ಯೆ: 18(212) ರ ಮೇರೆಗೆ ತೀರ್ಮಾನಿಸಿರುತ್ತೆ. ಪಾಲಿಕೆಯ ಈ ತೀರ್ಮಾನಕ್ಕೆ ಸರ್ಕಾರವು ತನ್ನ ಆದೇಶದ ಸಂಖ್ಯೆ: ವನಇ–44–ಎಂಎನ್‌ಜಿ–92, ದಿನಾಂಕ: 07–10–1998 ರ ಮೇರೆಗೆ.,

"ತ್ಯಾಗರಾಜನಗರ 3ನೇ ಬ್ಲಾಕ್, 7ನೇ 'ಎ' ಮುಖ್ಯರಸ್ತೆಯ 258ನೇ ನಿವೇಶನವನ್ನು ಭೂಸ್ವಾಧೀನಪಡಿಸಿಕೊಂಡಿರುವ ಪ್ರಯುಕ್ತ ಸ್ವತ್ತಿನ ಮಾಲೀಕರಾದ ಶ್ರೀ.ಎಸ್.ಆರ್.ಸುಬ್ರಹ್ಮಣ್ಯಂ ರವರಿಗೆ 4ನೇ 'ಟಿ' ಬ್ಲಾಕ್ ಜಯನಗರ 30 ಮತ್ತು 31ನೇ ಅಡ್ಡರಸ್ತೆಯಲ್ಲಿರುವ 53 X 40 ಅಡಿ ವಿಸ್ತೀರ್ಣದ ನಿವೇಶನ ಸಂಖ್ಯೆ: 73 ನ್ನು ಬದಲಿ ನಿವೇಶನವನ್ನಾಗಿ ನೀಡಲು, ಈ ಬದಲೀ ನಿವೇಶನಕ್ಕೆ ರೂ. 3,91,680/–ಗಳನ್ನು ಮಹಾನಗರ ಪಾಲಿಕೆಗೆ ಪಾವತಿಸಿಕೊಳ್ಳತಕ್ಕದ್ದು, ಎಂಬ ಷರತ್ತು ವಿಧಿಸಿ ಮಂಜೂರು ಮಾಡಲು ಸರ್ಕಾರವು ಅನುಮೋದನೆ ನೀಡಿದೆ."..

ಸರ್ಕಾರದ ಈ ಆದೇಶವನ್ನು ಅನುಸರಿಸಿ, ಶ್ರೀ.ಎಸ್.ಆರ್.ಸುಬ್ರಹ್ಮಣ್ಯಂ ಇವರಿಗೆ ರೂ. 3,91,680/– ಗಳನ್ನು ಪಾಲಿಕೆಗೆ ಜಮಾ ಮಾಡಲು ತಿಳುವಳಿಕೆಯನ್ನು ದಿನಾಂಕ: 07–11–1998 ರಂದು ನೀಡಲಾಗಿತ್ತು. ಆದರೆ ಸದರಿಯವರು ದಿನಾಂಕ: 16–11–1998 ರಂದು ಮನವಿ ಸಲ್ಲಿಸಿ, ಬದಲಿ ನಿವೇಶನದ ಸ್ವತ್ತಿನ ಸ್ವಾಧೀನ ವಹಿಸಿಕೊಡಲು ಮತ್ತು ಪರಿಹಾರ ಧನವನ್ನು ಸಹ ನೀಡಲು ಕೋರಿರುತ್ತಾರೆ. ತದನಂತರ ದಿನಾಂಕ: 26/30–11–2001 ರಂದು ಮನವಿ ಸಲ್ಲಿಸಿ ನಮಗೆ ನ್ಯಾಯಯುತವಾದ ಪರಿಹಾರವನ್ನು ದೊರಕಿಸಿಕೊಟ್ಟು ಉಪಕರಿಸಬೇಕೆಂದು ಕೋರಿರುತ್ತಾರೆ.

ಅರ್ಜಿದಾರರ ಕೋರಿಕೆಯ ಬಗ್ಗೆ ಹಣದ ರೂಪದಲ್ಲಿ ರೂ. 9,24,000/– ಗಳ ಪರಿಹಾರ ನೀಡಲು ಮತ್ತು ಸರ್ಕಾರಿ ಆದೇಶವನ್ನು ಮಾರ್ಪಾಡು ಮಾಡಿ ಕೊಡಲು ಪ್ರಸ್ತಾವನೆಯನ್ನು ದಿನಾಂಕ: 25–1–2003 ರಂದು ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿತ್ತು. ಆದರೆ ಈ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಬಂದಿರುವುದಿಲ್ಲ. ಆನಂತರ ಸದರಿ ಪ್ರಕರಣದ ಬಗ್ಗೆ ಮುಂದಿನ ಕ್ರಮ ಜರುಗಿಸಿರುವುದಿಲ್ಲ. ನಂತರ ಅರ್ಜಿದಾರರ ಮನವಿಯ ಮೇರೆಗೆ ದಿನಾಂಕ: 20–01–2010 ರಂದು ಸರ್ಕಾರದಿಂದ ಪತ್ರ ಬಂದಿದ್ದು, ದಿನಾಂಕ: 01–09–2010ರಂದು ಪಾಲಿಕೆಯಿಂದ ಸರ್ಕಾರಕ್ಕೆ ಪತ್ರ ಬರೆದು, ಸದರಿ ನಿವೇಶನವನ್ನು ಈ ಮೊದಲು ನಿಗದಿಪಡಿಸಲಾಗಿದ್ದ ದರವನ್ನು ಅಂದರೆ ರೂ. 9,24,000/– ಗಳನ್ನು ಪಾವತಿಸಿ ನೇರವಾಗಿ ಖರೀದಿಸಲು

ಅನುಮೋದನೆ ಕೋರಲಾಗಿದೆ. ಆದರೆ, ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಿರುವ ಸ್ವತ್ತುಗಳನ್ನು ಪಾಲಿಕೆಯು 1894 ರ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಬಹುದೇ ಹೊರತು ನೇರವಾಗಿ ಖರೀದಿಸಲು ಕೆಎಂಸಿ ಕಾಯ್ದೆ 1976 ಕಲಂ 175 ಮತ್ತು 177 ರನ್ವಯ ಅವಕಾಶವಿರುವುದಿಲ್ಲ. ಆದ್ದರಿಂದ, ದಿನಾಂಕ: 01-09-2010ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಹಿಂಪಡೆದು 1894ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಭೂಸ್ವಾಧೀನಪಡಿಸಿಕೊಳ್ಳುವುದು ಸಮಂಜಸವಾಗಿದೆ ಎಂದು ಪರಿಗಣಿಸಲಾಗಿದೆ.



ಅಲ್ಲದೆ, ಈ ಪ್ರಕರಣವು ಸುಮಾರು 32 ವರ್ಷಗಳ ಹಿಂದಿನ ಪ್ರಕರಣವಾಗಿದ್ದು, ಈಗಾಗಲೇ ಖಾತೆದಾರರ ಸ್ವತ್ತನ್ನು ಸಾರ್ವಜನಿಕ ಉದ್ದೇಶಕ್ಕಾಗಿ ರಸ್ತೆ ನಿರ್ಮಿಸಲು ಉಪಯೋಗಿಸಿಕೊಳ್ಳಲಾಗಿದ್ದು, ದೀರ್ಘಕಾಲದ ಈ ಪ್ರಕರಣವನ್ನು ಅಂತ್ಯಗೊಳಿಸಲು ಹಾಗೂ ಖಾತೆದಾರರಿಂದ ಭೂಸ್ವಾಧೀನಪಡಿಸಿಕೊಂಡಿರುವ ಸ್ವತ್ತಿಗೆ ನ್ಯಾಯಯುತ ಪರಿಹಾರ ನೀಡಲು, ಈ ಸ್ವತ್ತನ್ನು ಚಾಲ್ತಿಯಲ್ಲಿರುವ ಸರ್ಕಾರದ ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ದರದಂತೆ 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೂ ಹಾಗೂ ಸೂಕ್ತವೂ ಆಗಿರುತ್ತದೆ.

ಆದುದರಿಂದ ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು, ಇವರು ದಿನಾಂಕ: 17-04-2007 ರಂದು ಪ್ರಕಟಿಸಿರುವ ಸ್ಥಿರಾಸ್ತಿಗಳ ಮಾರುಕಟ್ಟೆ ದರದಂತೆ ತ್ಯಾಗರಾಜನಗರದ ಆಸ್ತಿಗಳ ದರ ಚ.ಅ 1 ಕ್ಕೆ ರೂ. 1300/- ಇರುತ್ತದೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂ ಪರಿಹಾರದ ಲೆಕ್ಕಾಚಾರ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**'ಅ'**

| | | | |
|---|---|---|---|
| 1. | ಚ.ಅ 1ಕ್ಕೆ ರೂ.1300/- ರಂತೆ 1500 ಚ.ಅ ಗಳಿಗೆ | - ರೂ. | 19,50,000-00 |
| 2. | ಶೇ 12 ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) | - ರೂ. | 2,34,000-00 |
| 3. | ಶೇ 30 ರಷ್ಟು ಶಾಸನಬದ್ಧ ಭತ್ಯೆ | - ರೂ. | 5,85,000-00 |
| | **ಒಟ್ಟು** | **- ರೂ.** | **27,69,000-00** |

**'ಆ'**

| | | | |
|---|---|---|---|
| 1. | ಶೇ 10 ರ ಆಡಳಿತ ವೆಚ್ಚ | -ರೂ. | 2,76,900-00 |
| 2. | ಶೇ 1 ರಷ್ಟು ಆಡಿಟ್ ವೆಚ್ಚ | -ರೂ. | 27,690-00 |
| 3. | ಪ್ರಕಟಣಾ ವೆಚ್ಚ | -ರೂ. | 1,50,000-00 |
| | **ಒಟ್ಟು** | **- ರೂ.** | **4,54,590-00** |
| | **(ಅ+ಆ) ಒಟ್ಟು** | **-** | **ರೂ.32,23,590-00** |

(ಮೂವತ್ತೆರಡು ಲಕ್ಷದ ಇಪ್ಪತ್ಮೂರು ಸಾವಿರದ ಐದುನೂರ ತೊಂಭತ್ತು ರೂ. ಗಳು ಮಾತ್ರ)

ಮೇಲೆ ತಿಳಿಸಿರುವ ನಿವೇಶನವನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು **ರೂ. 32,23,590-00** (ಮೂವತ್ತೆರಡು ಲಕ್ಷದ ಇಪ್ಪತ್ಮೂರು ಸಾವಿರದ ಐದುನೂರ ತೊಂಭತ್ತು ರೂ. ಗಳು ಮಾತ್ರ) ಗಳಾಗಲಿದ್ದು, ಈ ಮೊತ್ತವನ್ನು ಪಾಲಿಕೆಯ 2010-11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಹಣದಿಂದ ಭರಿಸುವ

ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಾಮಾನ್ಯ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರು ದಿನಾಂಕ : 14–10–2010ರಂದು ಅನುಮೋದಿಸಿ ಸಲ್ಲಿಸಿರುವ ಟಿಪ್ಪಣಿಯನ್ನು ಒಪ್ಪಿದೆ.**

–29–

## 16]. ವಿಷಯದ ಸಂಖ್ಯೆ :–ತೆಆಸ್ಥಾಸ/61/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಉ.ಎ3(1)/ಪಿ.ಆರ್/43/10–11 ದಿನಾಂಕ: 11–10–2010. ರಲ್ಲಿ ವಿವರಿಸಿರುವಂತೆ, ಶ್ರೀ.ಗಂಗರಾಜ್ ಬಿನ್ ಗೋವಿಂದಯ್ಯರವರು ಇದೇ 94(27)ನೇ ವಾರ್ಡ್ ಗಾಂಧಿನಗರ ಶೇಷಾದ್ರಿಪುರಂಗೆ ಸೇರಿದ ಸಿರೂರ್ ಪಾರ್ಕ್ ರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 12x9 ಅಡಿ ಅಳತೆಯ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿಕೊಡಲು ಕೋರಿಕೊಂಡಿದ್ದು, ಸದರಿ ಜಾಗವನ್ನು ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಆರ್ಥಿಕ ಸ್ಥಾಯಿ ಸಮಿತಿ ಟಿಪ್ಪಣಿ ದಿನಾಂಕ: 03–03–1997 ರ ಸಂಖ್ಯೆ: ಎ3(1)/ಪಿ.ಆರ್/223/96–97 ರವರು ಟಿಪ್ಪಣಿಯನ್ನು ಮಂಡಿಸಿ ನಂತರ ಸಂಖ್ಯೆ: ಡಿ.ಆರ್.ಓ/(ಪಿ)/ಪಿ,ಆರ್/452/97–98 ರ ದಿನಾಂಕ: 17–09–1997 ರಂದು 3 ವರ್ಷಗಳ ಕಾಲ ಗುತ್ತಿಗೆಗೆ ಜಾಗವನ್ನು ಮಂಜೂರು ಮಾಡಿರುತ್ತಾರೆ. ಇದರ ಮಾಸಿಕ ಬಾಡಿಗೆ ರೂ.200/– ರಂತೆ ನಿಗಧಿಗೊಳಿಸಲಾಗಿದೆ.

ಸದರಿ ಸ್ವತ್ತಿನ ಅವಧಿ ದಿನಾಂಕ: 17–09–1997 ರಿಂದ ದಿನಾಂಕ: 16–09–2000 ರವರೆಗೆ ಜಾರಿಯಲ್ಲಿದ್ದು, ನಂತರ ಗುತ್ತಿಗೆ ಅವಧಿ ಮುಗಿದು ಹೋಗಿರುತ್ತದೆ. ನಂತರ ಅರ್ಜಿದಾರರು ಮನವಿ ಪತ್ರ ಸಲ್ಲಿಸಿ ಅವರ ಅನಾರೋಗ್ಯದ ನಿಮಿತ್ತ ಊರಿನಲ್ಲಿದ್ದುದರಿಂದ ಗುತ್ತಿಗೆ ಅವಧಿಯನ್ನು ವಿಸ್ತರಣೆ ಮಾಡಲು ಕೋರುವ ಮನವಿಯನ್ನು ಕಾಲಕ್ಕೆ ಸಲ್ಲಿಸಲಾಗಿರುವುದಿಲ್ಲ. ಸದರಿ ಅರ್ಜಿದಾರರು ಅಂಗವಿಕಲರಾಗಿದ್ದು, ಅವರ ಕುಟುಂಬದಲ್ಲಿ ಸುಮಾರು 8–ಜನ ಅವಲಂಬಿತರಿರುತ್ತಾರೆ. ಅವರ ಉದರ ಪೋಷಣೆಯನ್ನು ಅರ್ಜಿದಾರರೇ ನೋಡಿಕೊಳ್ಳಬೇಕಾಗಿರುವುದರಿಂದ ಹಾಲಿ ಇವರು ಸ್ಕೂಟರ್ ಟೈರ್ ಪಂಚರ್ ಅಂಗಡಿ ನಡೆಸುತ್ತಿದ್ದು, ಗುತ್ತಿಗೆ ಅವಧಿಯನ್ನು ಮುಂದುವರೆಸಲು ಕೋರಿರುತ್ತಾರೆ.

ಗುತ್ತಿಗೆ ಪ್ರಸ್ತಾವನೆ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ದಿನಾಂಕ: 29–06–2009 ರಂದು ಅರ್ಜಿ ಮುಖೇನ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿದ್ದು, ಇಲ್ಲಿಯವರೆಗೆ ಬಾಡಿಗೆ ಹಣವನ್ನು ಪಾವತಿ ಮಾಡಲು ಕಛೇರಿಯ ಹಿಂಬರಹ ಪತ್ರದ ಸಂಖ್ಯೆ: DA(GN)W-27/Misc/PR/23/09-10, ದಿನಾಂಕ: 30–07–2009 ರಲ್ಲಿ ನೀಡಲಾಗಿತ್ತು. ಅದರ ಪ್ರಕಾರ ಅರ್ಜಿದಾರರು ರಶೀದಿ ಸಂಖ್ಯೆ: 496169, ದಿನಾಂಕ: 22–08–2009 ರಂದು ಅಂದಿನಿಂದ ಜುಲೈ–2009 ರವರೆಗೆ ಬಾಕಿ ಇದ್ದ ಬಾಡಿಗೆ ಹಣ ರೂ.21200/– ಗಳನ್ನು ಪಾವತಿಸಿರುತ್ತಾರೆ. ಪ್ರತಿಯನ್ನು ಲಗತ್ತಿಸಿದೆ. ವಲಯ ಜಂಟಿ ಆಯುಕ್ತರು ತನಿಖೆಯ ನಂತರ 5 ವರ್ಷದ ಅವಧಿಗೆ ಮಾಸಿಕ ಬಾಡಿಗೆ ರೂ. 2970ರಂತೆ ನವೀಕರಿಸಲು ಶೀಫಾರಸ್ಸು ಮಾಡಿರುತ್ತಾರೆ. ಉಪ ಆಯುಕ್ತರು (ಆಸ್ತಿ) ರವರು ಸ್ಥಳ ಪರಿಶೀಲಿಸಿದಾಗ ರಸ್ತೆ ಮತ್ತು S.W.D ಖಾಸಗಿ ಅಸ್ತಿಗಳ ಮದ್ಯದಲ್ಲಿರುವ ಜಾಗವಾಗಿರುವುದರಿಂದ ಸಾರ್ವಜನಿಕ ಉದ್ದೇಶಗಳಿಗೆ ಉಪಯುಕ್ತವಾಗಿರುವುದಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗೂ (ಬಿ) IIರ ಪ್ರಕಾರ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವದಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು. ಸರ್ಕಾರದ ಆದೇಶ ಸಂಖ್ಯೆ

ನಅಇ 129 ಟಿ,ಎಂ,ಡಿ 2002 ದಿನಾಂಕ: 2–6–2003 ರ ಪ್ರಕಾರ ನಗರ ಸ್ಥಳಿಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹಾರಾಜು ಮುಖಾಂತರವೆ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ ಅ ಕಂ ಪಿಆರ್ 115/01–02 ದಿನಾಂಕ: 01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸ್ತುತ ಮಾರುಕಟ್ಟೆ ಬೆಲೆ ಕನಿಷ್ಠ ಶೇ 10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ.



ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶೀಷ್ಠ ಪಂಗಡದವರಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರೀಯಾಯತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ ಪಾಲಿಕೆ ಹಾಗೂ ಸಕಾರಕ್ಕೆ ಶೀಫಾರಸ್ಸು ಮಾಡುವ ಪ್ರಸ್ತಾವನೆಯನ್ನು ಕಳಿಸುವುದು ಅವಶ್ಯಕವಾಗಿದೆ.

ಅರ್ಜಿದಾರರು ತಾವು ಆರ್ಥಿಕವಾಗಿ ಬಹಳ ಕಷ್ಟದಲ್ಲಿದ್ದು ಗುತ್ತಿಗೆ ಅವಧಿಯನ್ನು 15–ವರ್ಷಗಳ ಕಾಲ ವಿಸ್ತರಿಸುವಂತೆ ಮನವಿ ಮಾಡಿದ್ದು, ಸದರಿ ಅರ್ಜಿಯನ್ನು ಪರಿಶೀಲಿಸಿ 2007ನೇ ಸಾಲಿನ ಸರ್ಕಾರದ ಆದೇಶದ ಪ್ರಕಾರ ಮಾರುಕಟ್ಟೆ ದರ ಚದರ ಒಂದಕ್ಕೆ ರೂ.3300/– ರಂತೆ ಚಾಲ್ತಿಯಲ್ಲಿರುತ್ತದೆ, ಅದರ ಪ್ರಕಾರ ಅವರ ಅಳತೆಯ ಪ್ರಕಾರ 108 ಚದರಡಿಗಳಿಗೆ ಬಾಡಿಗೆ ಮಾಸಿಕ ಹಣ ರೂ.2970/– ಗಳಾಗಲಿದ್ದು, ಸದರಿಯವರಿಗೆ ಕರಾರು ಪತ್ರ ನೊಂದಾವಣಿ ಮಾಡಿದ ದಿನದಿಂದ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮಾಸಿಕ ಬಾಡಿಗೆ ರೂ.2970/– ರಂತೆ ಮುಂದಿನ ದಿನಗಳಲ್ಲಿ ಮಾರುಕಟ್ಟೆ ದರ ನವೀಕರಿಸುವ ಷರತ್ತಿಗೆ ಒಳಪಟ್ಟು ಹಾಗೂ ಹಿಂದಿನ ಅವದಿಯ ಬಾಕಿ ಮೊತ್ತವನ್ನು ಇಂದಿನ ದರದಲ್ಲಿ ವಸೂಲು ಮಾಡುವ ಪ್ರಸ್ತಾವನೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಟಿಪ್ಪಣಿ ಮಂಡಿಸಿದೆ.

<u>ನಿರ್ಣಯ</u> :–ಮಾನ್ಯ ಆಯುಕ್ತರ ದಿನಾಂಕ 11–10–2010ರ ಟಿಪ್ಪಣಿಯನ್ನು ಒಪ್ಪಿದೆ.

## 17]. ವಿಷಯದ ಸಂಖ್ಯೆ :–ತೆಆಸ್ಥಾಸ/62/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಉ.ಎ3(1)/ಪಿ.ಆರ್/41/10–11ದಿನಾಂಕ: 11–10–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 107(22 ಹಳೆಯದು)ರಲ್ಲಿ ರಾಜಾಜಿನಗರ 5ನೇ ಬ್ಲಾಕ್‌ನಲ್ಲಿರುವ ಧೋಭಿಘಾಟ ಅಧ್ಯಕ್ಷರು, ವಾಷರ್‌ಮೆನ್ ಅಸೋಸಿಯೇಷನ್ ರವರಿಗೆ ಬಟ್ಟೆಗಳನ್ನು ವಗೆಯಲು ಒಂದು ಕಲ್ಲಿಗೆ ರೂ.10/–ರಂತೆ ಒಟ್ಟು 40 ಕಲ್ಲುಗಳಿಗೆ ಮಾಸಿಕ ರೂ 400/–ಗಳಿಗೆ ನಿಗಧಿಪಡಿಸಿ ದಿನಾಂಕ: 31/08/2003ರ ಅವಧಿಗೆ ಗುತ್ತಿಗೆ ನೀಡಲಾಗಿತ್ತು ಗುತ್ತಿಗೆ ಅವಧಿಯು ಪೂರ್ಣಗೊಂಡಿದ್ದು, ನಂತರ 5ವರ್ಷಗಳ ಅವಧಿಗೆ ಸದರಿ ಗುತ್ತಿಗೆ ಅವಧಿಯನ್ನು ಪುನಃ ನವೀಕರಿಸಲು ಕೋರಿ ಅರ್ಜಿದಾರರು ಮನವಿಯನ್ನು ಸಲ್ಲಿಸಿದ್ದರ ಮೇರೆಗೆ ವಿಷಯದ ಸಂಖ್ಯೆ:17(74) ಮಹಾನಗರ ಪಾಲಿಕೆ ತೀರ್ಮಾನದ ದಿನಾಂಕ:26/10/2004ರಂತೆ ದಿನಾಂಕ:01/09/2003 ರಿಂದ 31/08/2008ರ ವರೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ಮೊತ್ತ ವಾರ್ಷಿಕ ರೂ.4800/–ಗಳ ಆಧಾರದ ಮೇರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸಲಾಗಿರುತ್ತದೆ.

ಸದರಿ ಅರ್ಜಿದಾರರು ಪುನಃ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ದಿನಾಂಕ: 01/09/2008 ರಿಂದ ನವೀಕರಿಸುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಜಂಟಿ ಆಯುಕ್ತರು (ಪಶ್ಚಮ)ರವರು ಈಗಾಗಲೇ ಇದೇ ರಾಜಾಜಿನಗರ ವಾಷರ್ ಮೆನ್ ಅಸೋಸಿಯೇಷನ್ ರವರು ಸದರಿ ದೋಭಿಘಾಟ್‌ನ್ನು ಉಪಯೋಗಿಸಿರುವುದರಿಂದ ಗುತ್ತಿಗೆ ಮೊತ್ತವನ್ನು ರೂ. 4800/–ಗಳನ್ನು ಪರಿಷ್ಕರಿಸುವ (ಶೇ 10 ರಷ್ಟು ಹೆಚ್ಚುವರಿ ಮಾಡಿ) ದಿನಾಂಕ: 01/09/2008 ರಿಂದ 31/08/2013ರವರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸಬಹುದಾಗಿದೆಯಂದು ಪ್ರಸ್ತಾಪಿಸಿರುತ್ತಾರೆ.

ಪಾಲಿಕೆಯ ಸ್ವತ್ತುಗಳಿಗೆ ಗುತ್ತಿಗೆ ಮೊತ್ತ ನಿಗಧಿ ಪಡಿಸುವ ಮಾರ್ಗಸೂಚಿಗಳಿಗೆ ಅಂದರೆ ಧೋಭಿಘಾಟ್ ಸಾಮುಹಿಕವಾಗಿ ಉಪಯೋಗಿಸುವ ಸ್ವತ್ತಾಗಿದ್ದು, ಯಾವುದೆ ಮಾರ್ಗಸೂಚಿಯಿರುವುದಿಲ್ಲ ಧೋಭಿಘಾಟಿನಲ್ಲಿ ಉಪಯೋಗಿಸುವ ಕಲ್ಲುಗಳ ಸಂಖ್ಯೆ ಆಧಾರದ ಮೇಲೆ ನಿಗದಿಪಡಿಸಲಾಗಿದ್ದು, ಇದೆ ದರವನ್ನು ಪ್ರತಿ ಕಲ್ಲಿಗೆ ಮಾಸಿಕ ಗುತ್ತಿಗೆ ದರ 50 ರೂ.ಗಳಂತೆ ಗುತ್ತಿಗೆ ನವೀಕರಿಸಿ ಮತ್ತು ಕರಾರು ಪತ್ರ ನೊಂದಾಯಿಸುವ ದಿನದಿಂದ ಜಾರಿಗೆ ಬರುವಂತೆ 5 ವರ್ಷದ ಅವಧಿಗೆ ನವೀಕರಿಸಲು ಹಾಗೂ ಹಿಂದಿನ ಬಾಕಿ ಮೊತ್ತವನು ಇದೆ ದರದಲ್ಲಿ ವಸೂಲಿ ಮಾಡುವ ಪ್ರಸ್ತಾವನೆಗೆ ಈ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಿದೆ.

**ನಿರ್ಣಯ :- ಆಯುಕ್ತರ ದಿನಾಂಕ : 11-10-2010ರ ಟಿಪ್ಪಣಿಯನ್ನು ಒಪ್ಪಿದೆ.**



**18]. ವಿಷಯದ ಸಂಖ್ಯೆ :-ತೆಆಸ್ಥಾಸ/63/2010-11**

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅ.ಆ(ಕ/ಆ/ಆ)ಪಿಎಸ್ಆರ್(4)22/2010 ದಿನಾಂಕ: 25-10-2010. ರಲ್ಲಿ ವಿವರಿಸಿರುವಂತೆ, ಶ್ರೀ ಜೆ. ಹೆಚ್. ತುಳಸೀಧರ್, ನಂ.4, ಜೆ-ಬ್ಲಾಕ್, 6ನೇ ಬ್ಲಾಕ್, ಕೈಗಾರಿಕಾ ನಗರ, ರಾಜಾಜಿನಗರ, ಬೆಂಗಳೂರು- 10. ಇವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಾನು ಅಂತರ ರಾಷ್ಟ್ರೀಯ ಅಂಗವಿಕಲ ಕ್ರೀಡಾಪಟುಗಳು ಆಗಿದ್ದು, 2010 ರ ಜೂನ್ 11 ರಿಂದ 13 ರವರೆವಿಗೆ ಜರ್ಮನಿಯಲ್ಲಿ ನಡೆದ "ಜರ್ಮನ್ ಇಂಟರ್ ನ್ಯಾಷನ್ ಅಥ್ಲೆಟಿಕ್ ಚಾಂಪಿಯನ್ ಷಿಪ್-2010" ರ ಕ್ರೀಡೆಗೆ ಆಯ್ಕೆಯಾಗಿ ಜರ್ಮನಿಗೆ ಹೋಗಿ ಡಿಸ್ ಕಸ್ ಥ್ರೋ ಕ್ರೀಡೆಯಲ್ಲಿ ಚಿನ್ನದ ಪದಕ ಹಾಗೂ ಶಾಟ್ ಪುಟ್ ನಲ್ಲಿ ಕಂಚಿನ ಪದಕಗಳನ್ನು ಪಡೆದಿದ್ದು, ಜರ್ಮನಿಗೆ ಹೋಗಿ ಬರಲು ಸುಮಾರು ರೂ.72,000/- ಗಳು ವೆಚ್ಚವಾಗಿದ್ದು, ಆರ್ಥಿಕವಾಗಿ ಹಿಂದುಳಿದಿದ್ದು, ಈ ವೆಚ್ಚವನ್ನು ಸಾಲ ಮಾಡಿ ಭರಿಸಿರುವುದಾಗಿ ತಿಳಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಸದರಿಯವರ ಮನವಿಯನ್ನು ಪರಿಗಣಿಸಿ ಧನಸಹಾಯ ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾ ಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ **ರೂ.**10.00 ಕೋಟಿಗಳ ಪೈಕಿ, ಕ್ರೀಡಾಪಟುವಿಗೆ ಪ್ರಸಕ್ತ ಸಾಲಿಗೆ **ರೂ.**10,000/- ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ : 25-10-2010ರ ಟಿಪ್ಪಣಿಯನ್ನು ಒಪ್ಪಿದೆ.**

**19]. ವಿಷಯದ ಸಂಖ್ಯೆ :-ತೆಆಸ್ಥಾಸ/64/2010-11**

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅ.ಆ(ಕ/ಆ/ಆ)ಪಿಎಸ್ಆರ್(4)05/2010-11 ದಿನಾಂಕ: 25-10-2010. ರಲ್ಲಿ ವಿವರಿಸಿರುವಂತೆ, ಶ್ರೀ ವೀರಯ್ಯ, ಹೆಚ್.ಎಮ್. C/o ಎಸ್. ಎಸ್. ಪುನೀತ್ ನಂ. 19, 12ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27.

ಇವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಮೂಲತ: ತಾನು ಕ್ರೀಡಾಪಟುವೆಂದು, ಕಳೆದ ನಾಲ್ಕು ವರ್ಷದಿಂದ Marethon (42.195km) ಅಭ್ಯಾಸ ಮಾಡುತ್ತಾ ಇದ್ದು, ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದಿರುವುದಾಗಿ ತಿಳಿಸಿ ಪ್ರಸ್ತುತ 2012 ರಂದು ಇಂಗ್ಲೆಂಡಿನಲ್ಲಿ ನಡೆಯಲಿರುವ ಒಲಂಪಿಕ್ಸ್ ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ Track Suits, Shorts, Banayans, Running race shoes, Spikes, Hand glouse, Skull cap ಹಾಗೂ ಪೌಷ್ಠಿಕ ಆಹಾರವಾದ ಹಾಲು, ಹಣ್ಣು, ತರಕಾರಿ ಮತ್ತು ಒಣ ಹಣ್ಣುಗಳು ಇತ್ಯಾದಿಗಳನ್ನು ಖರೀದಿ ಮಾಡಲು ರೂ. 7650/– (ಪ್ರತಿ ತಿಂಗಳು) ಮತ್ತು ತರಬೇತಿ ಶುಲ್ಕ ರೂ.3000/– (ಪ್ರತಿ ತಿಂಗಳು) ಖರ್ಚು ಆಗಲಿದ್ದು, ಒಟ್ಟಾರೆ ಮೂರು ವರ್ಷಗಳಿಗೆ ಅನ್ವಯವಾಗುವಂತೆ ಹಾಗೂ ಪ್ರವಾಸದ ವೆಚ್ಚವೂ ತಗಲುವುದರಿಂದ ರಾಷ್ಟ್ರವನ್ನು ಪ್ರತಿನಿಧಿಸುತ್ತಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಇವುಗಳನ್ನು ಖರೀದಿಸಲು ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ



ಪೈಕಿ, ಕ್ರೀಡಾಪಟುವಿಗೆ ಪ್ರಸಕ್ತ ಸಾಲಿಗೆ ರೂ. 10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 25–10–2010ರ ಟಿಪ್ಪಣಿಯನ್ನು ಒಪ್ಪಿದೆ.**

## 20]. ವಿಷಯದ ಸಂಖ್ಯೆ :–ತೆಆಸ್ಥಾಸ/66/2010–11

ಆಯುಕ್ತರವರ ಟಿಪ್ಪಣಿ ದಿನಾಂಕ: 25–10–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 179 (ಹಳೇ ವಾರ್ಡ್ ನಂ. 57) ಸ್ವತ್ತಿನ ಸಂಖ್ಯೆ: ಸಾರಕ್ಕಿ ಗ್ರಾಮದ ಸರ್ವೆ ನಂ. 58/1ಎ, 59, 64/2, 65 ಮತ್ತು 69 ರಲ್ಲಿನ ಸ್ವತ್ತುಗಳನ್ನು ಬೃಹತ್ ನೀರುಗಾಲುವೆ 'ಯು' ಮಾದರಿ ಚರಂಡಿ ಕಾಮಗಾರಿಗಾಗಿ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕೆಂದು, ಮುಖ್ಯ ಇಂಜಿನಿಯರ್ ಬೃಹತ್ ಮಳೆನೀರು ಕಣಿವೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ದಿನಾಂಕ: 18–10–2010 ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಬನಶಂಕರಿಯಿಂದ ನವೋದಯ ಲೇಔಟ್‌ನವರೆಗೆ ಆರ್.ಸಿ.ಸಿ. 'ಯು' ಮಾದರಿಯ ಮಳೆನೀರು ಚರಂಡಿಯ ನಿರ್ಮಾಣದ ಕಾಮಗಾರಿಯನ್ನು ನಿರ್ವಹಿಸಲು ಕೆಲಸದ ಆದೇಶವನ್ನು ಗುತ್ತಿಗೆದಾರರಿಗೆ ನೀಡಲಾಗಿದ್ದು, ಶಾಖಾಂಬರಿ ನಗರದಲ್ಲಿ ಹೊಸದಾಗಿ ನಿರ್ಮಿಸಲಾದ ಲೆಔಟ್‌ನಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಪೈಪ್‌ಲೈನ್‌ನಿಂದ ಮಳೆಯ ನೀರು ಪ್ರಾರಂಭವಾಗಿ ಲೇಔಟ್‌ನ ಪರಿಧಿಯಲ್ಲಿ ಸಾಗಿ, ಮುಂದೆ ಜಯಂತಿಗಾರ್ಡ್‌ನ್ ಅಪಾರ್ಟ್‌ಮೆಂಟ್‌ನಲ್ಲಿ ಹಾದು ಹೋಗಿ ಜೆ.ಪಿ.ನಗರದ ಮುಖ್ಯರಸ್ತೆಯಲ್ಲಿರುವ ಮಳೆಯ ನೀರು ಚರಂಡಿಗೆ ಸೇರುವಂತೆ, ಯೋಜಿಸಲಾಗಿದೆ. ಮಳೆನೀರಿನ ಚರಂಡಿಯನ್ನು 3.20 ಮೀ x 1.80 ಮೀ. ವಿಸ್ತೀರ್ಣದ ವೆಂಟ್ ನಿರ್ಮಿಸಲು ಯೋಜಿಸಿದ್ದು, ಆರ್.ಸಿ.ಸಿ. ಚರಂಡಿಗೆ ಬದಿಗೋಡೆ ಮತ್ತು ತಳಪಾಯದ ಸೆಟ್‌ಬ್ಯಾಕ್‌ಗಳು ಸೇರಿದಂತೆ 4.30 ಮೀ. ಗಳ ಅಗಲದ ಜಮೀನು/ನಿವೇಶನ ಅವಶ್ಯಕತೆ ಇರುತ್ತದೆ. ಹಾಲಿ ಲೇಔಟ್‌ನಲ್ಲಿರುವ ಮಳೆನೀರು ಚರಂಡಿಯು 2 ಮೀ. ಅಗಲವಿದ್ದು, ಸದರಿ ಮಳೆನೀರಿನ ಚರಂಡಿಯನ್ನು ಬಾಕ್ಸ್ ಡ್ರೈನ್‌ನಂತೆ ನಿರ್ಮಿಸಿ ಅದರ ಮೇಲೆ ರಸ್ತೆಯನ್ನು ಯೋಜಿಸಿದ್ದರೆ ಹಾಲಿ ಇರುವ 2 ಮೀ. ಅಗಲದೊಂದಿಗೆ ಇನ್ನೂ 6 ಮೀ.ಗಳ ಅವಶ್ಯಕತೆ ಇರುತ್ತದೆ. ಸದರಿ ಜಾಗವನ್ನು ಶಾಸಕರು ಸ್ಥಳ ಪರಿಶೀಲನೆ ಮಾಡಿ, ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಮುಖ್ಯ ಅಭಿಯಂತರರು (ಎಸ್‌ಡಬ್ಲ್ಯೂಡಿ) ರವರಿಗೆ ತಿಳಿಸಿದ್ದು, ಅದರಂತೆ ಭೂಮಾಪಕರು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ, ಭೂಸ್ವಾಧೀನತೆಗೆ ಒಳಪಡುವ ಸ್ವತ್ತುಗಳ

ವಿಸ್ತೀರ್ಣದ ವಿವರಗಳನ್ನು ನೀಡಿದ್ದು, ಅದರಂತೆ ಮುಖ್ಯ ಅಭಿಯಂತರರು (ಎಸ್‌ಡಬ್ಲ್ಯೂಡಿ) ರವರು ಸ್ಥಳ ಪರಿಶೀಲಿಸಿ,ಭೂಸ್ವಾಧೀನ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ರವರಿಗೆ ಶಿಫಾರಸ್ಸು ಮಾಡಿದ್ದು, ಉಪ ಆಯುಕ್ತರು (ಭೂಸ್ವಾಧೀನ) ರವರು ಸಹಸ್ಥಳ ತನಿಖೆ ಮಾಡಿ ಭೂಸ್ವಾಧೀನ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಕೆಳಕಂಡಂತೆ ಇರುತ್ತವೆ.



| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ನಿವೇಶನ ಸಂಖ್ಯೆ, ಖಾತೆ ಸಂಖ್ಯೆ | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆ | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ ಚ.ಅ ಗಳಲ್ಲಿ | ಷರಾ |
|---|---|---|---|---|---|
| 1 | 179 (ಹಳೇ ವಾರ್ಡ್ ನಂ. 57), ಸಾರಕ್ಕಿ ಗ್ರಾಮದ ಸರ್ವೆ ನಂ. 58/1ಎ, | ಶ್ರೀ. ರಾಮಯ್ಯ, (ಆರ್.ಟಿ.ಸಿ. ಪ್ರಕಾರ) ಶ್ರೀ.ಎ.ಜಿ.ಕುಲಕರ್ಣಿ ಹಾಗೂ ಇತರ 18 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 192 ಚ.ಮೀ. (2065 ಚ.ಅ) | – |
| 2 | 179 (ಹಳೇ ವಾರ್ಡ್ ನಂ. 57), ಸಾರಕ್ಕಿ ಗ್ರಾಮದ ಸರ್ವೆ ನಂ. 59, | ಶ್ರೀಮತಿ ಜಯಂತಿ, ನಿರ್ಮಲ ಮತ್ತು ಇತರ 14 ಜನ (ಆರ್.ಟಿ.ಸಿ. ಪ್ರಕಾರ) ಶ್ರೀ.ಎಸ್.ರಾಮಕುಮಾರ್ ಮತ್ತು ಇತರ 20 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 168 ಚ.ಮೀ. (1808 ಚ.ಅ) | – |
| 3 | 179 (ಹಳೇ ವಾರ್ಡ್ ನಂ. 57), ಸಾರಕ್ಕಿ ಗ್ರಾಮದ ಸರ್ವೆ ನಂ. 64/2, | ಶ್ರೀಮತಿ ಲಕ್ಷ್ಮಿನಾರಾಯಣಮ್ಮ ಇತರ 13 ಜನ (ಆರ್.ಟಿ.ಸಿ. ಪ್ರಕಾರ) ಶ್ರೀ.ಮುನಿವೆಂಕಟಪ್ಪ ಮತ್ತು ಇತರ 5 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 411 ಚ.ಮೀ. (4422 ಚ.ಅ) | – |

| | | | | | |
|---|---|---|---|---|---|
| 4 | 179 (ಹಳೇ ವಾರ್ಡ್ ನಂ. 57), ಸಾರಕ್ಕಿ ಗ್ರಾಮದ ಸರ್ವೆ ನಂ. 65, | ಶ್ರೀ.ಎ.ಜಿ.ಕೃಷ್ಣಮೂರ್ತಿ (ಆರ್.ಟಿ.ಸಿ. ಪ್ರಕಾರ) ಶ್ರೀ.ಮುನಿವೆಂಕಟಪ್ಪ ಉ॥ ರಾಘವೇಂದ್ರ ಮತ್ತು ಇತರ 4 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 294 ಚ.ಮೀ. (3163 ಚ.ಅ) | – |
| 5 | 179 (ಹಳೇ ವಾರ್ಡ್ ನಂ. 57), ಸಾರಕ್ಕಿ ಗ್ರಾಮದ ಸರ್ವೆ ನಂ. 69, | ಶ್ರೀ. ಕಾಟನ್‌ಪೇಟೆ ಸೊಸೈಟಿ (ಆರ್.ಟಿ.ಸಿ. ಪ್ರಕಾರ) ಶ್ರೀ. ಆರ್.ಧರ್ಮಸಾಧಕ್ (ಅನುಭವದಾರ) (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 159 ಚ.ಮೀ. (1710 ಚ.ಅ) | – |



ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006–07, ದಿನಾಂಕ: 17–04–2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಈ ಪ್ರಕರಣದ ಸ್ವತ್ತಿಗೆ ಭೂಪರಿಹಾರವನ್ನು ಹಾಗೂ ಕಟ್ಟಡದ ಮೌಲ್ಯವನ್ನು ಸೇರಿಸಿ ಒಟ್ಟು ರೂ. **2,89,97,959–00 (ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ತೊಂಭತ್ತೇಳು ಸಾವಿರದ ಒಂಭೈನೂರ ಐವತ್ತೊಂಭತ್ತು ರೂ.ಗಳು)**ಗಳನ್ನು ಪಾವತಿಸುವ ಮೂಲಕ ಪಾಲಿಕೆಗೆ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಿಲಾಗಿದೆ.

**‘ಅ’**

1. ನಿವೇಶನ ದರ ಚ.ಅ 1ಕ್ಕೆ ಮಾರ್ಗ ಸೂಚಿ ಬೆಲೆ ರೂ. 1,400/– ರಂತೆ 13,168 ಚ.ಅಡಿಗಳಿಗೆ – 1,84,35,200–00
2. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಶಾಸನಬದ್ಧ ಭತ್ಯೆ ಶೇ 12 ರಂತೆ – 22,12,224–00
3. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ 30 ರಂತೆ – 55,30,560–00

**ನಿವೇಶನದ ಮೌಲ್ಯ ಒಟ್ಟು** **2,61,77,984 –00**

‘ಆ’

4. ಶೇಕಡ 10 ರಷ್ಟು ಆಡಳಿತ ವೆಚ್ಚ = 26,17,798–00
5. ಶೇಕಡ 1 ರಷ್ಟು ಆಡಿಟ್ ವೆಚ್ಚ = 26,177–00
6. ಪ್ರಕಟಣಾ ವೆಚ್ಚ = 1,00,000–00

**ಒಟ್ಟು 27,43,975–00**

**(ಅ+ಆ) ಒಟ್ಟು** 2,89,21,959–00

**(ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ಇಪ್ಪತ್ತೊಂದು ಸಾವಿರದ ಒಂಭೈನೂರ ಐವತ್ತೊಂಭತ್ತು ರೂಪಾಯಿಗಳು ಮಾತ್ರ)**



‘ಇ’

7. **ಕಾಂಪೌಂಡ್ ವೆಚ್ಚ 38 ಚ.ಮೀ X ರೂ.2,000 ಚ.ಮೀ.ರಂತೆ – 76,000–00**

8. **ಒಟ್ಟು ಮೌಲ್ಯ (ಅ+ಆ+ಇ) – 2,89,97,959–00**

**(ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ತ್ತೊಂಭತ್ತೇಳು ಸಾವಿರದ ಒಂಭೈನೂರ ಐವತ್ತೊಂಭತ್ತು ರೂ.ಗಳು)**

ಈ ಸ್ವತ್ತುಗಳನ್ನು ಪ್ರಸ್ತಾವಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಡಲಾಗಿದೆ. ಆದ್ದರಿಂದ ಮೇಲ್ಕಂಡ ವೆಚ್ಚವನ್ನು ಭರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮತ್ತು ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆ ಕೋರಲು ಹಾಗೂ ಇದಕ್ಕೆ ತಗಲುವ ವೆಚ್ಚ ಸುಮಾರು **2,89,97,959–00** ರೂಗಳನ್ನು **(ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ತ್ತೊಂಭತ್ತೇಳು ಸಾವಿರದ ಒಂಭೈನೂರ ಐವತ್ತೊಂಭತ್ತು ರೂ.ಗಳು)** ಪಾಲಿಕೆಯ 2010–11 ರ ಆಯ ವ್ಯಯದಿಂದ ಭರಿಸಲು ಅನುಮೋದನೆ ಕೋರಿ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಹಾಗೂ ಪಾಲಿಕೆಯ ಸಾಮಾನ್ಯ ಸಭೆಯ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 25–10–2010ರ ಟಿಪ್ಪಣಿಯನ್ನು ಒಪ್ಪಿದೆ.**

**21]. ವಿಷಯದ ಸಂಖ್ಯೆ :–ತೆಆಸ್ಥಾಸ/67/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅ.ಆ(ಕ/ಆ/ಆ)ಪಿಎಸ್ಆರ್(4)91/2009–10 ದಿನಾಂಕ: 25–10–2010. ರಲ್ಲಿ ವಿವರಿಸಿರುವಂತೆ, ಶ್ರೀ ಅ.ನರಸಿಂಹನ್, ಅಧ್ಯಕ್ಷರು, ಮುದಲಿಯಾರ್ ಸೇವಾ ಸಂಘ (ರಿ), ಪ್ರಕಾಶ್ ನಗರ, ಬೆಂಗಳೂರು – 560 021 ರವರು ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿದ್ದು, ಸಂಸ್ಥೆ ವತಿಯಿಂದ ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವುದು, ಎಸ್.ಎಸ್.ಎಲ್.ಸಿ, ಪಿ.ಯು.ಸಿ ವಿದ್ಯಾರ್ಥಿಗಳಿಗೆ ಉಚಿತ ಪಾಠಶಾಲೆ ನಡೆಸುವುದು, ಜನಸಾಮಾನ್ಯರಿಗೆ ಉಚಿತ ವೈದ್ಯ ತಪಾಸಣೆ ಮತ್ತು ಔಷಧಿಗಳನ್ನು ನೀಡುವುದು, ಪ್ರತಿ ವರ್ಷ ಅರ್ಹ ಬಡ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ, ವಿದ್ಯಾರ್ಥಿ ವೇತನ ನೀಡುವುದು ಹಾಗೂ ಅನುಭವವುಳ್ಳ ಆರು ವೈದ್ಯರ ತಂಡದೊಂದಿಗೆ ಜನಸಾಮಾನ್ಯರಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಔಷಧಿಗಳನ್ನು ನೀಡುವ ಜನಪರ ಸೇವೆ ಸಲ್ಲಿಸುತ್ತಿದೆಯೆಂದು ತಿಳಿಸಿರುತ್ತಾರೆ.

ಮುಂದುವರೆದು ಸದರಿ ಸಂಘವು ನಿರಂತರವಾಗಿ ಉಚಿತ ಕಣ್ಣಿನ ತಪಾಸನೆ ಶಿಬಿರವನ್ನು ನಡೆಸುತ್ತಾ ಬಂದಿದ್ದು, ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯೊಂದಿಗೆ ಸೇರಿ ಪ್ರತಿ ತಿಂಗಳು ಎರಡನೇ ಶನಿವಾರ ಉಚಿತ ಆರೋಗ್ಯ ತಪಾಸಣೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಂದು ಹಾಗೂ ಸಂಘದ ಸ್ವ–ವಿಳಾಸದಲ್ಲಿ ಪ್ರತಿ ತಿಂಗಳು ಪ್ರತಿ ಎರಡನೇ ಶನಿವಾರದಂದು ಬೆಳಗ್ಗೆ 10 ರಿಂದ 1 ಗಂಟೆಯವರೆಗೆ ವೈದ್ಯರ ತಂಡದೊಂದಿಗೆ ಕಿವಿ, ಕಣ್ಣು, ದಂತಚಿಕಿತ್ಸೆ, ಮೂಳೆ, ಮಕ್ಕಳಿಗೆ ಚಿಕಿತ್ಸೆ ಇತರೆ ಚಿಕಿತ್ಸೆಗಳನ್ನು ಶಿಬಿರದಲ್ಲಿ ನಡೆಸಲಾಗುತ್ತದೆ ಎಂದು ವಿವರಿ, ಸಂಘದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಖರ್ಚು ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ ಪಾಲಿಕೆ ವತಿಯಿಂದ ಧನ ಮತ್ತು ಔಷಧಿಗಳ ಸಹಾಯ ಒದಗಿಸಬೇಕೆಂದು ಕೋರಿರುತ್ತಾರೆ.



ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಉಲ್ಲೇಖಿತ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ..10.00 ಕೋಟಿಗಳ ಪೈಕಿ, ಪ್ರಸ್ತಾವಿತ ಸಂಸ್ಥೆಗೆ ಪ್ರಸಕ್ತ ಸಾಲಿಗೆ ರೂ..10,000/–ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 25–10–2010ರ ಟಿಪ್ಪಣಿಯನ್ನು ಒಪ್ಪಿದೆ.**

**22]. ವಿಷಯದ ಸಂಖ್ಯೆ :–ತೆಆಸ್ಥಾಸ/68/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಎ3(1)ಪಿಆರ್(29)10–11 ದಿನಾಂಕ: 29–10–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಾರ್ತ್ ಮಡಿವಾಳ ಮಹಾಜನ ಸಂಘ (ರಿ) ನಂ. 91/72–73, 1ನೇ ಆರ್ ಬ್ಲಾಕ್, ರಾಜಾಜಿನಗರ, ಪಶ್ಚಿಮ ಕಾರ್ಡ್ ರಸ್ತೆ, ಸರ್ಕಾರಿ ಸೋಪ್ ಫ್ಯಾಕ್ಟರಿ ಎದುರು ಇರುವ ದೋಬಿಘಾಟಿನ ಸಂಘದ ಅಧ್ಯಕ್ಷರು, ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರಿಗೆ ಸಲ್ಲಿಸಿರುವ ಮನವಿಯನ್ನು ಮೇಲ್ಕಂಡ ವಿಳಾಸದಲ್ಲಿರುವ ದೋಬಿಘಾಟಿನಲ್ಲಿ ಶುಚಿತ್ವದ ಕಲ್ಲುಗಳಿಗೆ ಶುಲ್ಕ ನಿಗಧಿಪಡಿಸುವಂತೆ ಕೋರಿರುವ ಮೇರೆಗೆ ಮಾನ್ಯ ಸಚಿವರು ದಿನಾಂಕ : 14–10–2009 ರಂದು ಬರೆದಿರುವ ಪತ್ರದಲ್ಲಿ ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಮೇಲ್ಕಂಡ ದೋಬಿಘಾಟಿನ ಪ್ರದೇಶವು ಸುಮಾರು 3 ಎಕರೆ ವಿಸ್ತೀರ್ಣವುಳ್ಳದ್ದಾಗಿ ಮಡಿವಾಳ ಜನಾಂಗದವರು ಕುಲಕಸುಬು ಮಾಡಿಕೊಂಡು ಜೀವನ ಸಾಗಿಸುತ್ತಿರುತ್ತಾರೆ. ಈ ವೃತ್ತಿ ಜೀವನಕ್ಕಾಗಿ 80 ಶುಚಿತ್ವದ ಕಲ್ಲುಗಳನ್ನು ಅಳವಡಿಸಿ ಕೊಂಡಿರುತ್ತಾರೆ. ಸಂಘದ ವತಿಯಿಂದ 80 ಮಂದಿ ದಿನ ನಿತ್ಯದ ಕುಲಕಸುಬಿನಿಂದ ಜೀವನ ಸಾಗಿಸುತ್ತಿರುವ ಈ ಜನಾಂಗದವರನ್ನು ಗುರುತಿಸಿ ಭಾವಚಿತ್ರ ಸಮೇತ ಪಟ್ಟಿ ಸಲ್ಲಿಸಿ ಪ್ರತಿ ಕಲ್ಲಿಗೆ ಶುಲ್ಕ ನಿಗಧಿಪಡಿಸಲು ಕೋರಿದ್ದಾರೆ.

ಅದರಂತೆ, ಸದರಿ ಸಂಘದವರ ಮನವಿಯನ್ನು ಪರಿಗಣಿಸಿ ಸದರಿ ಸಮುದಾಯಕ್ಕೆ ಅನುಕೂಲ ಮಾಡುವ ದೃಷ್ಟಿಯಿಂದ ಪ್ರತಿ ಕಲ್ಲಿಗೆ ಮಾಹೆಯಾನ ರೂ. 50/– ರಂತೆ ವಾರ್ಷಿಕ ರೂ. 600/– ಗಳ ಶುಲ್ಕವನ್ನು ನಿಗಧಿ ಪಡಿಸಬಹುದಾಗಿದೆ.

ತತ್ಸಂಬಂಧವಾಗಿ, ಮೇಲಿನ ಪ್ರಸ್ತಾವನೆಯ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 29–10–2010ರ ಟಿಪ್ಪಣಿಯನ್ನು ಒಪ್ಪಿದೆ.**



**23]. ವಿಷಯದ ಸಂಖ್ಯೆ :–ತೆಆಸ್ಥಾಸ/69/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್‌ಆರ್(4)26/ 2010-11ದಿನಾಂಕ: 29–10–2010. ರಲ್ಲಿ ವಿವರಿಸಿರುವಂತೆ, ಶ್ರೀ ಕಟ್ಟಾ ಜಗದೀಶ್, ವಾರ್ಡ್–96 ರ ಪಾಲಿಕೆ ಸದಸ್ಯರು ಪತ್ರ ಮತ್ತು ದಾಖಲೆಗಳನ್ನು ನೀಡಿ, ಶ್ರೀ ಎಸ್. ಸಿ. ನಾಗಾನಂದ ಸ್ವಾಮಿ, ಕರ್ನಾಟಕದ ಹೆಸರಾಂತ ಜಲಸ್ಥಂಭ ಪ್ರದರ್ಶಕ. ಜಲಸ್ಥಂಭದ ವಿದ್ಯೆಯಲ್ಲಿ ಅಪ್ರತಿಮ ಸಿದ್ಧಿ ಪಡೆದ ಪ್ರತಿಭಾನ್ವಿತ ಯುವ ಸಾಧಕರಾಗಿರುವ ಇವರು ಇಡೀ ಭಾರತ ದೇಶದಾದ್ಯಂತ ಹಲವಾರು ಪ್ರದರ್ಶನಗಳನ್ನು ನೀಡಿ ಪ್ರಸಿದ್ಧಿ ಪಡೆದಿರುವುದಾಗಿ, ಅಲ್ಲದೆ ಕಳೆದ ಸೆಪ್ಟೆಂಬರ್ 22, 2000 ನೇ ಸಾಲಿನಲ್ಲಿ ದೆಹಲಿಯ ತಾಲ್ಕಟೋರ ಈಜುಕೊಳದಲ್ಲಿ (20 ಅಡಿಗಳ ಆಳವಿರುವ ಈಜುಕೊಳ) 22 ಗಂಟೆಗಳ ಕಾಲ ಸತತವಾಗಿ ದೇಹದ ಯಾವುದೇ ಅಂಗಾಂಗಗಳನ್ನು ಅಲುಗಾಡಿಸದೇ ಲಂಭಾಕೃತಿಯಲ್ಲಿ ನಿಂತು ಜಲಸ್ಥಂಭನ ವಿದ್ಯೆ ಪ್ರದರ್ಶಿಸಿ ವಿಶ್ವದಲ್ಲೇ ಮೊದಲಿಗನೆಂಬ ಕೀರ್ತಿಗೆ ಪಾತ್ರರಾಗುವುದರ ಮೂಲಕ ವಿಶ್ವದಾಖಲೆ ನಿರ್ಮಿಸಿ ನಮ್ಮ ನಾಡಿಗೆ ಕೀರ್ತಿ ತಂದು ಕೊಟ್ಟಿರುವುದಾಗಿ ತಿಳಿಸಿದ್ದಾರೆ.

ಪ್ರಸ್ತುತ ಸದರಿಯವರು ಇದೇ ಸಾಹಸವನ್ನು ಬೆಂಗಳೂರಿನ ಸದಾಶಿವನಗರದ ಈಜುಕೊಳದಲ್ಲಿ 1 ಗಂಟೆಯ ಕಾಲ ಸತತವಾಗಿ ಕರ್ನಾಟಕ ಘನ ಸರ್ಕಾರದ ಗೌರವಾನ್ವಿತ ರಾಜ್ಯಪಾಲರ, ಸನ್ಮಾನ್ಯ ಮುಖ್ಯಮಂತ್ರಿಗಳ ಹಾಗೂ ಗಣ್ಯ ಮಾನ್ಯರುಗಳ ಸಮ್ಮುಖದಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪತ್ರಿಕಾ ಮಾಧ್ಯಮದವರೆಲ್ಲರನ್ನೂ ಆಹ್ವಾನಿಸಿ ಪ್ರದರ್ಶನ ನೀಡುತ್ತಿದ್ದಾರೆಂದು, ಹಾಗೂ ಶ್ರೀಯುತರು ವಿದೇಶಗಳಲ್ಲಿ ಪ್ರದರ್ಶನ ನೀಡಲು ಹೊರಟಿರುವ ಹಿನ್ನೆಲೆಯಲ್ಲಿ ಅನುಕೂಲವಾಗವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.1.00 ಲಕ್ಷಗಳ ಅನುದಾನವನ್ನು ನೀಡಿ ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಸದರಿಯವರಿಗೆ ರೂ.10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 29–10–2010ರ ಟಿಪ್ಪಣಿಯನ್ನು ಒಪ್ಪಿದೆ.**

**24]. ವಿಷಯದ ಸಂಖ್ಯೆ :–ತೆಆಸ್ಥಾಸ/70/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಮುಲೆಅ/ಪಿಜಿ(5)/ಪಿಆರ್/ 16 /09–10 ದಿನಾಂಕ: 28–10–2010. ರಲ್ಲಿ ವಿವರಿಸಿರುವಂತೆ ಸರ್ಕಾರಿ ಆದೇಶ ಸಂಖ್ಯೆ: ಆಇ(ವಿಶೇಷ) 20/ಸಿಪಿಪಿ/2010 ದಿನಾಂಕ : 01.10.2010 ರಂತೆ ದಿನಾಂಕ : 01.07.2010 ರಿಂದ ರಾಜ್ಯ ಸರ್ಕಾರ ನಿವೃತ್ತಿ ವೇತನದಾರರಿಗೆ ಒಂದು ಕಂತು ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಶೇ. 10.25% ರಷ್ಟು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಈಗಾಗಲೇ ಮಂಜೂರಾಗಿರುವ ಶೇ. 46% ರ ಜೊತೆಗೆ ಶೇ. 10.25% ಸೇರಿ ಶೇ. 56.25% ರಂತೆ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನದ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿದ್ದು, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆಗೆ ಅಳವಡಿಸಿಕೊಂಡು ದಿನಾಂಕ : 01.07.2010 ರಿಂದ ಅನ್ವಯಿಸುವಂತೆ ಶೇ. 10.25% ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ.



ಸದರಿ ಹೆಚ್ಚುವರಿ ರೂ.1,34,89,000.00 ಗಳ ತುಟ್ಟಿ ಭತ್ಯೆಯ ವೆಚ್ಚವನ್ನು 2010–2011 ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕ ಶೀರ್ಷಿಕೆ 02–ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಈಗಾಗಲೇ ಅನುವು ಮಾಡಿಕೊಳ್ಳಲಾಗಿದೆ. ಈ ತುಟ್ಟಿಭತ್ಯೆಯನ್ನು ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

**ನಿರ್ಣಯ :– ಆಯುಕ್ತರ ದಿನಾಂಕ : 28–10–2010ರ ಟಿಪ್ಪಣಿಯನ್ನು ಒಪ್ಪಿದೆ.**

**25]. ವಿಷಯದ ಸಂಖ್ಯೆ :–ತೆಆಸ್ಥಾಸ/71/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅ.ಆ(ಕ/ಆ/ಆ)ಪಿಎಸ್ಆರ್(4)90/2009–10 ದಿನಾಂಕ: 29–10–2010. ರಲ್ಲಿ ವಿವರಿಸಿರುವಂತೆ, ಸಹನಾ ಅಂಗವಿಕಲ ಸೇವಾ ಪ್ರತಿಷ್ಠಾನ (ರಿ) ನಂ. 1301, 11ನೇ ಮುಖ್ಯ ರಸ್ತೆ, ಹಂಪಿನಗರ, ವಿಜಯನಗರ, ಬೆಂಗಳೂರು–560 040ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆ ವತಿಯಿಂದ ವಿಲಚೇತನರಿಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕ ಪುನಶ್ಚೇತನ ಕಲ್ಪಿಸಲಾಗುತ್ತಿದೆಂದು, ಬ್ರೈಲ್ ಪಠ್ಯಪುಸ್ತಕವನ್ನು ಮುದ್ರಿಸಿ ಪೂರ್ವಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಅಂಧ ವಿದ್ಯಾರ್ಥಿ ವೃಂದದವರಿಗೆ ಉಚಿತವಾಗಿ ಬ್ರೈಲ್ ಪುಸ್ತಕಗಳನ್ನು ಒದಗಿಸುತ್ತಿರುವುದಾಗಿ ತಿಳಿಸಿ, ಇಂತಹ ಅನೇಕ ಕಾರ್ಯಕ್ರಮ ಹಾಗೂ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಯಾವುದೇ ರೀತಿಯ ಅನುದಾನ ಪಡೆಯುತ್ತಿಲ್ಲವೆಂದು ತಿಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕನಿಷ್ಠ

ರೂ.1.00ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಅಂಗವಿಕಲ ಶ್ರೇಯೋಭಿವೃದ್ಧಿಗೆ ನೆರವು ನೀಡಬೇಕೆಂದು ಕೋರಿದ್ದಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಉಲ್ಲೇಖಿತ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ **ರೂ.**10.00 ಕೋಟಿಗಳ ಪೈಕಿ, ಪ್ರಸ್ತಾವಿತ ಸಂಸ್ಥೆಗೆ ಪ್ರಸಕ್ತ ಸಾಲಿಗೆ **ರೂ.**1.00ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 29–10–2010ರ ಟಿಪ್ಪಣಿಯನ್ನು ಒಪ್ಪಿದೆ.

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/72/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್ಆರ್(4)27/ 2010–11 ದಿನಾಂಕ: 29–10–2010. ರಲ್ಲಿ ವಿವರಿಸಿರುವಂತೆ, ಶ್ರೀಮತಿ ಬಿ.ಸಿ. ಪಾರ್ವತಮ್ಮ, ಕ್ರೀಡಾಪಟು, ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಾನು ವಿದ್ಯಾರ್ಥಿ ಮಟ್ಟದಿಂದಲೂ ಬೆಂಗಳೂರು ಗ್ರಾಮಾಂತರ. ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆ ಕ್ರೀಡಾಪಟುವಾಗಿ ಕ್ರೀಡೆಗಳಲ್ಲಿ ಭಾಗವಹಿಸಿ ತಾಲ್ಲುಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಗಳಿಸಿ ಜಿಲ್ಲೆಗಳಿಗೆ ಗೌರವ ತಂದಿರುತ್ತೇನೆಂದು, ಈಗ ಹಿರಿಯರ ಮಾಸ್ಟರ್ ಅಥ್ಲೆಟಿಕ್ಸ್, ಅಸೋಸಿಯೇಷನ್ ಆಫ್ ಕರ್ನಾಟಕದ ವತಿಯಿಂದ ಹರಿಯಾಣ ಮತ್ತು ಚೆನ್ನೈನಲ್ಲಿ ನಡೆದ ಜಿಲ್ಲಾ ಮಟ್ಟ, ರಾಜ್ಯ ಮಟ್ಟ, ಹಾಗೂ ರಾಷ್ಟ್ರ ವ್ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ "ಚಿನ್ನದ ಪದಕ" ಪಡೆದಿರುತ್ತೇನೆಂದು ತಿಳಿಸಿ, ಹಿರಿಯರ ಮಾಸ್ಟರ್ ಅಥ್ಲೆಟಿಕ್ ಫೆಡರೇಶನ್ ಆಫ್ ಇಂಡಿಯಾ ವತಿಯಿಂದ ಡಿಸೆಂಬರ್ 6 ರಿಂದ ಡಿಸೆಂಬರ್ 12, 2010 ರವರೆಗೆ ಮಲೇಷಿಯಾದ ಕೌಲಲಾಂಪುರದಲ್ಲಿ 16ನೇ ಅಂತರ ರಾಷ್ಟ್ರೀಯ ಹಿರಿಯ ಅಥ್ಲೆಟಿಕ್ ಆ–ಯೋಜಿಸಿರುವ ಕ್ರೀಡಾಕೂಟಕ್ಕೆ ತಾನು ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಮತ್ತು ರಾಮನಗರ ಜಿಲ್ಲೆಯಿಂದ



ಏಕೈಕ ಮಹಿಳೆಯಾಗಿ ಆಯ್ಕೆಯಾಗಿದ್ದು, ಈ ಕ್ರೀಡಾ ಕೂಟದಲ್ಲಿ ಭಾಗವಹಿಸಲು ನನ್ನ ಸ್ವತ: ಖರ್ಚಿನಲ್ಲಿ ಭಾಗವಹಿಸಬೇಕಾಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಆರ್ಥಿಕ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ಶ್ರೀ ಬಿ.ಎಸ್. ಆನಂದ್, ವಾರ್ಡ್ ನಂ. 157ರ ಪಾಲಿಕೆ ಸದಸ್ಯರು ಸಹ ಸದರಿ ಕ್ರೀಡಾಪಟು ರವರ ಮನವಿಯನ್ನು ಪರಿಶೀಲಿಸಿ ಆರ್ಥಿಕ ಸಹಾಯವನ್ನು ನೀಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಸದರಿಯವರಿಗೆ ರೂ.10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 29–10–2010ರ ಟಿಪ್ಪಣಿಯನ್ನು ಒಪ್ಪಿದೆ.

ಹೆಚ್ಚುವರಿ ವಿಷಯ

## 27]. ವಿಷಯದ ಸಂಖ್ಯೆ :–ತೆಆಸ್ಥಾಸ/73/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ)/ಪಿಎಸ್ಆರ್(4)/95/2009–10 ದಿನಾಂಕ: 11–11–2010. ರಲ್ಲಿ ವಿವರಿಸಿರುವಂತೆ, ವಾಸವಿ ಯುವಜನ ಸಂಘ, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಶ್ರೀ ವಾಸವಿ ದೇವಸ್ಥಾನ ರಸ್ತೆ,

ಮಲ್ಲೇಶ್ವರಂ, ಬೆಂಗಳೂರು. ಇವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ದಿನಾಂಕ : 12–02–2010 ರಂದು ನಗೆಹಬ್ಬ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾರ್ವಜನಿಕರಗೋಸ್ಕರ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಗಳನ್ನು ಕಳೆದ ವರ್ಷವೂ ಸಹ ಆಚರಿಸಿದ್ದು, ಸಮಾರು ರೂ.8.00 ಲಕ್ಷಗಳು ಖರ್ಚಾಗುತ್ತದೆಂದು, ಪಾಲಿಸಿಕೊಂಡು ರೂ.8.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಉಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ಸದರಿ ಸಂಸ್ಥೆಗೆ ರೂ.1.00ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 11–11–2010ರ ಟಿಪ್ಪಣಿಯನ್ನು ಒಪ್ಪಿದೆ.**

**(ಪಿ.ಎನ್.ಸದಾಶಿವ)**

ಆಧ್ಯಕ್ಷರು

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 26–11–2010 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಕೆ.ಚಂದ್ರಶೇಖರ್ – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| ಎನ್.ವೀರಣ್ಣ – ಸದಸ್ಯರು | ಉಪ ಕಾನೂನು ಅಧಿಕಾರಿ |
| ಜಿ.ಮಂಜುನಾಥ ರಾಜು – ಸದಸ್ಯರು | ಮುಖ್ಯ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) ರವರ ತಾಂತ್ರಿಕ ಸಲಹೆಗಾರರು |
| ಎಂ.ಜಿ.ಜಯರತ್ನ – ಸದಸ್ಯರು | |
| ಶಕೀಲಾ.ಎಂ – ಸದಸ್ಯರು | |
| ಟಿ.ಎ.ಗಾಯಿತ್ರಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

***01]. ವಿಷಯದ ಸಂಖ್ಯೆ :–ತೆಆಸ್ಥಾಸ/ 14/2010–11***

ಆಯುಕ್ತರವರ ಟಿಪ್ಪಣಿ ದಿನಾಂಕ : 06–08–2010. ರಲ್ಲಿ ವಿವರಿಸಿರುವಂತೆ, ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000 ದಂತೆ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುವನ್ನು ಮೂಲದಿಂದಲೇ ಅಂದರೆ ಮನೆಮನೆಗಳಿಂದ ಮತ್ತು ಇತರೆ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ನಿಯಮಾನುಸಾರ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ 2008–09ನೇ ಸಾಲಿನಲ್ಲಿ ಈ ಕೆಳಕಂಡಂತೆ ವಾರ್ಷಿಕ ಸುಮಾರು 200 ಕೋಟಿಯಷ್ಟು ಮೊತ್ತವನ್ನು ವೆಚ್ಚ ಮಾಡಿದ್ದು ಈ ಮೊತ್ತವು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ.

2008–09 ಹಾಗೂ ಸಾಲಿನಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ತಗುಲಿರುವ ವೆಚ್ಚ

| **ಕ್ರ.ಸಂ** | **ವಿವರಣೆ** | **2008–09ನೇ ಸಾಲಿನಲ್ಲಿ ವೆಚ್ಚವಾಗಿರುವ ಮೊತ್ತ (ರೂ ಕೋಟಿಗಳಲ್ಲಿ)** |
|---|---|---|
| 1 | ಆಡಳಿತ ಮತ್ತು ಪೌರಕಾರ್ಮಿಕರ ಸಂಬಳ | 88.15 |
| 2 | ಗುತ್ತಿಗೆದಾರರಿಗೆ ಪಾವತಿಸಿರುವ ಮೊತ್ತ | 111.55 |
| 3 | ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಾಣ | 4.39 |
| 4 | ವೈಜ್ಞಾನಿಕ ತ್ಯಾಜ್ಯ ವಿಲೇವಾರಿ | 5.84 |
| | **ಒಟ್ಟು** | **209.92** |

ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000ರಂತೆ ಸದರಿ ವೆಚ್ಚವನ್ನು ಭರಿಸಲು ತ್ಯಾಜ್ಯ ಉತ್ಪಾದಕರಿಂದ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡಲು ಸೂಚಿಸಿರುತ್ತದೆ. ಈ ಬಗ್ಗೆ ಈಗಾಗಲೇ ಕರ್ನಾಟಕ ಮುನಿಸಿಪಲ್ ಕಾಯ್ದೆಯ ಸೆಕ್ಷನ್ 103 (ಬಿ) ಅನ್ವಯ ಮಾಸಿಕ ಈ ಕೆಳಕಂಡ ಉಪಕರ ದರಗಳನ್ನು ನಿಗಧಿಪಡಿಸಲಾಗಿರುತ್ತದೆ.

**I. ವಾಸದ ಕಟ್ಟಡಗಳಿಗೆ**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 10 |
| 1000 ಚ.ಅ ಗಿಂತ ಹೆಚ್ಚು ಅಥವಾ 3000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 30 |
| 3000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | – ರೂ. 50 |

**I. ವಾಣಿಜ್ಯ ಕಟ್ಟಡಗಳಿಗೆ**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 50 |
| 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 100 |
| 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | – ರೂ. 200 |

**II. ಕೈಗಾರಿಕ ಕಟ್ಟಡಗಳು**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 100 |
| 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 200 |
| 5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ | – ರೂ. 300 |

**III. ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಮ್**

| | |
|---|---|
| 1000 ಚ.ಅ ಗಿಂತ ಕಡಿಮೆ ಇರುವ ಆವರಣಕ್ಕೆ | – ರೂ. 300 |
| 1000 ಚ.ಅ ಗಿಂತ ಹೆಚ್ಚು ಅಥವಾ 5000 ಚ.ಅ ಗಿಂತ | – ರೂ. 500 |

ಕಡಿಮೆ ಇರುವ ಆವರಣಕ್ಕೆ

5000 ಚ.ಅ ಗಿಂತ ಮೇಲ್ಪಟ್ಟ ಆವರಣಕ್ಕೆ – ರೂ. 600



ಸದರಿ ಮೊತ್ತದ ಅನ್ವಯ ಉಪಕರ ನಿಗಧಿಪಡಿಸಿದಲ್ಲಿ, ಘನತ್ಯಾಜ್ಯ ವಸ್ತು ನಿರ್ವಹಣೆಗೆ ವೆಚ್ಚ ಮಾಡುವ ಮೊತ್ತದಲ್ಲಿ ಸ್ವಲ್ಪ ಪ್ರಮಾಣವನ್ನು ಕಡಿಮೆಗೊಳಿಸಬಹುದು. 2008–09ನೇ ಸಾಲಿನಿಂದ ವಾಣಿಜ್ಯ ಕಟ್ಟಡಗಳಿಗೆ ಉದ್ದಿಮೆ ಪರವಾನಗಿ ನೀಡುವಾಗ ನಿಗಧಿಸಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡುತ್ತಿದ್ದು, ಇತರೆ ಕಟ್ಟಡಗಳಿಂದ ವಸೂಲಾತಿ ಮಾಡುತ್ತಿರುವುದಿಲ್ಲ.

ಘನತ್ಯಾಜ್ಯ ವಸ್ತು ನಿರ್ವಹಣೆಯ ಉಪಕರವನ್ನು ಈಗಾಗಲೇ ಕರ್ನಾಟಕದ ಎಲ್ಲಾ ನಗರ ಪಾಲಿಕೆ ಮತ್ತು ನಗರ ಸಭೆಗಳಲ್ಲಿ 2005 ರಿಂದಲೇ ವಸೂಲಾತಿ ಮಾಡುತ್ತಿದ್ದು, ಜವಹಾರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ (ಜೆ.ಎನ್.ಎನ್.ಯು.ಆರ್.ಎಂ) ರಡಿಯಲ್ಲಿ ಕೂಡ ಘನತ್ಯಾಜ್ಯ ವಸ್ತು ನಿರ್ವಹಣೆ ಉಪಕರವನ್ನು ವಸೂಲಿ ಮಾಡಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪಾಲಿಕೆಯು ಘನತ್ಯಾಜ್ಯ ವಸ್ತು ನಿರ್ವಹಣೆಯ ಉಪಕರವನ್ನು ಪ್ರತಿ ತಿಂಗಳು ಎಲ್ಲಾ ಕಟ್ಟಡಗಳಿಂದ ವಸೂಲಿ ಮಾಡಲು ಕಷ್ಟವಾಗುವುದರಿಂದ ಇದನ್ನು ಆಸ್ತಿ ತೆರಿಗೆಯ ಮೂಲಕ ವಸೂಲಾತಿ ಮಾಡಲು ಕ್ರಮಕೈಗೊಳ್ಳಲು ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/74/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್‌ಆರ್(4)20/2010-11 ದಿನಾಂಕ: 11–11–2010. ರಲ್ಲಿ ವಿವರಿಸಿರುವಂತೆ, ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್ (ರಿ), ಸಂಗೀತ ಹಾಗೂ ವಾದ್ಯಗಳ ಕಲಿಕಾ ಸಂಸ್ಥೆ ಅಮಿತಾಮೃತ, ನಂ. 1667(912) 10ನೇ ಮುಖ್ಯ ರಸ್ತೆ, 'ಎ' ಬ್ಲಾಕ್, 2ನೇ ಹಂತ, ರಾಜಾಜಿನಗರ ಬೆಂಗಳೂರು – 10. ಇವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ನಮ್ಮ ಸಂಸ್ಥೆಯು ಕಳೆದ 9 ವರ್ಷಗಳಿಂದ ಶಾಸ್ತ್ರೀಯ ಸಂಗೀತದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಸಂಗೀತ ತರಬೇತಿ, ಕಮ್ಮಟಗಳು, ಸೋದಾಹರಣ ಭಾಷಣಗಳು, ಸಂಗೀತ ಉತ್ಸವಗಳು, ಕರ್ನಾಟಕ ಸಂಗೀತಾಭಿರುಚಿ ಜನ ಸಾಮಾನ್ಯರಲ್ಲಿ ಬೆಳೆಸಿ, "ಮನೆಯಂಗಳದಲ್ಲಿ ಸಂಗೀತ ಸತ್ಸಂಗ" ಮುಂತಾದ ಕಾರ್ಯಕ್ರಮಗಳನ್ನು ನಡೆಸಿ, ಸಂಗೀತ ಕ್ಷೇತ್ರದ ದಿಗ್ಗಜರನ್ನು ಸನ್ಮಾನಿಸುತ್ತಾ ಬಂದಿರುವುದಾಗಿ, ತಮ್ಮ ಸಂಸ್ಥೆಯು ಈಗ 3 ದಿನಗಳ –12ನೇ ವಾರ್ಷಿಕೋತ್ಸವ ಹಾಗೂ ಕಾರ್ತಿಕ ಸಂಗೀತೋತ್ಸವ–2010 ನ್ನು ನಡೆಸಲು ತೀರ್ಮಾನಿಸಿದ್ದು, ಅದಕ್ಕೆ ರೂ.7,00,000/– ಗಳು ತಗಲುವ ಸಾಧ್ಯತೆಯಿರುವುದಾಗಿ ಅಂದಾಜು ಪಟ್ಟಿ ಸಲ್ಲಿಸಿ, ಸಂಗೀತ ಕ್ಷೇತ್ರದಲ್ಲಿ ಮಹತ್ಸಾಧನೆ ಮಾಡಲು ಹೊರಟಿರುವ ತಮ್ಮ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸುವ ನಿಟ್ಟಿನಲ್ಲಿ ರೂ.3,50,000/– ಗಳಷ್ಟು ಅನುದಾನವನ್ನು ಪಾಲಿಕೆ ವತಿಯಿಂದ ಮಂಜೂರು ಮಾಡಲು ಮನವಿ ಮಾಡಿರುತ್ತಾರೆ.

ಡಾ॥ ಅಶ್ವಥ್ ನಾರಾಯಣ್ ಸಿ. ಎನ್. ಮಾನ್ಯ ಶಾಸಕರು, ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರ ರವರೂ ಸಹ ಪತ್ರ ಬರೆದು ಸದರಿಯವರ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಸದರಿ ಸಂಸ್ಥೆಗೆ

ರೂ.10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 11–11–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ. ಒಂದು ಲಕ್ಷ ಸಹಾಯಧನ ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.**



## 03]. ವಿಷಯದ ಸಂಖ್ಯೆ :–ತೆಆಸ್ಥಾಸ/75/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್‌ಆರ್(4)28/2010-11 ದಿನಾಂಕ: 11–11–2010. ರಲ್ಲಿ ವಿವರಿಸಿರುವಂತೆ, ಶ್ರೀ ಗುರುದೇವ ನಾರಾಯಣ ಕುಮಾರ್, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ (ನೊಂ) 1ನೇ ಮಹಡಿ, ಬೆಂಗಳೂರು ಮಹಾನಗರ ಪಾಲಿಕೆ ಸಂಕೀರ್ಣ, ಧನ್ವಂತರಿ ರಸ್ತೆ, ಬೆಂಗಳೂರು – 560 009. ಇವರು ಪೂಜ್ಯ ಮಹಾ ಪೌರರಿಗೆ ಮನವಿ ಸಲ್ಲಿಸಿ, ಪ್ರತಿ ವರ್ಷದಂತೆ ಈ ವರ್ಷವು ಕನ್ನಡ ಚಳವಳಿಯ ಧೀಮಂತ ನಾಯಕರು, ಮಾಜಿ ಶಾಸಕರು ಆಗಿದ್ದ ಜಿ. ನಾರಾಯಣ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಶ್ರಯದಲ್ಲಿ ನವೆಂಬರ್ 1, 2010 ರಿಂದ 1 ತಿಂಗಳ ಕಾಲ ಅದ್ದೂರಿ ರಾಜ್ಯೋತ್ಸವವನ್ನು ಕೆಂಪೇಗೌಡ ರಸ್ತೆಯಲ್ಲಿರುವ ಬನ್ನಪ್ಪ ಪಾರ್ಕ್ ಆಟದ ಮೈದಾನದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಿರುವುದಾಗಿ, ನವೆಂಬರ್ 1 ರಂದು ನಾಡಿನ ವೈಭವವನ್ನು ಸಾರುವ ಮೆರವಣಿಗೆಯಲ್ಲಿ ಜಾನಪದ ತಂಡಗಳು, ಸ್ತಬ್ದ ಚಿತ್ರಗಳು, ಕಲಾವಿದರು ಪಾಲ್ಗೊಳ್ಳುವರು, ನವೆಂಬರ್ 1 ರಿಂದ ಸತತವಾಗಿ ಒಂದು ತಿಂಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ ಎಂದು ತಿಳಿಸಿರುತ್ತಾರೆ.

ಪ್ರತಿ ವರ್ಷವು ಮಹಾನಗರ ಪಾಲಿಕೆ ಧನ ಸಹಾಯವನ್ನು ನೀಡುತ್ತಿರುವುದುದಾಗಿ ತಿಳಿಸಿ, ಈ ವರ್ಷವು ರಾಜ್ಯೋತ್ಸವ ಕಾರ್ಯಕಲಾಪಗಳಿಗೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗೆ ಬಹಳ ಖರ್ಚು ವೆಚ್ಚ ತಗುಲುತ್ತಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.10 ಲಕ್ಷ ಧನ ಸಹಾಯವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯು ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ಸದರಿ ಸಂಸ್ಥೆಗೆ ರೂ.25,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:– ಆಯುಕ್ತರ ದಿನಾಂಕ : 11–11–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ. ಒಂದು ಲಕ್ಷ ಸಹಾಯಧನ ಮಂಜೂರು ಮಾಡಲು ತೀರ್ಮಾನಿಸಿದೆ.**

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/76/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್‌ಆರ್(4)31/2010-11 ದಿನಾಂಕ: 12-11-2010. ರಲ್ಲಿ ವಿವರಿಸಿರುವಂತೆ, ಶ್ರೀ ಮದನ ಗೋಪಾಲ್ ಸ್ವಾಮಿ, World Peace Man Trust (R) ನಂ. 87, ಎಸ್.ಸಿ. ರಸ್ತೆ, ಸುಧಾ ಬಿಲ್ಡಿಂಗ್, ಶೇಷಾದ್ರಿಪುರಂ. ಬೆಂಗಳೂರು-20. ಇವರು ಪೂಜ್ಯ ಮಹಾಪೌರರಿಗೆ ಮನವಿಯನ್ನು ಸಲ್ಲಿಸಿ, ತಮ್ಮ ಸಂಸ್ಥೆ ವತಿಯಿಂದ ಸಮಾಜದ ವಿವಿಧ ಧರ್ಮಗಳಿಗೆ ಸೇರಿದ ಬಡಮಕ್ಕಳಿಗೆ ಉಚಿತ ಊಟ ಮತ್ತು ವಿದ್ಯಾಭ್ಯಾಸ ನೀಡುತ್ತಿದ್ದು, ತಾವು ಬಡಮಕ್ಕಳು ಹಾಗೂ ಕುಷ್ಟರೋಗಿಗಳನ್ನು ನೋಡಿಕೊಂಡು ಆಶ್ರಮವನ್ನು ನಡೆಸುತ್ತಿರುವುದಾಗಿ ತಿಳಿಸುತ್ತಾ, ತಾನು ಪಾಕಿಸ್ಥಾನಕ್ಕೆ ಪಾದಯಾತ್ರೆ ಮಾಡಿ ಹಿಂಗ್ಲಾದೇವಿ ದೇವಸ್ಥಾನದಲ್ಲಿ ದರ್ಶನ ಪಡೆದು ಅಲ್ಲಿನ ಜನರು ಶಾಂತಿ ಸೌಹಾರ್ಧತೆಯಿಂದ ಬಾಳುವಂತೆ ಪ್ರೇರೇಪಿಸುವುದು ನನ್ನ ಬಹುದಿನಗಳ ಆಸೆಯಾಗಿದೆಯೆಂದು ತಿಳಿಸಿ, ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಟ್ರಸ್ಟ್‌ಗೆ ಯಾವುದೇ ಸಹಾಯ ಧನ ಲಭ್ಯವಿಲ್ಲವೆಂದು, ಪಾಲಿಕೆ ವತಿಯಿಂದ 1995 ರವರೆವಿಗೂ ಪ್ರತೀ ವರ್ಷ ರೂ.10,000/- (ಹತ್ತು ಸಾವಿರ) ವಂತಿಗೆ ಕೊಡುತ್ತಿದ್ದರೆಂದು, 1996 ರಿಂದ 2010 ಆಗಸ್ಟ್ ಒಟ್ಟು 5 ವರ್ಷಗಳು ರೂ.50,000/- (ಐವತ್ತು



ಸಾವಿರ) ಗಳನ್ನು ಮಂಜೂರು ಮಾಡಿ ಬಡ ಮಕ್ಕಳು ಹಾಗೂ ಕುಷ್ಟ ರೋಗಿಗಳಿಗೆ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿ ರವರೂ ಸಹ ಪತ್ರ ಬರೆದು ಸದರಿಯವರ ಮನವಿಯನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಸದರಿ ಸಂಸ್ಥೆಗೆ ರೂ.10,000/- ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿನಾಂಕ : 12-11-2010ರ ಟಿಪ್ಪಣಿಯನ್ನು ಒಪ್ಪಿದೆ.**

## 05]. ವಿಷಯದ ಸಂಖ್ಯೆ :-ತೆಆಸ್ಥಾಸ/77/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(5ಜಿ)ಪಿಆರ್/86/05-06 ದಿನಾಂಕ: 12-11-2010. ರಲ್ಲಿ ವಿವರಿಸಿರುವಂತೆ,

**ಪ್ರಸ್ತಾವನೆ:**

ಸನ್ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದ 2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಡಿ ದರ್ಜೆ ನೌಕರರುಗಳಿಗೆ ಹಿಂದೆ ನೀಡುತ್ತಿದ್ದಂತೆ ಸಮವಸ್ತ್ರ ಭತ್ಯೆಯನ್ನು ಮುಂದುವರೆಸಲಾಗುವುದೆಂದು ಘೋಷಿಸಿರುವುದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2010, ಬೆಂಗಳೂರು, ದಿನಾಂಕ: 18-05-2010**

ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ31ಎಸ್‌ಆರ್‌ಪಿ2007 (XI) ದಿನಾಂಕ: 14-08-2008ರಲ್ಲಿ ದಿ:01-08-2008ರಿಂದ ಯಾವ ಡಿ ದರ್ಜೆ ನೌಕರರುಗಳಿಗೆ ಮತ್ತು ವಾಹನ ಚಾಲಕರುಗಳಿಗೆ ಮಾಸಿಕ ಸಮವಸ್ತ್ರ ಭತ್ಯೆಯನ್ನು ನಿಲ್ಲಿಸಲಾಗಿತ್ತೋ, ಅವರುಗಳಿಗೆ ಮಾಸಿಕ ರೂ.250/-ಗಳ ಸಮವಸ್ತ್ರ ಭತ್ಯೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರವು ಮಂಜೂರು ಮಾಡಿದೆ.

1. ಸಮವಸ್ತ್ರ ಭತ್ಯೆಯನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಕಟ್ಟುನಿಟ್ಟಾಗಿ ಬಳಸಿಕೊಳತಕ್ಕದ್ದು.
2. ಸಮವಸ್ತ್ರ ಭತ್ಯೆಯನ್ನು ಮಂಜೂರು ಮಾಡುವ ದಿನಾಂಕದಿಂದ ಪ್ರತಿಯೊಬ್ಬ ವಾಹನ ಚಾಲಕರು ಹಾಗೂ ಡಿ ದರ್ಜೆ ನೌಕರರು ಕರ್ತವ್ಯದ ಮೇಲೆ ಇದ್ದಾಗ ಕಟ್ಟುನಿಟ್ಟಾಗಿ ಸಮವಸ್ತ್ರವನ್ನು ಧರಿಸತಕ್ಕದ್ದು, ಈ ನಿರ್ದೇಶನವನ್ನು ಪಾಲಿಸದೇ ಇರುವ ವಾಹನ ಚಾಲಕರು ಹಾಗೂ ಡಿ ದರ್ಜೆ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಿಗಳು ಕ್ರಮ ತೆಗೆದುಕೊಳ್ಳತಕ್ಕದ್ದು;
3. ಸಕ್ಷಮ ಪ್ರಾಧಿಕಾರಿಗಳು, ಅವರ ಅಧೀನದಲ್ಲಿರುವ ಡಿ ದರ್ಜೆ ನೌಕರರು ಮತ್ತು ವಾಹನ ಚಾಲಕರು ಕರ್ತವ್ಯದ ಮೇಲೆ ಇದ್ದಾಗ ಸಮವಸ್ತ್ರವನ್ನು ಧರಿಸದ್ದಿದ್ದಲ್ಲಿ, ಸಂಬಳ ಬಟವಾಡೆ ಅಧಿಕಾರಿಗಳಿಗೆ ಈ ಬಗ್ಗೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು. ಹೀಗೆ ನೀಡಿದ್ದಲ್ಲಿ, ಈ ಭತ್ಯೆಯನ್ನು ನಿಲ್ಲಿಸತಕ್ಕದ್ದು.



4. ವಾಹನ ಚಾಲಕರು ಹಾಗೂ ಡಿ ದರ್ಜೆ ನೌಕರರು ಧರಿಸಬೇಕಾದ ಸಮವಸ್ತ್ರದ ಮಾದರಿ ಹಾಗೂ ಗುಣಮಟ್ಟವು ಸಾದಿಲ್ವಾರು ವೆಚ್ಚ ಕೈಪಿಡಿ 1958ರಲ್ಲಿ ಮತ್ತು ಸರ್ಕಾರದ ಇತರೆ ಆದೇಶಗಳಲ್ಲಿ ನಿಗಧಿಪಡಿಸಿದಂತೆ ಮುಂದುವರೆಯುವುದು.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ.

ಮುಖ್ಯ ಲೆಕ್ಕಾಧಿಕಾರಿರವರ ವರದಿ ದಿನಾಂಕ:13-10-2010 ರಂದು ಮುಖ್ಯ ಲೆಕ್ಕಾಧಿಕಾರಿಯವರು ಈ ಕೆಳಕಂಡಂತೆ ಅಭಿಪ್ರಾಯ ವರದಿ ನೀಡಿರುತ್ತಾರೆ.

1) ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿ ದರ್ಜೆ ನೌಕರರ ಒಟ್ಟು ಸಂಖ್ಯೆ 7369
2) ಮಾಸಿಕ ಸಮವಸ್ತ್ರ ಭತ್ಯೆ ರೂ. 120-00ಗಳಂತೆ ಪಾವತಿಸುತ್ತಿರುವ ಒಟ್ಟು ಭತ್ಯೆ - ರೂ. 8,84,280-00
3) ಮಾಸಿಕ ಸಮವಸ್ತ್ರ ಭತ್ಯೆ ರೂ. 250-00ಗಳಂತೆ ತಗಲುವ ಭತ್ಯೆ ರೂ. 18,42,250-00
4) ಆರ್ಥಿಕವಾಗಿ ಹೆಚ್ಚುವರಿ ಹೊಣೆಗಾರಿಕೆ (ಮಾಹೆಯಾನ) ರೂ. 9,57,970-00

ಈ ಹೆಚ್ಚುವರಿ ಸಮವಸ್ತ್ರ ಭತ್ಯೆಯಿಂದಾಗಿ ಪಾಲಿಕೆಗೆ ಮಾಹೆಯಾನ ರೂ. 9,57,970-00 (ಒಂಭತ್ತು ಲಕ್ಷದ ಐವತ್ತೇಳು ಸಾವಿರದ ಒಂಭೈನೂರ ಎಪ್ಪತ್ತು ರೂಪಾಯಿಗಳು ಮಾತ್ರ) ಆರ್ಥಿಕ ಹೊಣೆಗಾರಿಕೆ (Financial Implications) ಬೀಳಲಿದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ನೀಡಿರುವ ಅಭಿಪ್ರಾಯದ ಮೇರೆಗೆ, ಮೇಲ್ಕಂಡ ಸರ್ಕಾರಿ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಂಡು, ನಗರ ಪಾಲಿಕೆಯ ಎಲ್ಲಾ ಗ್ರೂಪ್ ಡಿ ವರ್ಗದ ನೌಕರುಗಳಿಗೆ ಮತ್ತು ವಾಹನ ಚಾಲಕರುಗಳಿಗೆ ಹಾಲಿ ನೀಡಲಾಗುತ್ತಿರುವ ಮಾಸಿಕ ರೂ.120-00 ಗಳ ಬದಲಾಗಿ ಸರ್ಕಾರಿ ಆದೇಶದನ್ವಯ ಮಾಸಿಕ ರೂ.250-00 ದರದಂತೆ ಸಮವಸ್ತ್ರ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ, ನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ನಗರ ಪಾಲಿಕೆಯ ಸಭೆಯ ಅನುಮೋದನೆ ಕೋರಿ ಟಿಪ್ಪಣಿ ಮಂಡಿಸಿದೆ.

ನಿರ್ಣಯ :– ಆಯುಕ್ತರ ದಿನಾಂಕ : 12–11–2010ರ ಟಿಪ್ಪಣಿಯನ್ನು ಒಪ್ಪಿದೆ.

**06]. ವಿಷಯದ ಸಂಖ್ಯೆ :–ತೆಆಸ್ಥಾಸ/78/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್ಆರ್(4)21/2010-11 ದಿನಾಂಕ:15–11–2010. ರಲ್ಲಿ ವಿವರಿಸಿರುವಂತೆ, ಕಿಂಕಿಣಿ ಸ್ವಯಂ ಸೇವಾ ಸಂಸ್ಥೆ, 308, 10ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು –560 011. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಶಾಸ್ತ್ರೀಯ ನೃತ್ಯ ಪ್ರಾಕಾರಗಳ ಪ್ರಚಾರ ಅಭಿವೃದ್ಧಿ ಮತ್ತು ಜನಾದರಣೀಯ ಪಡಿಸುವ ಉದ್ದೇಶವನ್ನು ಹೊಂದಿ 27 ವರ್ಷಗಳಿಂದ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಕೆಲವೇ ಸಂಸ್ಥೆಗಳಲ್ಲಿ ಒಂದಾದ ಲಾಭೋದ್ಧೇಶರಹಿತ ಸ್ವಯಂ ಸೇವಾ ಸಂಸ್ಥೆ ಕಿಂಕಿಣಿಯಾಗಿದ್ದು, ತಮ್ಮ ಸಂಸ್ಥೆಯು ನಡೆಸುವ ರಾಷ್ಟ್ರ ಮಟ್ಟದ ವಾರ್ಷಿಕ ನೃತ್ಯೋತ್ಸವ ರಾಜ್ಯ/ರಾಷ್ಟ್ರದ ಪ್ರತಿಷ್ಠಿತ ಸಾಂಸ್ಕೃತಿ ಘಟನೆಗಳಲ್ಲೊಂದಾಗಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದ 27ನೇ ಕಿಂಕಿಣಿ ನೃತ್ಯೋತ್ಸವವನ್ನು ಜನವರಿ 2011 ರಲ್ಲಿ ಆಯೋಜಿಸಲು ನಿರ್ಧರಿಸಿದ್ದು, ಸದರಿ ಉತ್ಸವಕ್ಕೆ ರೂ.7.00,000/– ಗಳು ವೆಚ್ಚವಾಗುತ್ತದೆಂದು ತಿಳಿಸುತ್ತಾ ಈ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ರೂ.50,000/–ಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.



ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ಸದರಿ ಸಂಸ್ಥೆಗೆ ರೂ.10,000/– ಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ:–ಆಯುಕ್ತರ ದಿನಾಂಕ : 15–11–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ. 20,000.00 ಅನುದಾನ ಮಂಜೂರು ಮಾಡಬಹುದೆಂದು ತೀರ್ಮಾನಿಸಿದೆ.

**07]. ವಿಷಯದ ಸಂಖ್ಯೆ :–ತೆಆಸ್ಥಾಸ/79/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(5ಜಿ)ಪಿಆರ್/206/09–10 ದಿನಾಂಕ: 15–11–2010. ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 29 ಎಸ್‌ಆರ್‌ಪಿ 2010, ಬೆಂಗಳೂರು, ದಿನಾಂಕ: 28–10–2010ರ ಆದೇಶದಲ್ಲಿ ದಿನಾಂಕ: 01–11–2010ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ಲಭ್ಯವಿರುವ ಮನೆ ಬಾಡಿಗೆ ಭತ್ಯೆ ದರವನ್ನು ಮೂಲ ವೇತನದ ಶೇಕಡ 20 ರಿಂದ ಶೇಕಡ 25ಕ್ಕೆ ಹೆಚ್ಚಿಸಿ ಮಂಜೂರಾತಿ ನೀಡಿರುತ್ತದೆ. ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 29 ಎಸ್‌ಆರ್‌ಪಿ 2010, ಬೆಂಗಳೂರು, ದಿನಾಂಕ: 28–10–2010ರ ಆದೇಶದಲ್ಲಿ ತಿಳಿಸಿರುವಂತೆ ಮಂಜೂರಾಗಿರುವ ಮನೆ ಬಾಡಿಗೆ

ಭತ್ಯೆಯನ್ನು ನಗದಾಗಿ ಮರು ಆದೇಶ ಹೊರಡಿಸುವವರೆಗೂ ಪಾವತಿಸಲು ಆದೇಶವಾಗಿರುತ್ತದೆ. (ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ)

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಅನುಕೂಲವಾಗುವಂತೆ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 29 ಎಸ್‌ಆರ್‌ಪಿ 2010, ಬೆಂಗಳೂರು, ದಿನಾಂಕ: 28–10–2010ರ ಸರ್ಕಾರಿ ಆದೇಶವನ್ನು ನಗರ ಪಾಲಿಕೆಯಲ್ಲಿ ಮನೆ ಬಾಡಿಗೆ ಭತ್ಯೆಯ ಹೆಚ್ಚುವರಿಯಾದ ಶೇಕಡ 5ರ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ ಇತರೆ ಭತ್ಯೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ವರದಿ ದಿನಾಂಕ: 12–11–2010 ರಂತೆ ಮುಖ್ಯ ಲೆಕ್ಕಾಧಿಕಾರಿಯವರು ಈ ಕೆಳಕಂಡಂತೆ ಅಭಿಪ್ರಾಯ ವರದಿ ನೀಡಿರುತ್ತಾರೆ.

1) ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಒಟ್ಟು ಸಂಖ್ಯೆ 12395
2) ಪಾವತಿಸುತ್ತಿರುವ ಒಟ್ಟು ವೇತನ (ಮಾಹೆಯಾನ) ರೂ. 984.7 ಲಕ್ಷಗಳು
3) ಆರ್ಥಿಕವಾಗಿ ಹೆಚ್ಚಿನ ಹೊಣೆಗಾರಿಕೆ (ಮಾಹೆಯಾನ) ರೂ. 49.24 ಲಕ್ಷಗಳು (5%)

ಈ ಹೆಚ್ಚುವರಿ ಮನೆ ಬಾಡಿಗೆ ಭತ್ಯೆಯಿಂದಾಗಿ ಪಾಲಿಕೆಗೆ ಮಾಹೆಯಾನ ರೂ. 49.24 ಲಕ್ಷಗಳು ಆರ್ಥಿಕ ಹೊಣೆಗಾರಿಕೆ (Financial Implications) ಬೀಳಲಿದೆ ಎಂದು ಮುಖ್ಯ ಲೆಕ್ಕಾಧಿಕಾರಿಗಳು ನೀಡಿರುವ ಅಭಿಪ್ರಾಯದ ಮೇರೆಗೆ, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸುವ ಬಗ್ಗೆ ಹಾಗೂ ಸರ್ಕಾರಿ ಆದೇಶದಂತೆ ಮುಂದಿನ ಕ್ರಮ ತೆಗೆದುಕೊಳ್ಳಲು ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

<u>**ನಿರ್ಣಯ :– ಆಯುಕ್ತರ ದಿನಾಂಕ : 15–11–2010ರ ಟಿಪ್ಪಣಿಯನ್ನು ಒಪ್ಪಿದೆ.**</u>

–8–

**08]. ವಿಷಯದ ಸಂಖ್ಯೆ :–ತೆಆಸ್ಥಾಸ/80/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ.ಅಆ(ಕ/ಆ/ಆ)/ಪಿಎಸ್‌ಆರ್(4)11/2010-11 ದಿನಾಂಕ: 12–11–2010. ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಲಕ್ಷ್ಮೀ ನಾರಾಯಣ, ಮುಖ್ಯ ಮಂತ್ರಿಯವರ ಕಾರ್ಯದರ್ಶಿ, ಮುಖ್ಯ ಮಂತ್ರಿಯವರ ಸಚಿವಾಲಯ, ವಿಧಾನ ಸೌಧ, ಬೆಂಗಳೂರು –01. ಇವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಶ್ರೀ ಡಾ. ಈ. ಪರಮೇಶ್ವರ, ಮಾನ್ಯ ಶಾಸಕರು ಮತ್ತು ಅಧ್ಯಕ್ಷರು, ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್, ಬೆಂಗಳೂರು. ಇವರು ದಿನಾಂಕ 25.05.2010 ರಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಮತ್ತು ಪತ್ರವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಇದೇ ತಿಂಗಳ 4 ಮತ್ತು 5 ರಂದು ಏಷ್ಯನ್ ಗ್ರ್ಯಾನ್ ಫ್ರಿ ಹಾಗೂ ಇಂಡಿಯನ್ ಗ್ರ್ಯಾನ್ ಫ್ರಿಗಳು ನಡೆಯುತ್ತಿದ್ದು, ಇದರಲ್ಲಿ ಚೀನಾ, ಇಂಡೋನೇಷ್ಯ, ಇರಾನ್, ಜಪಾನ್, ಕತಾರ್, ಥಾಯ್ಲೆಂಟ್ ಮತ್ತು ವಿಯೆಟ್ನಾಂ ಸೇರಿದಂತೆ ನಮ್ಮ ದೇಶದ ಪ್ರಮುಖ ಅಥ್ಲೀಟ್‌ಗಳು ಪಾಲ್ಗೊಳ್ಳಲ್ಲಿದ್ದು, ಈ ಕಾರ್ಯಕ್ರಮಕ್ಕಾಗಿ ಪಾಲಿಕೆ ವತಿಯಿಂದ ರೂ.10 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಕೋರಿದ್ದಾರೆಂದು, ಸದರಿಯವರ ಮನವಿಯ ಬಗ್ಗೆ ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಕೋರಲು ಮಾನ್ಯ ಮುಖ್ಯ ಮಂತ್ರಿಗಳಿಂದ ನಿರ್ದೇಶಿತನಾಗಿದ್ದೇನೆಂದು ತಿಳಿಸಿರುತ್ತಾರೆ.

ಶ್ರೀ ಜಿ. ಪರಮೇಶ್ವರ್ ಶಾಸಕರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ತಾನು ಈ ಹಿಂದೆ ಮಾನ್ಯ ಮುಖ್ಯ ಮಂತ್ರಿ ಯವರಿಗೆ ಸಲ್ಲಿಸಿದ ಮನವಿಯತ್ತ ಗಮನ ಸೆಳೆದು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ 4 ಮತ್ತು 5ನೇ ಜೂನ್ 2010 ರಲ್ಲಿ ಏಷ್ಯನ್ ಅಂತರರಾಷ್ಟ್ರೀಯ ಕ್ರೀಡಾ ಕೂಟವನ್ನು ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿತ್ತೆಂದು, ಸದರಿ ಸಂಸ್ಥೆಗೆ ತಾನು ಅಧ್ಯಕ್ಷರಾಗಿರುವುದಾಗಿ ಈ ಕ್ರೀಡಾ ಕೂಟಕ್ಕೆ ಹಣ ಬಿಡುಗಡೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳಿಂದ ನಿರ್ದೇಶಿಸಲಾಗಿತ್ತೆಂದು, ಸದರಿ ಹಣ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲು ಕೋರಿ, ತಮ್ಮ ಪತ್ರದೊಂದಿಗೆ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿ ರವರ ಪತ್ರದ ನಕಲು, ಛಾಯಾಚಿತ್ರಗಳು ಮತ್ತು ಕ್ರೀಡಾಕೂಟದ ಪತ್ರಿಕಾ ವರದಿಯ ನಕಲು ಪ್ರತಿಗಳು ಲಗತ್ತಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ.

ಉಳಿಕೆ ರೂ.176.50 ಲಕ್ಷಗಳ ಪೈಕಿ ಸದರಿ ಸಂಸ್ಥೆಗೆ ರೂ.10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:– ಆಯುಕ್ತರ ದಿನಾಂಕ : 12–11–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ. ಒಂದು ಲಕ್ಷ ಸಹಾಯಧನ ಮಂಜೂರು ಮಾಡಲು ತೀರ್ಮಾನಿಸಲಾಯಿತು.**

## 09]. ವಿಷಯದ ಸಂಖ್ಯೆ :–ತೆಆಸ್ಥಾಸ/81/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(1ಬಿ)/ಪಿಆರ್/73/10–11 ದಿನಾಂಕ: 04–11–2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ವಸ್ತು ಸಂಗ್ರಹಾಲಯದ ಸಲಹಾ ಸಮಿತಿ ಕೆಲಸ



ಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗಲು ವಸ್ತು ಸಂಗ್ರಹಾಲಯದ ಕೆಲಸ ಕಾರ್ಯಗಳ ಹಿತದೃಷ್ಠಯಿಂದ ತಾತ್ಕಾಲಿಕವಾಗಿ ರೂ. 5–00 ಲಕ್ಷಗಳನ್ನು ಮಂಜೂರು ಮಾಡಲು ಪೂಜ್ಯ ಮಹಾಪೌರರು ದಿನಾಂಕ: 23–08–2010ರ ಟಿಪ್ಪಣಿಯಲ್ಲಿ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ವಸ್ತು ಸಂಗ್ರಹಾಲಯದ ಸಲಹಾ ಸಮಿತಿ ಕೆಲಸ ಕಾರ್ಯಗಳ ಹಿತದೃಷ್ಠಯಿಂದ ತಾತ್ಕಾಲಿಕವಾಗಿ ರೂ. 5–00 ಲಕ್ಷಗಳನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 04–11–2010ರ ಟಿಪ್ಪಣಿಯನ್ನು ಒಪ್ಪಿದೆ.**

**10]. ವಿಷಯದ ಸಂಖ್ಯೆ :–ತೆಆಸ್ಥಾಸ/82/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್‌ಆರ್(4)40/10–11 ದಿನಾಂಕ: 18–11–2010. ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎನ್. ಕುಮಾರ್, ಅಧ್ಯಕ್ಷರು, ರಾಜಾಮಹಲ್ ಗುಟ್ಟಹಳ್ಳಿ ದಸರಾ ಸಮಿತಿ (ರಿ), ರವರು ದಿನಾಂಕ: 08–10–2010 ರಿಂದ 17–10–2010 ರವರೆವಿಗೆ ಮಲ್ಲೇಶ್ವರಂ ಕ್ಷೇತ್ರದ ವೈಯ್ಯಾಲಿಕಾವಲ್ ಆಟದ ಮೈದಾನದಲ್ಲಿ ಸಾಂಸ್ಕೃತಿಕ ದಸರಾ ಉತ್ಸವವನ್ನು ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮಕ್ಕಾಗಿ ಪಾಲಿಕೆ ವತಿಯಿಂದ ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿ ಪೂಜ್ಯ ಮಹಾಪೌರರಿಗೆ ನೀಡಿರುವ ಮನವಿಯನ್ನು ಪರಿಗಣಿಸಿ ಪೂಜ್ಯ ಮಹಾಪೌರರು ರೂ. 5.00 ಲಕ್ಷಗಳ ಹಣ ಬಿಡುಗಡೆ ಮಾಡುವಂತೆ ಸಮಿತಿಗೆ ಟಿಪ್ಪಣಿಯನ್ನು ಕಳುಹಿಸಿರುತ್ತಾರೆಂದು ಸದರಿ ಟಿಪ್ಪಣಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವುದಾಗಿ ಸಹ ತಿಳಿಸಿ, ಪೂಜ್ಯ ಮಹಾಪೌರರು ಸೂಚನೆ ಮೇರೆಗೆ ರಾಜಾಮಹಲ್ ಗುಟ್ಟಹಳ್ಳಿ ದಸರಾ ಸಮಿತಿ(ರಿ) ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ರೂ. 5.00 ಲಕ್ಷಗಳ ಹಣ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಮಿತಿಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಪ್ರಸ್ತಾವಿತ ಸಮಿತಿಗೆ ರೂ.5.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 18–11–2010ರ ಟಿಪ್ಪಣಿಯನ್ನು ಒಪ್ಪಿದೆ.**



**11]. ವಿಷಯದ ಸಂಖ್ಯೆ :–ತೆಆಸ್ಥಾಸ/83/2010–11**

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್ ಆರ್ (4)33/10–11 ದಿನಾಂಕ: 18–11–2010. ರಲ್ಲಿ ವಿವರಿಸಿರುವಂತೆ, ಶ್ರೀ ರಂಗಪುತ್ಥಳಿ ರಘುನಂದನ್, ಅಂತರಾಷ್ಟ್ರೀಯ ಬೊಂಬೆಯಾಟ ಕಲಾವಿದರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕರ್ನಾಟಕದ ಅತ್ಯಂತ ಪ್ರಾಚೀನ ಜಾನಪದದ ಕಲೆಯಾದ ಸೂತ್ರದ ಸಲಾಕೆ ಮತ್ತು ತೊಗಲು ಬೊಂಬೆಯಾಟವನ್ನು ರಾಜ್ಯ, ರಾಷ್ಟ್ರ, ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಂದರೆ AMERICA(3) ENGLAND, POLAND, DUBAI, NEPAL ಮುಂತಾದ ದೇಶಗಳಲ್ಲಿ ಸುಮಾರು 500 ಕ್ಕೂ ಮೇಲ್ಪಟ್ಟು ಪ್ರದರ್ಶನ ನೀಡಿದ್ದೇವೆಂದು, ತಮ್ಮ ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರವು NATIONAL

FELLOWSHIP ಪ್ರಶಸ್ತಿ ನೀಡಿದೆಯೆಂದು, ಕೇಂದ್ರ ಸರ್ಕಾರವು ನಮ್ಮನ್ನು POLAND ದೇಶಕ್ಕೆ ಹಾಗೂ ಕರ್ನಾಟಕ ಸರ್ಕಾರವು AKKA-CHICAGO-AMERICA ದೇಶಕ್ಕೆ ಪ್ರಾಯೋಜಿಸಿವೆಯೆಂದು ತಾವು ವಿಶ್ವ ಸಹಸ್ರಾಬ್ದಿ ಕನ್ನಡ ಸಮ್ಮೇಳನ ENGLAND ಮತ್ತು ಅಖಿಲ ಭಾರತ ಕನ್ನಡ ಸಾಂಸ್ಕೃತಿಕ ಸಮ್ಮೇಳನ NEPAL ದಲ್ಲಿ ಭಾಗವಹಿಸುವುದಾಗಿ, ಜುಲೈ 2010 AMERICA ದ LOS ANGLES ನಲ್ಲಿ ನಡೆದ ಪ್ರಥಮ NAVIKA ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿರುವುದಾಗಿ ತಿಳಿಸಿ, 27, 28 ನೇ ನವೆಂಬರ್ 2010 ರಂದು ಸಿಂಗಾಪುರ್ ದೇಶದಲ್ಲಿ ನಡೆಯುವ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನ ಬಂದಿದ್ದು, ಹೋಗಿ ಬರುವ ವೆಚ್ಚವನ್ನು ತಾವೇ ವಹಿಸಬೇಕಾಗಿರುವುದರಿಂದ ಧನ ಸಹಾಯ ನೀಡಲು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು, ಸಮ್ಮೇಳನಗಳಲ್ಲಿ ಹಾಗೂ ಆಟೋಟಗಳಿಗೆ ಪಾಲಿಕೆ ವತಿಯಿಂದ ಧನ ಸಹಾಯ ನೀಡಿರುವ ನಿದರ್ಶನಗಳಿರುವ ಹಿನ್ನೆಲೆಯಲ್ಲಿ ಸದರಿಯವರ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕಲಾವಿದರ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಕಲಾವಿದರಿಗೆ ರೂ. 10,000/- (ರೂ.ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 18–11–2010ರ ಟಿಪ್ಪಣಿಯನ್ನು ಒಪ್ಪಿದೆ.**

## 12]. ವಿಷಯದ ಸಂಖ್ಯೆ :–ತೆಆಸ್ಥಾಸ/84/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್ಆರ್(4)04/10–11 ದಿನಾಂಕ: 18–11–2010. ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು, ಫೌಂಡೇಶನ್ ಆಫ್ ಆರ್ಟ್ ಕಲ್ಚರ್ ಫಾರ್ ಡೆಫ್. ಶಂಕರಪುರಂ, ಬೆಂಗಳೂರು ರವರು ತಮ್ಮ ವಾರ್ಡಿನ ವ್ಯಾಪ್ತಿಯಲ್ಲಿದ್ದು, ಈ ಸಂಸ್ಥೆಯ ಮೂವರು ಚಿತ್ರಕಲಾವಿದರಿಗೆ ಸಿಂಗಾಪುರದಲ್ಲಿ ನಡೆಯುವ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನ ಪತ್ರಿಕೆ ಬಂದಿದ್ದು, ವಿಕಲಚೇತನ ಕಲಾವಿದರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಸಾಂಸ್ಕೃತಿಕ ಕೂಟದ ಖರ್ಚು ವೆಚ್ಚಗಳನ್ನು ಭರಿಸಲು ಸಾಧ್ಯವಿಲ್ಲದ ಕಾರಣ, ಶ್ರವಣ ಮಾಂಧ್ಯ ವಿಕಲಚೇತನ ಕಲಾವಿದರಿಗೆ ಆರ್ಥಿಕ ನೆರವು ನೀಡಿ ಈ ಸಾಂಸ್ಕೃತಿಕ ಕೂಟದಲ್ಲಿ ಭಾಗವಹಿಸಲು ವಿಮಾನಯಾನ, ಪ್ರದರ್ಶನದ ಶುಲ್ಕ ಇತ್ಯಾದಿ ಖರ್ಚು ಒಬ್ಬ ವ್ಯಕ್ತಿಗೆ ರೂ.30,000/– ಗಳಂತೆ ಮೂವರು ಕಲಾವಿದರಿಗೆ ಒಟ್ಟು ರೂ.90,000/– ಗಳನ್ನು ಸಹಾಯ ಮಾಡಬೇಕಾಗಿ ಕೋರಿರುವುದಾಗಿ ತಿಳಿಸಿ, 2010–11 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕಿ ಕೊಡುಗೆ ಮತ್ತು ಸಹಾಯಧನಗಳ ಅಡಿ ರೂ.90,000/– ಸಹಾಯಧನ ಬಿಡುಗಡೆ ಮಾಡಲು ಕೋರಿರುತ್ತಾರೆ.



ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ವಿಕಲಚೇತನ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ

ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ಈಗಾಗಲೇ ರೂ.16.45 ಲಕ್ಷಗಳು ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಪ್ರಸ್ತಾವಿತ ಸಂಸ್ಥೆಯ ಪ್ರತಿಯೊಬ್ಬ ವಿಕಲಚೇತನ ಕಲಾವಿದರಿಗೆ ತಲಾ ರೂ.10,000/- ಗಳಂತೆ 3 ಕಲಾವಿದರಿಗೆ ಒಟ್ಟು ರೂ.30,000/- ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 18–11–2010ರ ಟಿಪ್ಪಣಿಯನ್ನು ಮಾರ್ಪಡಿಸಿ ತಲಾ ಒಬ್ಬ ಕಲಾವಿದರಿಗೆ ರೂ : 30,000.00ಗಳಂತೆ 3 ಜನರಿಗೆ ರೂ : 90,000.00 ಸಹಾಯಧನ ಮಂಜೂರು ಮಾಡಲು ತೀರ್ಮಾನಿಸಲಾಯಿತು.**

## 13]. ವಿಷಯದ ಸಂಖ್ಯೆ :–ತೆಆಸ್ಥಾಸ/85/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಆ)ಪಿಎಸ್‌ಆರ್(4)36/10–11 ದಿನಾಂಕ: 18–11–2010. ರಲ್ಲಿ ವಿವರಿಸಿರುವಂತೆ, ಶ್ರೀಮತಿ ನಾಗಮ್ಮ, ಬೆರಳಚ್ಚುಗಾರರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಧಾನಸೌಧ. ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಕ್ರೀಡಾಪಟುವಾದ ತಾನು ದಿನಾಂಕ 06.12.2010 ರಿಂದ 12.12.2010 ರವರೆಗೆ ಮಲೇಷಿಯಾದ ಕೌಲಾಲಂಪುರ್‌ನಲ್ಲಿ ನಡೆಯಲಿರುವ 16ನೇ ಏಷಿಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿ, ಸ್ವರ್ಧಾಳುವಾಗಿ ಭಾಗವಹಿಸಿ ಭಾರತ ದೇಶವನ್ನು ಪ್ರತಿನಿಧಿಸುತ್ತಿರುವುದಾಗಿ ತಿಳಿಸುತ್ತಾ, ಮಾಸ್ಟರ್ ಅಥ್ಲೆಟಿಕ್ಸ್ ಫೆಡ್ರೇಷನ್ ಆಫ್ ಇಂಡಿಯಾ ರವರ ಪತ್ರದ ಪ್ರತಿಯನ್ನು ಒದಗಿಸಿ, ಈ ಕ್ರೀಡಾ ಕೂಟದಲ್ಲಿ ಭಾಗವಹಿಸಲು ರೂ.50,000/– ಖರ್ಚು ತಗುಲಲಿದ್ದು, ಇದಕ್ಕೆ ವಿಧಾನಸೌಧದ ಸಚಿವಾಲಯದಿಂದ ಯಾವುದೇ ಸೌಲಭ್ಯ ದೊರಕದೇ ಇರುವುದರಿಂದ (TA, DA, Leave etc..) ಮತ್ತು ಸರ್ಕಾರವು ವೆಚ್ಚ ಭರಿಸದೇ ಇರುವುದರಿಂದ, ಪಾಲಿಕೆ ವತಿಯಿಂದ ಉತ್ತೇಜನ ನೀಡಿ ಪ್ರೋತ್ಸಾಹಿಸುವ ದೃಷ್ಟಿಯಿಂದ, ಆರ್ಥಿಕ ಸಹಾಯ ಅಥವಾ ಪ್ರಾಯೋಜಕತ್ವ ನೀಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಪ್ರಸ್ತಾವಿತ ಕ್ರೀಡಾಪಟುವಿಗೆ ರೂ.10,000/- (ರೂ.ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 18–11–2010ರ ಟಿಪ್ಪಣಿಯನ್ನು ಒಪ್ಪಿದೆ.**

## 14]. ವಿಷಯದ ಸಂಖ್ಯೆ :–ತೆಆಸ್ಥಾಸ/86/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅಆ(ಕ/ಆ/ಆ)ಪಿಎಸ್ಆರ್(4)35/10–11 ದಿನಾಂಕ: 18–11–2010. ರಲ್ಲಿ ವಿವರಿಸಿರುವಂತೆ, ಶ್ರೀಮತಿ ಬಿ.ಜಿ. ಶ್ಯಾಮಲ, ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಿಧಾನಸೌಧ. ರವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಕ್ರೀಡಾಪಟುವಾದ ತಾನು ದಿನಾಂಕ 06.12.2010 ರಿಂದ 12.12.2010 ರವರೆಗೆ ಮಲೇಷಿಯಾದ ಕೌಲಾಲಂಪುರ್‌ನಲ್ಲಿ ನಡೆಯಲಿರುವ 16ನೇ ಏಷಿಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿ, ಸ್ಪರ್ಧಾಳುವಾಗಿ ಭಾಗವಹಿಸಿ ಭಾರತ ದೇಶವನ್ನು ಪ್ರತಿನಿಧಿಸುತ್ತಿರುವುದಾಗಿ ತಿಳಿಸ್ಮತ್ತಾ, ಮಾಸ್ಟರ್ ಅಥ್ಲೆಟಿಕ್ಸ್ ಫೆಡ್ರೇಷನ್ ಆಫ್ ಇಂಡಿಯಾ ರವರ ಪತ್ರದ ಪ್ರತಿಯನ್ನು ಒದಗಿಸಿ, ಈ ಕ್ರೀಡಾ ಕೂಟದಲ್ಲಿ ಭಾಗವಹಿಸಲು ₹ 50,000/– ಖರ್ಚು ತಗುಲಲಿದ್ದು, ಇದಕ್ಕೆ ವಿಧಾನಸೌಧದ ಸಚಿವಾಲಯದಿಂದ ಯಾವುದೇ ಸೌಲಭ್ಯ ದೊರಕದೇ ಇರುವುದರಿಂದ (TA, DA, Leave etc..) ಮತ್ತು ಸರ್ಕಾರವು ವೆಚ್ಚ ಭರಿಸದೇ ಇರುವುದರಿಂದ, ಪಾಲಿಕೆ ವತಿಯಿಂದ ಉತ್ತೇಜನ ನೀಡಿ ಪ್ರೋತ್ಸಾಹಿಸುವ ದೃಷ್ಟಿಯಿಂದ, ಆರ್ಥಿಕ ಸಹಾಯ ಅಥವಾ ಪ್ರಾಯೋಜಕತ್ವ ನೀಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಪ್ರಸ್ತಾವಿತ ಕ್ರೀಡಾಪಟುವಿಗೆ ರೂ.10,000/- (ರೂ.ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 18–11–2010ರ ಟಿಪ್ಪಣಿಯನ್ನು ಒಪ್ಪಿದೆ.**

## 15]. ವಿಷಯದ ಸಂಖ್ಯೆ :–ತೆಆಸ್ಥಾಸ/87/2010–11

ಆಯುಕ್ತರವರ ಟಿಪ್ಪಣೆ ಸಂಖ್ಯೆ:ಅಆ(ಕ/ಆ/ಆ)ಪಿಎಸ್ಆರ್ (4)34/10–11 ದಿನಾಂಕ: 18–11–2010. ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಲಕ್ಷ್ಮೀ ನಾರಾಯಣ, ಮುಖ್ಯಮಂತ್ರಿಯವರ ಕಾರ್ಯದರ್ಶಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು "ಚಿಣ್ಣರ ಹಬ್ಬ" ಎಂಬ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಆಚರಿಸಲಾಗುತ್ತದೆಂದು, 2010 ನೇ ಸಾಲಿನ ಸದರಿ ಹಬ್ಬವನ್ನು F5 Events & Services Pvt, Ltd., ರವರ ವತಿಯಿಂದ ನಡೆಸುತ್ತಿದ್ದು, ಚಿಣ್ಣರ ಹಬ್ಬ 2010 ಆಚರಣೆಯಲ್ಲಿ ಬಂದ ಹಣವನ್ನು ನಿರಾಶ್ರಿತ ಮಕ್ಕಳ ಆಶ್ರಯಧಾಮ "ನೆಲೆ" ಸಹಕಾರಕ್ಕಾಗಿ ನೀಡಲಾಗುವುದಾಗಿ ತಿಳಿಸಿದ್ದು, ದಿನಾಂಕ 29–10–2010 ರಿಂದ 01–11–2010 ರವರೆಗೆ ನಡೆಯುವ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ನೀಡುವಂತೆ ಕೋರಿರುತ್ತಾರೆ.

ಚಿಣ್ಣರ ಹಬ್ಬ ಕಾರ್ಯಕ್ರಮವನ್ನು ಆಯೋಜಿಸುತ್ತಿರುವ F5 Events & Services Pvt, Ltd., ರವರ ಪತ್ರದಲ್ಲಿ ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎಂಬ ನಾಣ್ನುಡಿ ಹಿನ್ನಲೆಯಲ್ಲಿ ಚಿಣ್ಣರ ಹಬ್ಬವು ದೇಶದ ಭವಿಷ್ಯಕ್ಕೆ ಅತ್ಯುತ್ತಮವಾದುದ್ದನ್ನು ನೀಡುವ ಸದುದ್ದೇಶದಿಂದ ಕೂಡಿದ ಮಕ್ಕಳಿಗಾಗಿ ವಿಶೇಷ ಸಂಭ್ರಮಾಚರಣೆಯ ಮೇಳವಾಗಿದೆ

ಎಂದು ಹರ್ಷೋಲ್ಲಾಸದಿಂದ ಕೂಡಿದ ಈ ವರ್ಣ ರಂಜಿತ ಉತ್ಸವವು ಮಕ್ಕಳಿಗೆ ಅಗತ್ಯವಾದ ತಿಳುವಳಿಕೆ, ಶಿಕ್ಷಣ, ಮಾಹಿತಿ ನೀಡುವ ಹಾಗೂ ರಾಶಿ ರಾಶಿ ವರ್ಣ ರಂಜಿತ ಪುಸ್ತಕಗಳು, ಪ್ರಾಣಿ ಪಕ್ಷಿಗಳು, ಬಣ್ಣ ಬಣ್ಣದ ಚಿತ್ರ ಪಟಗಳು, ಹಾಡು, ಸಂಗೀತ, ನೃತ್ಯ ಹೀಗೆ ಏನೆಲ್ಲಾ ಖುಷಿಯ ವಸ್ತುಗಳು ಒಂದೇ ಸೂರಿನಡಿ ದೊರಕಲಿರುವುದಾಗಿ, ಕಳೆದ ನಾಲ್ಕು ವರ್ಷಗಳಿಂದ ಆಚರಿಸುತ್ತಿದ್ದು, ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆ ಮಕ್ಕಳು ಭಾಗವಹಿಸುತ್ತಿರುವುದಾಗಿ ಮತ್ತು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಮಾಹಿತಿಗಳನ್ನು ನೀಡಿ



ಕಾರ್ಯಕ್ರಮಕ್ಕೆ ಒಟ್ಟಾರೆ ರೂ.70.00 ಲಕ್ಷಗಳು ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಪ್ರಾಯೋಜಕತ್ವ ಧನವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ.10,000/- (ರೂ. ಹತ್ತು ಸಾವಿರಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:– ಆಯುಕ್ತರ ದಿನಾಂಕ : 18–11–2010ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ. 50,000.00 ಸಹಾಯಧನ ಮಂಜೂರು ಮಾಡಲು ತೀರ್ಮಾನಿಸಿದೆ.**

**ಹೆಚ್ಚುವರಿ ವಿಷಯ**

## 16]. ವಿಷಯದ ಸಂಖ್ಯೆ :–ತೆಆಸ್ಥಾಸ/88/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)55/10–11 ದಿನಾಂಕ: 20–11–2010. ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಕೆ. ನಂದಕುಮಾರ್, ಕಾರ್ಯದರ್ಶಿಗಳು, ಕರ್ನಾಟಕ ವಾಲಿಬಾಲ್ ಸಂಸ್ಥೆ(ರಿ), ರೂಮ್ ನಂ. 2, ಶ್ರೀ ಕಂಠೀರವ ಒಳಾಂಗಣ ಕ್ರೀಡಾಗಣ, ಕಸ್ತೂರಬಾ ನಗರ, ಬೆಂಗಳೂರು – 560 001. ರವರು 'ಚಾಂಪಿಯನ್ ಶಿಪ್ ಫಾರ್ ಮೇಯರ್ಸ್ ಕಪ್' 33ನೇ ವರ್ಷದ ಸಬ್ ಜೂನಿಯರ್ಸ್ ರಾಷ್ಟ್ರೀಯ ವಾಲಿಬಾಲ್ ಸ್ಪರ್ಧೆಯನ್ನು ಆಯೋಜಿಸಿ ದಿನಾಂಕ 15–11–2010 ರಿಂದ 21–11–2010 ರ ವರೆವಿಗೆ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮಕ್ಕಾಗಿ ಪಾಲಿಕೆ ವತಿಯಿಂದ ಅನುದಾನವನ್ನು ಕೋರಿ ಪೂಜ್ಯ ಮಹಾಪೌರರಿಗೆ ನೀಡಿರುವ ಮನವಿಯಲ್ಲಿ **"ಪೂಜ್ಯ ಮಹಾಪೌರರು** ರೂ.10.00 **ಲಕ್ಷಗಳ ಹಣ ಬಿಡುಗಡೆ ಮಾಡುವಂತೆ ಸೂಚಿಸಿರುತ್ತಾರೆ".** ಪೂಜ್ಯ ಮಹಾಪೌರರ ಸೂಚನೆ ಮೇರೆಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ರೂ.10.00 ಲಕ್ಷಗಳ ಹಣ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಮಿತಿಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾತರುವ ರೂ.10.00 ಕೋಟಿಗಳ ಪೈಕಿ, ದಿನಾಂಕ 09–09–

2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ.176.50 ಲಕ್ಷಗಳ ಪೈಕಿ ರೂ.16.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಪ್ರಸ್ತಾವಿತ ಸಮಿತಿಗೆ ರೂ.10.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 20–11–2010ರ ಟಿಪ್ಪಣಿಯನ್ನು ಒಪ್ಪಿದೆ.**



## 17]. ವಿಷಯದ ಸಂಖ್ಯೆ :–ತೆಆಸ್ಥಾಸ/89/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)42/10–11 ದಿನಾಂಕ: 23–11–2010. ರಲ್ಲಿ ವಿವರಿಸಿರುವಂತೆ, ಶ್ರೀ.ಪಿ.ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ರವರು ಪತ್ರ ಬರೆದು ಪಾರಂಪರಿಕ

ಸಂಸ್ಕೃತಿ ಸೇವಾ ಸಮಿತಿಯ ವತಿಯಿಂದ ನವೆಂಬರ್ 17 ರಿಂದ ಡಿಸೆಂಬರ್ 1, 2010 ರವರೆಗೆ ನಡೆಯಲಿರುವ "ಗುಡಿಯ ಸಂಭ್ರಮ" ಬೆಂಗಳೂರು ದೇವಾಲಯಗಳ ಉತ್ಸವಕ್ಕಾಗಿ ಮಹಾನಗರ ಪಾಲಿಕೆಯಿಂದ ಪಿ–ಕೋಡ್ 2213 ರಲ್ಲಿ ಗುಡಿಯ ಹಾಗೂ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಮೀಸಲಿಟ್ಟಿರುವ ಅನುದಾನದಲ್ಲಿ ಪಾರಂಪರಿಕ ಸಂಸ್ಕೃತಿ ಸೇವಾ ಸಮಿತಿಗೆ ರೂ.15.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ. ಈ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಪಾರಂಪರಿಕ ಸಂಸ್ಕೃತಿ ಸೇವಾ ಸಮಿತಿ, ಹೆರಿಟೇಜ್ ನಂ.1, ಪುಟ್ಟಣ್ಣ ರಸ್ತೆ, ಚಿನ್ಮಯ ಅಪಾರ್ಟ್‌ಮೆಂಟ್ಸ್, ಬಸವನಗುಡಿ, ಬೆಂಗಳೂರು – 560 004 ರವರ ಪತ್ರ ಮತ್ತು ಕಾರ್ಯಕ್ರಮದ ಯೋಜನಾ ಪ್ರಸ್ತಾವನೆ ಲಗತ್ತಿಸಿದ್ದು, ಇದರಲ್ಲಿ ಸಂಸ್ಥೆಯನ್ನು ಕುರಿತಾದ ಪೀಠಿಕೆ, ಕಾರ್ಯಕ್ರಮದ ವಿವರಗಳು, ಕಾರ್ಯಕ್ರಮದಲ್ಲಿ ಭಾಗವಹಿಸುವ ಕಲಾವಿದರ ತಂಡಗಳ ಮಾಹಿತಿ, ಕಾರ್ಯಕ್ರಮದ ಅಂದಾಜು ವಿವರ, ಕಾರ್ಯಕ್ರಮದ ಉದ್ದೇಶ ಮತ್ತು ಸಂಸ್ಥೆಯ ಕಾರ್ಯಚಟುವಟಿಕೆಗಳ ಮಾಹಿತಿ ಹಾಗೂ ಸಂಸ್ಥೆಯ ಸಲಹಾ ಸಮಿತಿಯ ವಿವರಗಳನ್ನು ಒದಗಿಸಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಮಿತಿಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದಲ್ಲಿ 24. ಸಂಸ್ಕೃತಿ ಮತ್ತು ಕ್ರೀಡೆ ಲೆಕ್ಕಶೀರ್ಷಿಕೆಯಡಿ – ಕಡಲೆಕಾಯಿ ಪರಿಷೆ ಮತ್ತು ಗುಡಿಯ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು P2213 ಅಡಿ ನಿಗಧಿಪಡಿಸಿರುವ ರೂ.30.00 ಲಕ್ಷಗಳ ಪೈಕಿ ಪ್ರಸ್ತಾವಿತ ಸಮಿತಿಗೆ ರೂ.15.00 ಲಕ್ಷಗಳ (ಹದಿನೈದು ಲಕ್ಷಗಳು ಮಾತ್ರ) ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ : 23–11–2010ರ ಟಿಪ್ಪಣಿಯನ್ನು ಒಪ್ಪಿದೆ.**

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ